UNIVERSAL LIBRARY
OU_198463
UNIVERSAL LIBRARY

# ಪ್ರಗತಿ

ಅಥವಾ

# ಹಾಸ್ಯಯೋಜನ.

ಬೆಲೆ ೬ ಆಣೆ.

# ಪ್ರಗತಿ

ಅಥವಾ

# ದಾಸ್ಯವಿಮೋಚನ.

(ಒಂದು ಸಾಮಾಜಿಕ ಪ್ರಬಂಧ)

ಭಿಕಾಜಿ ಪರಶುರಾಮಪಂತ ಕಾಳೆ

ಇವರು ಬರೆದು,

ಆನಂದವನ-ಅಗಡಿಯ ಶ್ರೀ ಶೇಷಾಚಲ ಪ್ರಿಂಟಿಂಗ ಪ್ರೆಸ್ಸನಲ್ಲಿ

ಛಾಪಿಸಿ, ಅಲ್ಲಿಯೇ ಪ್ರಸಿದ್ಧ ಮಾಡಿದರು.

1919

ಬೆಲೆ ೭ ಆಣೆ.

# ಪ್ರಸ್ತಾವನೆ.

ಮಹಾರಾಷ್ಟ್ರ ಭಾಷೆಯವರಂತೆ ಇನ್ನುಳಿದ ಅನ್ಯ ಭಾಷೆಯವರಂತೆ ನಮ್ಮ ಕನ್ನಡಿಗರಲ್ಲಿ ಸ್ವತಂತ್ರ ವಿಚಾರದ ಪುಸ್ತಕಗಳನ್ನು ಬರೆಯುವವರು ಬಹು ಕಡಿಮೆ. ತಮಗೆ ಒಳಿತೆಂದು ಕಂಡುಬಂದ ಅನ್ಯ ಭಾಷೆಗಳ ಪುಸ್ತಕಗಳನ್ನು ಭಾಷಾಂತರಿಸುವವರೇ ಬಹಳ. ಇದು ಕನ್ನಡ ಲೇಖಕರಿಗೆ ಪೌರುಷಪ್ರಿಯತೆಯ ದೃಷ್ಟಿಯಿಂದ ಗೌಣವೆಂತಲೇ ಹೇಳಬಹುದು. ಪ್ರತಿಯೊಬ್ಬ ಕನ್ನಡ ಲೇಖಕನು ಶಕ್ತಿಯಿದ್ದಷ್ಟು ಮಟ್ಟಿಗೆ ತನ್ನ ಸ್ವತಂತ್ರವಿಚಾರ, ಕಲ್ಪಕತೆ, ರಸಿಕತೆ, ಯೋಜಕತೆಗಳನ್ನು ಉಪಯೋಗಿಸಿಕೊಂಡು ಪ್ರಬಂಧಗಳನ್ನಾಗಲಿ, ಕಾದಂಬರಿಗಳನ್ನಾಗಲಿ, ಚರಿತ್ರಗಳನ್ನಾಗಲಿ, ನಾಟಕಗಳನ್ನಾಗಲಿ, ಬೇರೆ ಪುಸ್ತಕಗಳನ್ನಾಗಲಿ ಬರೆಯತೊಡಗಿದರೆ ಕನ್ನಡ ಭಾಷಾಸುಂದರಿಯ ಅಲಂಕರಣವು ದಾ ಹಾ ಅನ್ನುವಷ್ಟರಲ್ಲಿ ಆಗುವದು. ಹಾಗು ಕನ್ನಡ ಲೇಖಕರ ಗೌರವವಾದರೂ ಹೆಚ್ಚುವದು. ಹೀಗೆ ಮಾಡದೆ ಅನ್ಯಭಾಷೆಯ ಪುಸ್ತಕಗಳನ್ನು ಅಕ್ಷರಶಃ ಭಾಷಾಂತರಿಸುತ್ತ ಉಚ್ಛಿಷ್ಟಭಕ್ಷಣವೆಂಬ ಕಲಂಕಕ್ಕೆ ಗುರಿಯಾಗುವದು ಸ್ವಾಭಿಮಾನಿಗಳಾದ ಕನ್ನಡಿಗರಿಗೆ ಸರಿಯಾದದ್ದಲ್ಲ. ತೇಜಸ್ವಿಯಾದ ಕನ್ನಡ ಲೇಖಕನು ಯಾವದೊಂದು ವಿಷಯವನ್ನು ಮೂಲ ಬಂಡವಲವನ್ನಾಗಿಟ್ಟುಕೊಂಡು ತನ್ನ ವಿವೇಚಕತೆಯ ಸಾಮರ್ಥ್ಯದಿಂದ ಅದನ್ನು ಬೇರೆ ಬೇರೆ ರೂಪಗಳಿಂದ ಮನೋಹರವಾಗಿ ಇದನ್ನು ಯೋಜಿಸುವದು ಗೌರವದ ಸಂಗತಿಯಾಗಿರುತ್ತದೆ, ಅಲ್ಲವೆ.

ನಮ್ಮ ಮಿತ್ರ ಶ್ರೀ [illegible] ಎಂಬುವರು ತಮ್ಮ ಸ್ವಂತ ಪರಿಶ್ರಮದಿಂದ ಪ್ರಸ್ತುತ ಪುಸ್ತಕವನ್ನು ಬರೆದದ್ದಕ್ಕಾಗಿ ನಮಗೆ ಬಹಳ ಆನಂದವಾಗಿರುತ್ತದೆ. ಅದರಲ್ಲಿ ಅವರು ತಮ್ಮ ಅನುಭವವನ್ನು ತೂಗಿನೋಡಿ ಅದನ್ನು ಯಾವ ಯಾವ ಸ್ಥಳಗಳಲ್ಲಿ ಹ್ಯಾಗೆ ಹ್ಯಾಗೆ ಉಪಯೋಗಿಸಿರುವರೆಂಬದನ್ನು ವಾಚಕರು ತಮ್ಮ ಅನುಭವಸಾಕ್ಷಿಯಾಗಿಯೇ ಕಂಡು ಹಿಡಿಯತಕ್ಕದ್ದು. ಪೌರುಷವು ಅರ್ಥಾತ್ ಸ್ವಾತಂತ್ರ್ಯವು ಪ್ರತಿಯೊಬ್ಬನಿಗೂ ಬೇಕಾದ ಸಂಗತಿಯಾದ್ದರಿಂದ ಅದನ್ನು ಸಂಪಾದಿಸಲಿಕ್ಕೆ ಹ್ಯಾಗೆ ನಡೆಯಬೇಕೆಂಬದನ್ನೇ ಈ ಚಿಕ್ಕ ಪುಸ್ತಕದಲ್ಲಿ ವಿವೇಚಿಸಿರುತ್ತದೆ. ಇಲ್ಲಿ ಸ್ವಾತಂತ್ರ್ಯವೆಂದರೆ ಗುರು ಹಿರಿಯರ ಹಂಗುತೊರೆದು ಉಚ್ಛೃಂಖಲ ವೃತ್ತಿಯಿಂದ ನಡೆಯುವದೆಂದು ಮಾತ್ರ ಅರ್ಥಕ್ಕೆ ಅನರ್ಥಮಾಡಿಕೊಳ್ಳಬಾರದು.

II

ಭಾಷಾಂತರಿಸಿದ ಪುಸ್ತಕಕ್ಕಿಂತ ಸ್ವತಂತ್ರವಾಗಿ ಬರೆದ ಪುಸ್ತಕದ ಯೋಗ್ಯತೆಯು ಹೆಚ್ಚಿನದೆಂದು ಹೇಳಲಾಗುವದು, ಯಾಕಂದರೆ ಅನುಭವಜನ್ಯ ಹಾಗು ನಿರ್ಧಾರಯುಕ್ತವಾದ ಸಂಗತಿಗಳು ಅದರಲ್ಲಿ ವಿವರಿಸಲ್ಪಟ್ಟಿರುತ್ತವೆ. ಒಂದು ವ್ಯಕ್ತಿಯ ನಿರ್ಧಾರದ ಅಭಿಪ್ರಾಯಗಳ ವಾಚನದಿಂದಲೇ ವಾಚಕರಲ್ಲಿ ಏನಾದರೂ ಹೊಸ ಚೈತನ್ಯವು ಸಂಚರಿಸಿದರೆ ಸಂಚರಿಸಬೇಕು. ಈ ಬಗೆಯ ವಿಚಾರಕ್ಕೆ, ಹೊಸ ಚೈತನ್ಯಕ್ಕೆ ಪ್ರಸ್ತುತದ ಪುಸ್ತಕದಿಂದ ಬಹುಮಟ್ಟಿಗೆ ಸಹಾಯವಾಗುವದು, ಮನುಷ್ಯನಿಗೆ ದಾಸ್ಯವೃತ್ತಿಯು ಅಂದರೆ ಸರ್ವಸ್ವೀ ಒಬ್ಬರ ಆಧೀನದಲ್ಲಿರುವದು ಅತ್ಯಂತ ಹೇಯವಾಗಿರುವದು, ಆದ್ದರಿಂದ ಆ ಪರಾಧೀನತೆಯನ್ನು ಕ್ರಮಕ್ರಮವಾಗಿಯಾದರೂ ಕಡಿಮೆಮಾಡಿಕೊಳ್ಳುತ್ತ ಹೋಗುವದು ಪ್ರಗತಿಯ ಲಕ್ಷಣವು, ಪ್ರಗತಿಯನ್ನು ಇಚ್ಛಿಸುವವರು ಇದರಲ್ಲಿ ವಿವೇಚಿಸಿದ ಎಲ್ಲ ಸಂಗತಿಗಳನ್ನು ಚರ್ಚಿಸಿ ಹೊಸ-ಹೊಸ ಸಂಗತಿಗಳನ್ನು ಕಂಡು ಹಿಡಿಯಲೆತ್ನಿಸಬೇಕು, ಅಂದರೆ ಲೇಖಕನ ಶ್ರಮಸಾಫಲ್ಯವಾಗುವದು.

ತಮ್ಮ ವಿಚಾರಗಳು ಬಹುಮಾನ್ಯವಾಗಲಿಕ್ಕಿಲ್ಲ. ಸರ್ವಮಾನ್ಯವಾಗಲಿಕ್ಕಿಲ್ಲ, ಎಂಬ ಕಾಲ್ಪನಿಕ ಅಂಜಿಕೆಯಿಂದ ನಮ್ಮ ಕನ್ನಡಿಗರು ಸ್ವತಂತ್ರ ಪುಸ್ತಕಗಳನ್ನು ಬರೆಯುವ ಸಾಹಸಮಾಡುವದಿಲ್ಲ, ಆದರೆ ಒಂದು ವ್ಯಕ್ತಿಯ ಅನುಭವಕ್ಕೆ ಬಂದ ಸಂಗತಿಗಳು ಹಲವು ವ್ಯಕ್ತಿಗಳ ಅನುಭವಕ್ಕೆ ಬಂದೇತೀರಬೇಕಾಗುವದು ಸ್ವಾಭಾವಿಕವು ಇರಲಿ; ಒಟ್ಟಿನಮೇಲೆ ಹೇಳತಕ್ಕದ್ದೆಂದರೆ ಇಹಪರಗಳಲ್ಲಿ ಸೌಖ್ಯವನ್ನೂ, ಮಾನಕೀರ್ತಿಗಳನ್ನೂ ಹೊಂದಲಿಚ್ಛಿಸುವವನು ಇದ್ದ ಸ್ಥಿತಿಯಲ್ಲಿ ಕಾಲಕಳೆಯದ ತನ್ನ ಸ್ಥಿತಿಯ ಅಭ್ಯುದಯವಾಗುವಂತೆ ಆಚರಣೆಯನ್ನಿಡಬೇಕು. ಇದೇ ದಾಸ್ಯವಿಮೋಚನೆಯುತರುಣೋಪಾಯವು''

ಆನಂದವನ, ತಾ|| ೫ ೬-೧೯.

ಕರ್ಪೂರ.

# ಪ್ರಗತಿ

ಅಥವಾ

# ದಾಸ್ಯವಿಮೋಚನ.

## ಉಪೋದ್ಘಾತ.

ಲೋಕದಲ್ಲಿ ಪ್ರತಿಯೊಂದು ವಸ್ತುವು ಕ್ಷಣಶಃ ಪ್ರಗತಿಯನ್ನು ಹೊಂದುತ್ತಲಿದೆ. ಭೂಮಿಯಂಥ ಅತಿದೊಡ್ಡ ಗೋಲವೂ, ನೊರಜಿನಂಥ ತೀರ ಕ್ಷುದ್ರಪ್ರಾಣಿಯೂ ಕ್ರಮೇಣ ಪ್ರಗತಿಹೊಂದಿವೆ. ಎಷ್ಟೋ ವರ್ಷಗಳ ಪೂರ್ವದಲ್ಲಿ ರಸರೂಪದಲ್ಲಿ ಕಾದು ಪ್ರಕಾಶಗೊಂಡಿದ್ದ ಭೂಗೋಲವು, ಪ್ರಗತಿಯಿಂದ ತಣ್ಣಗಾಗಿ ಘನರೂಪ ತಾಳಿ, ವಿವಿಧದ ಘನ, ಪ್ರವಾಹಿ, ವಾಯುರೂಪಗಳಿಂದ ಯುಕ್ತವಾಗಿ ಮನುಷ್ಯ ಮೊದಲಾದ ಪ್ರಾಣಿಗಳ ವಸತಿಗೆ ತಕ್ಕದ್ದಾಗಿದೆ. ಇದರಂತೆಯೇ ಪ್ರಾಣಿಶಾಸ್ತ್ರದಲ್ಲಿ ವಿವರಿಸಿದಂತೆ ಮೀನವು ಪ್ರಗತಿಯನ್ನು ಹೊಂದಿ ಕಪ್ಪೆಯ, ಮಂಗನ, ಮನುಷ್ಯನ ರೂಪವನ್ನು ಹೊಂದಿರುವದು. ಆದರೆ ಭೂಮಿ, ಮೀನ, ಕಪ್ಪೆ, ಮಂಗ ಇವುಗಳ ಪ್ರಗತಿಯು ಕೃತ್ರಿಮವಾಗಿರುವದಿಲ್ಲ; ಅದು ಸೃಷ್ಟಿನಿಯಮಕ್ಕನುಸರಿಸಿ ತನ್ನಿಂದತಾನೇ ಆಗಿರುವದರಿಂದ ನೈಸರ್ಗಿಕಪ್ರಗತಿಯಾಗಿದೆ. ಸೃಷ್ಟಿನಿಯಮಗಳನ್ನು ಅನುಸರಿಸಿನಡೆಯುವ ಅಚೇತನ ಹಾಗು ಸಚೇತನಗಳ ಪ್ರಗತಿಯು ನೈಸರ್ಗಿಕವಾಗಿಯೇ ಆಗತಕ್ಕದ್ದು. ಅವುಗಳ ಪ್ರಗತಿಗೆ ಕೃತ್ರಿಮಉಪಾಯಗಳ ಯೋಜನೆಯು ಅವಶ್ಯಕತೆಯಿಲ್ಲ. ಆದರೆ ಯಾವ ಪ್ರಾಣಿಗಳು ಸೃಷ್ಟಿನಿಯಮಕ್ಕೆ ವಿರೋಧವಾಗಿ ನಡೆಯುವವೋ, ನಡೆಯಲುಯತ್ನಿಸುವವೋ, ಅವುಗಳ ಪ್ರಗತಿಯನ್ನು ಕೃತ್ರಿಮಉಪಾಯಗಳಿಂದ ಮಾಡುವದು ಉಕ್ತವಾಗಿದೆ. ಈ ಪ್ರಗತಿಯು ನೈಸರ್ಗಿಕದ ಮಾನದಿಂದ ಹೋಲಿಸಿ ನೋಡಿದರೆ ನಿಜವಾದ

ಪ್ರಗತಿಯಾಗಿರದಿದ್ದರೂ, ಮನುಷ್ಯನ ವಿಚಾರಸರಣಿಗನುಸರಿಸಿ ಯೋಗ್ಯವಾಗಿರುವದು.

ಪ್ರಗತಿಹೊಂದೋಣವೆಂದರೆ, ಇದ್ದ ಸ್ಥಿತಿಯಿಂದ ಅಂತರಿಸುತ್ತ ಕೀಳುಸ್ಥಿತಿಯನ್ನು ಬಿಟ್ಟು ಉತ್ತಮಪದವನ್ನು ಏರೋಣವು. ಪ್ರಗತಿಹೊಂದದ ಸ್ಥಿತಿಗೆ ಕೀಳು ಅಥವಾ ದಾಸ್ಯಸ್ಥಿತಿಯೆಂತಲೂ, ಉತ್ತಮಪದವೇರಿದ ಸ್ಥಿತಿಗೆ ಪ್ರಗತಿ ಅಥವಾ ದಾಸ್ಯವಿಮೋಚನಸ್ಥಿತಿಯೆಂತಲೂ ನಿರ್ಬಾಧವಾಗಿ ಹೇಳಬಹುದು. ಮೇಲೆ ಹೇಳಿದಂತೆ ವಿೂನವು ಪ್ರಗತಿಹೊಂದದೆಯಿದ್ದಾಗ ಕೀಳು-ದಾಸ್ಯಸ್ಥಿತಿಯಲ್ಲಿ ಇದ್ದು, ಅದು ಪ್ರಗತಿಪಥವನ್ನು ಕ್ರಮಕ್ರಮಿಸಿದಂತೆ ಪ್ರಗತಿ-ದಾಸ್ಯವಿಮೋಚನ ಸ್ಥಿತಿಯನ್ನು ಹೊಂದಿರುವದು. ದಡ್ಡನು ಪಂಡಿತನಾಗುವದೂ, ಮೂರ್ಖನು ವಿವೇಕಿಯಾಗುವದೂ, ಹೇಡಿಯು ಪ್ರಸಿದ್ಧ ರಣಪಂಡಿತನಾಗುವದೂ, ಅಶಕ್ತನು ಸಶಕ್ತನಾಗುವದೂ, ಅಳುಬುರಕನು ಧೈರ್ಯಶಾಲಿಯಾಗುವದೂ, ಕಳ್ಳನು ನೀತಿಶಾಸ್ತ್ರಬೋಧಕನಾಗುವದೂ, ದರಿದ್ರನು ಘನಶ್ರೀಮಂತನಾಗುವದೂ, ಕೂಲಿಯವನು ಯಜಮಾನನಾಗುವದೂ, ನೌಕರನು ಪ್ರಖ್ಯಾತ ಉದ್ಯೋಗಸ್ಥನಾಗುವದೂ, ಜಾರಿಣಿಯು ಪತಿವ್ರತಾಶಿರೋಮಣಿಯಾಗುವದೂ ಪ್ರಗತಿ ಅಥವಾ ದಾಸ್ಯವಿಮೋಚನದಿಂದಲೇ. ಪ್ರಗತಿಪಥವನ್ನು ಕ್ರಮಿಸಹತ್ತಿದರೆ ಮನುಷ್ಯನಲ್ಲಿ ನಿಜವಾದ ಮನುಷ್ಯತ್ವವು ಕ್ರಮೇಣಬರತೊಡಗುವದು. ಪೂರ್ವಜನ್ಮ ಸಂಸ್ಕಾರದಿಂದ ನಮ್ಮಲ್ಲಿಯ ಎಷ್ಟೋ ಜನರು ಹುಟ್ಟು ಪ್ರಗತಿಗಾಮಿಗಳಾದ್ದರಿಂದ ಅವರು ಬಾಲ್ಯದಲ್ಲಿಯೇ ಮನುಷ್ಯತ್ವವನ್ನು ಹೊಂದಿ, ತಮ್ಮ ಆ ಮಾರ್ಗದ ಶುದ್ಧಾಚರಣೆಯಿಂದ ಲೋಕವಂದ್ಯರಾಗುವರು. ಶ್ರೀಶಂಕರಾಚಾರ್ಯ, ಶ್ರೀಮಧ್ವಾಚಾರ್ಯ, ಶ್ರೀರಾಮಾನುಜಾಚಾರ್ಯ, ಏಸೂಕ್ರಿಸ್ತ, ಮಹಮ್ಮದ ಪೈಗಂಬರ, ಬುದ್ಧದೇವ, ಶ್ರೀಸಮರ್ಥರಾಮದಾಸ, ಶ್ರೀಶಿವಾಜಿಮಹಾರಾಜ, ಶ್ರೀಟೇಂಬೇ ಮಹಾರಾಜ, ಶ್ರೀ ಶೇಷಾಚಲ ಸಾಧುಗಳು, ಮಹಾತ್ಮಾಗಾಂಧೀ, ಶ್ರೀಯುತ ಟಿಳಕ ಮೊದಲಾದವರು ಹುಟ್ಟು ಪ್ರಗತಿಗಾಮಿಗಳಾಗಿ

ದ್ದಾರೆ. ಇವರ ಶೀಲವೇ ಪ್ರಗತಿಮಾರ್ಗದ ದ್ಯೋತಕವಾಗಿದೆ.

ಆದರೆ ಮಹಾನುಭಾವರ ಈ ಪ್ರಗತಿಮಾರ್ಗವು ದುರಭಿಮಾನಿಗಳೂ, ಲೇಶವೂ, ಮನುಷ್ಯತ್ವವಿಲ್ಲದ ದ್ವಿಪಾದಪಶುಗಳೂ ಆದ ನಮಗೆ ಹ್ಯಾಗೆ ಗೋಚರವಾಗಬೇಕು? "ದೊಡ್ಡಸ್ತಿಕೆಬೇಕು, ಕಷ್ಟಪಡಲಿಕ್ಕೆ ಬೇಡ" ಎಂಬಂತೆ ನಾವು ಲೋಕದಲ್ಲಿಯು ಸರ್ವಾಗ್ರಗಣ್ಯತ್ವವನ್ನು ಬಯಸಿ, ಇಡಿ ಆಯುಷ್ಯವನ್ನು ದುಂದುಗಾರಿಕೆಯಲ್ಲಿಯೂ, ಹೀನತರದ ಆಚಾರಗಳಲ್ಲಿಯೂ ಕಳೆಯುವೆವು. ಇದರಿಂದ ನಮ್ಮ ಬದುಕೆಯು ಕೊನೆಗಾಣುವದೊತ್ತಟ್ಟಿಗೇ ಉಳಿದು, ಹೊಟ್ಟೆಬಟ್ಟೆಗಾಗಿಯೂ, ರೋಗಾದಿಗಳ ನಿವಾರಣಕ್ಕಾಗಿಯೂ, ಧನಾರ್ಜನಕ್ಕಾಗಿಯೂ ನಾವು ಯಾವಾಗಲೂ ಪರರ ದಾಸ್ಯತ್ವವನ್ನು ವಹಿಸಬೇಕಾಗುವದು. ಆದರೆ ಆ ದಾಸ್ಯತ್ವವನ್ನಾದರೂ ನಾವು ಸಮಾಧಾನದಿಂದ ವಹಿಸಿ ನಡೆದರೆ, ಆ ಸ್ಥಿತಿಯಲ್ಲಿಯೂ ನಮಗೆ ಕೆಲಮಟ್ಟಿಗೆ ಸುಖವೆನಿಸಬಹುದು. ಸ್ವಭಾವತಃ ದುಷ್ಟರೂ, ಕೀಳರೂ, ಹೇಡಿಗಳೂ, ಪರರ ಔನ್ನತ್ಯವನ್ನು ಕಂಡು ಅಸೂಯಪಡುವವರೂ ಆದ ನಮ್ಮಿಂದ ಆ ದಾಸವೃತ್ತಿಯನ್ನು ಸಹಿಸಲಾಗುವದಿಲ್ಲ. ಅದಕ್ಕಾಗಿ ನಾವು ಹಲವು ಹೇಯಪ್ರಕಾರದಿಂದ ಮುಂದಿಯೆ ಗೋಣು ಮುರಿಯಲು ಪ್ರಯತ್ನಿಸಿ, ಕಡೆಗೆ ಅದರಿಂದಲೂ ದಾಸ್ಯವಿಮೋಚಿತವಾಗದಿರಲು, ಮುಂದುಗಾಣದಾಗುವೆವು. ಆದ್ದರಿಂದ ಮನುಷ್ಯನು ಕುಹಕತನದಿಂದ ಪ್ರಗತಿಯೆನ್ನು ಹೊಂದಲು ಸರ್ವಥಾ ಹವಣಿಸಬಾರದು. ಪ್ರಸಂಗವಶಾತ್ ಈ ದುಷ್ಟಮಾರ್ಗದಿಂದ ಪ್ರಗತಿಯಾದಂತೆ ತೋರಿದರೂ ಅದು ನಿಜವಾದ ಪ್ರಗತಿಯಾಗಿರದೆ, ತನ್ನನ್ನು ಮತ್ತಿಷ್ಟು ಅಧೋಗತಿಯನ್ನು ಹೊಂದಿಸುವ ಚಿಹ್ನವಾಗಿದೆಯೆಂದು ಅರಿತುಕೊಳ್ಳಬೇಕು.

ಪ್ರಗತಿಯನ್ನು ಪಡೆದು ದಾಸ್ಯವಿಮೋಚಿತನಾಗುವ ಇಚ್ಛೆಯುಳ್ಳ ಮನುಷ್ಯನು ಪ್ರಗತಿಪಥಗಳಾದ ಕೆಳಗಿನ ಉಪಾಯಗಳನ್ನು ಕಂಡು ಪ್ರಯತ್ನಪೂರ್ವಕ ಅದರಂತೆ ನಡೆಯಲು ಬದ್ಧನಾಗಬೇಕು. ಇದರಿಂದ ಪ್ರಗತಿಯು ನಿಶ್ಚಯವಾಗಿ ಆಗುವದು.

## ೧ನೆಯ ಖಂಡ—ಸ್ವಾತಂತ್ರ್ಯಪ್ರೀತಿ.

ಪ್ರಗತಿಯನ್ನು ಹೊಂದಲಿಚ್ಛಿಸುವವನಲ್ಲಿ "ಸ್ವಾತಂತ್ರ್ಯಪ್ರೀತಿ" ಎಂಬ ಗುಣವು ಅತ್ಯವಶ್ಯವು. ಇದಿ ಆಯುಷ್ಯವನ್ನು ನಿರಾಶೆಯಿಂದ ಮುಕ್ತಮಾಡಲಿಕ್ಕೂ, ಚಿಂತಾರಹಿತಮಾಡಲಿಕ್ಕೂ, ದುಃಖಗಳಿಂದ ವಿಮುಖಮಾಡಲಿಕ್ಕೂ ಸ್ವಾತಂತ್ರ್ಯಪ್ರೀತಿಯು ಮನುಷ್ಯನಿಗೆ ಸಹಾಯಕವಾಗುವದು. ಆರಂಭದಿಂದಲೇ ಸ್ವಾತಂತ್ರ್ಯಪ್ರೀತಿಯುಳ್ಳವನಿಗೆ ಯಾವದುಃಖಸಂಕಟಗಳಲ್ಲಿ ಸಿಲುಕುವ ಪ್ರಸಂಗವೇ ಬರುವದಿಲ್ಲ.

ಸ್ವಾತಂತ್ರ್ಯವಿಲ್ಲದ ಮನುಷ್ಯನು ಒಂದಿಲ್ಲೊಂದು ರೀತಿಯಿಂದ ಪರರಿಗೆ ದಾಸನಾಗಿರಬೇಕಾಗುವದು ಸಹಜವು. ಅಂಥ ಮನುಷ್ಯನು ಸನ್ಮಾನನೀಯ ಅಮಲದಾರನಿದ್ದರೂ ಅಷ್ಟೇ; ಯಃಕಶ್ಚಿತ ಕೂಲಿಕಾರನಿದ್ದರೂ ಅಷ್ಟೇ. ಯಾವನಲ್ಲಿ ವಿಚಾರಸ್ವತಂತ್ರವಿಲ್ಲವೋ, ಆಚಾರ ಸ್ವತಂತ್ರವಿಲ್ಲವೋ ಅವನು ಮನುಷ್ಯನಾಗಿ ಹುಟ್ಟಿದ್ದು ನಿರರ್ಥಕವೆಂದು ಹೇಳಬಹುದು. ಯಾಕಂದರೆ, ಲೋಕದಲ್ಲಿಯ ಪ್ರತಿಯೊಂದು ಅಚೇತನ ಹಾಗು ಸಚೇತನ ವಸ್ತುಗಳು ಸ್ವಭಾವತಃ ಸ್ವತಂತ್ರವಾಗಿಯೇ ಇರುವವು. ಅವುಗಳ ಉತ್ಪತ್ತಿಯು ಸ್ವತಂತ್ರ, ಸ್ವರೂಪಾದಿಭೇದಗಳು ಸ್ವತಂತ್ರ ಕಾರ್ಯಕಾರಣಭಾವಗಳು ಸ್ವತಂತ್ರ, ಹೀಗಿರಲು ಮನುಷ್ಯನಂಥ ಕೇವಲ ಬುದ್ಧಿಮಾನಪ್ರಾಣಿಯು ಅಸ್ವತಂತ್ರನಾಗಿ ಪರರ ದಾಸ್ಯತ್ವವನ್ನು ವಹಿಸಲಿಕ್ಕೆ ಕಾರಣವೇನಿರಬಹುದೆಂಬದು ವಿಚಾರಣೀಯವಾಗಿದೆ. ಆದರೆ ಮನುಷ್ಯನು ಪರಾಧೀನ-ಅಸ್ವತಂತ್ರನಾಗಲಿಕ್ಕೆ ಅವನಲ್ಲಿಯ ಸ್ವಾತಂತ್ರ್ಯಪ್ರೀತಿಯು ನಷ್ಟವಾದದ್ದೇ ಕಾರಣವಾಗಿದೆ ಎಂದು ಹೇಳಬಹುದು.

"ಪ್ರಾರಂಭದಿಂದಲೇ ತಾನೊಬ್ಬ ದೊಡ್ಡ ಸಂಸ್ಥೆಯ ಯಜಮಾನನು ಇಲ್ಲವೆ ಅರಸು, ಅಥವಾ ಧರ್ಮಾಧಿಕಾರಿಯು ಆಗಬೇಕು, ಎಂಬ ಕಾಲ್ಪನಿಕ ವಿಚಾರಗಳಿಂದಲೇ ಯಾಕಾಗಲೊಲ್ಲದು; ಯಾವನು ತನ್ನ ಜೀವನಾರ್ಥಕಲಹವನ್ನು ಸಾಗಿಸಲು ಪ್ರಯತ್ನಿಸದೆ, ಕೇವಲ ನಿರುದ್ಯೋಗವಾಗಿ ಹ್ಯಾಂಗಾದರೂ ಜೀವನಾರ್ಥವನ್ನು ದೊರಕಿಸಲು

ಯತ್ನಿಸುವನೋ ಅವನಿಗೆ ಒಂದು ಪೈಯನ್ನು ಕೂಡ ಸಹಾಯಮಾಡುವ ಇಚ್ಛೆಯು ನನಗಾಗುವದಿಲ್ಲ” ಎಂದು ಅಂಡ್ರ್ಯುಕಾರ್ನೆಗಿ ಎಂಬ ಪ್ರಖ್ಯಾತ ಅಮೇರಿಕನ್ ಕೋಟ್ಯಾಧೀಶನು ಒಂದು ಪ್ರಸಂಗದಲ್ಲಿ ಹೇಳಿರುವನು. ಈ ಉದಾರಧೀಮಂತನು ಎಪ್ಪತ್ತು ಎಂಟುಕೋಟಿ ರೂಪಾಯಿಗಳನ್ನು ಬರೇ ಪುಸ್ತಕಶಾಲೆಗಳನ್ನು ಕಟ್ಟಿಸುವದರ ಸಲುವಾಗಿ ಖರ್ಚುಮಾಡಿರುವನು! ಇವನು ತನ್ನ ನೌಕರರಿಗೆ ಮೇಲಿಂದಮೇಲೆ ಬೋಧಿಸುವದೇನಂದರೆ, “ನೀವು ಹೆಚ್ಚು ಪಗಾರದ ಇಲ್ಲವೆ ದೊಡ್ಡಹುದ್ದೆಯ ಕೆಲಸುಗಾರರಾಗುವ ಇಚ್ಛೆಯಿಂದ ನನ್ನಲ್ಲಿ ದುಡಿಯಬೇಡಿರಿ. ಕಲ್ಪನಾಸೃಷ್ಟಿಯಲ್ಲಿಯೇ ಯಾಕಾಗಲೊಲ್ಲದು ನೀವು ನನ್ನಂಥ ಇಲ್ಲವೆ ನನ್ನಗಿಂತಲೂ ವಿಖ್ಯಾತ ಉದ್ಯೋಗಸ್ಥರಾಗಬೇಕೆಂಬ ವಿಚಾರದಿಂದ ಪ್ರೇರಿತರಾಗಿ ಉದ್ಯೋಗತತ್ಪರರಾಗಿರಿ. ಈ ಸ್ವತಂತ್ರವಿಚಾರದಿಂದ ನಿಮ್ಮ ಉಚ್ಛ್ರಾಯವು ಬಹುಬೇಗ ಆಗುವದರಲ್ಲಿ ಸಂಶಯವಿಲ್ಲ.”

ಈ ಮೇಲಿನ ನಮ್ಮ ಸನ್ಮಾನನೀಯ ಅಮೇರಿಕನ್ ಕೋಟ್ಯಾಧೀಶರ ಅರ್ಥಪೂರ್ಣವಾದ ಸ್ವಾತಂತ್ರ್ಯಪ್ರೀತಿಯ ವಿಷಯದ ಉದ್ಗಾರದಿಂದ ಒಂದು ಮಾತು ಸಿದ್ಧವಾಗುತ್ತದೆ. ಅದು ಯಾವದೆಂದರೆ, ಮನುಷ್ಯನು ಹುಟ್ಟಿದಂದಿನಿಂದ ಸಾಯುವವರೆಗೆ ಯಾವಾಗಲೂ ಉದ್ಯೋಗಿಯಾಗಿರಬೇಕಲ್ಲದೆ ಆಲಸ್ಯನೂ, ನಿರುದ್ಯೋಗಿಯೂ, ಹೇಡಿಯೂ, ಇದ್ದ ಸ್ಥಿತಿಯಲ್ಲಿ ಕೊಳೆಯುವವನೂ ಆಗಬಾರದು. ನಾನು ಇಂಥಾದೊಂದು ಕೆಲಸಮಾಡಿದರೆ ಕೃತಕೃತ್ಯನಾದೆನೆಂದು ಯಾರೂ ಎಂದೂ ಭಾವಿಸಬಾರದು. ಮನುಷ್ಯನ ಅಂತಿಮಧ್ಯೇಯವಾದ ಮೋಕ್ಷಪ್ರಾಪ್ತಿಯಾಗುವವರೆಗೆ ಮನುಷ್ಯನು ತನ್ನ ಯೋಗ್ಯತೆಯಂತೆ, ಸದಸದ್ವಿವೇಕದಂತೆ ಪ್ರತಿಕ್ಷಣಕ್ಕೂ ಪ್ರಗತಿಯನ್ನು ಪಡೆಯುತ್ತಿರಬೇಕು: ಶಾರೀರಿಕದಾರ್ಢ್ಯಕ್ಕಿಂತಲೂ ಮನೋದಾರ್ಢ್ಯವು ಮಹತ್ವದ್ದಿರುವದರಿಂದ ಪರಮಶ್ರೇಯಸ್ಕರವಾದ ಮನೋದಾರ್ಢ್ಯವೇ ಸ್ವಾತಂತ್ರ್ಯದ ವೃಕ್ಷವೆಂದು ತಿಳಿಯಲ್ಪಡುವದು:

ಇಂಥ ಸ್ವತಂತ್ರವಿಚಾರ ಪ್ರೇರಿತವಾದ ರಾಷ್ಟ್ರವು ಧನ್ಯವು!

ಅಲ್ಲಿಯ ಜನರೇ ಮಾನಾರ್ಹರು!! ಆದರೆ ಭಾರತೀಯರಾದ ನಾವು, ಸದ್ಯಕ್ಕೆ ಸ್ವಾತಂತ್ರ್ಯಹೀನರಾದ್ದರಿಂದ, ಈ ವಿಚಾರಗಳನ್ನು ತಿಳಿಯಲು ಮುಂದಿಯ ಮೋರೆಯನ್ನು ನೋಡುವ ಪ್ರಸಂಗಬಂದದೆ. ನಮ್ಮ ಪೂರ್ವಜರು ಸ್ವಾತಂತ್ರ್ಯದ ಪರಮಭೋಕ್ತಾರರೂ, ಸ್ವಾತಂತ್ರ್ಯದ ಮೂರ್ತಿಗಳೂ ಆಗಿದ್ದರು. ಅವರು ಸ್ವತಂತ್ರ ಮನಸ್ಕರಾದ್ದರಿಂದಲೇ ಅವರ ಆಗಿನ ಕೃತಿಗಳಿಂದ ಇಡಿಜಗತ್ತು ಈಗಲೂ ನಡುಗುತ್ತಿರುವದು. ಅವರ ಆಚಾರಸ್ವಾತಂತ್ರ್ಯ, ವಿಚಾರಸ್ವಾತಂತ್ರ್ಯಗಳು ಅನುಕರಣೀಯಗಳಾಗಿರುವವು. "ಉತ್ತಮಶೇತಿ, ಮಧ್ಯಮಬೇಪಾರ, ಕನಿಷ್ಟಚಾಕರಿ" ಎಂಬ ನಾಣ್ಣುಡಿಯ ಗರ್ಭಿತಾರ್ಥವು ಸ್ವಾತಂತ್ರ್ಯ ಶಬ್ದದ ವಿವರಣೆಯನ್ನು ಚೆನ್ನಾಗಿ ಮಾಡುತ್ತದೆ. ಈ ನಾಣ್ಣುಡಿಯಲ್ಲಿ ಕೇವಲ ಸ್ವತಂತ್ರನಾಗಿ ಹೊಲಮಾಡುವದೂ, ಸ್ವತಂತ್ರ-ಪಾರತಂತ್ರ್ಯಗಳ ಮಿಶ್ರಣದಿಂದ ವ್ಯಾಪಾರಮಾಡುವದೂ, ಕೇವಲ ಸ್ವಾತಂತ್ರ್ಯಹೀನನಾಗಿ ನೌಕರಿಮಾಡುವದೂ ಎಂದು ಹೇಳಿದೆ. ಸಾವಿರಾರು ರೂಪಾಯಿತಲಬಿನ ದೊಡ್ಡ ಹುದ್ದೆಯ ನೌಕರನಿದ್ದರೂ, ಅವನು ಸ್ವಾತಂತ್ರ್ಯಹೀನನೇಸರಿ. ಅವನಿಗೆ ಒಬ್ಬ ಬಡ ರಯತನ ಸ್ವಾತಂತ್ರ್ಯಸುಖವು ಎಂದಿಗೂ ಪ್ರಾಪ್ತವಾಗಲಾರದು. ಬಹು ದಿವಸಗಳವರೆಗೆ ಪರರ ಚಾಕರಿಯಲ್ಲಿದ್ದದರಿಂದ ಸ್ವಾತಂತ್ರ್ಯಮೊದಲಾದ ಶ್ರೇಷ್ಠ ಗುಣಗಳು ಮನುಷ್ಯನಲ್ಲಿ ಲೋಪವಾಗುವವು. ಶೋಧಕ ಹಾಗು ಕುಶಾಗ್ರಬುದ್ಧಿಯು ಸ್ವತಂತ್ರಮನುಷ್ಯನಿಗಿಂತ ಪರಾಧೀನ-ನೌಕರ ಮನುಷ್ಯನಲ್ಲಿ ವಿಕಸಿತವಾಗುವದು ಕಡಿಮೆ. ತನ್ನ ಸ್ವಂತದ ಕೆಲಸದಸಲುವಾಗಿ ಉಪಯೋಗಿಸುವಷ್ಟು ಬುದ್ಧಿ, ಶ್ರಮ, ಯುಕ್ತಿಗಳನ್ನು ಮುಂದಿಯ ಕೆಲಸಕ್ಕೆ ಯಾರೂ ಉಪಯೋಗಿಸುವದಿಲ್ಲವೆಂಬದು ಸಿದ್ಧಾಂತವು. ಎಂಥ ಪ್ರಾಮಾಣಿಕನೌಕರನಿಂದಾದರೂ ಈ ಸರ್ವಸಾಧಾರಣನಿಯಮವನ್ನು ಉಲ್ಲಂಘಿಸಲಿಕ್ಕಾಗುವದಿಲ್ಲ. ಹೆರವರ ನೌಕರಿಯಲ್ಲಿರುವಾಗ ಯಜಮಾನನಿಗೆ ಪ್ರಾಪ್ತವಾಗುವಂಥ ಕಷ್ಟನಷ್ಟಗಳು ನೌಕರನಿಗೆ ಬರುವ ಸಂಭವವು ಕಡಿಮೆಯಾದ್ದರಿಂದ

ಪ್ರತಿಯೊಂದು ಕಠಿಣಪ್ರಸಂಗಕ್ಕೆ ಎದೆಗೊಟ್ಟುಗೊಡುವೆನೆಂಬ ಆತ್ಮ ವಿಶ್ವಾಸವು ಆ ನೌಕರನಲ್ಲಿ ಪ್ರಾಪ್ತವಾಗಲಾರದು. ಸ್ವಂತದಸಲು ವಾಗಿ ನಾವು ಬೇಕಾದ್ದನ್ನು ಮಾಡಲಿಕ್ಕೂ, ಬೇಕಾದಲ್ಲಿಗೆ ಹೋಗ ಲಿಕ್ಕೂ, ಬೇಕಾದಷ್ಟು ಕಷ್ಟಪಡಲಿಕ್ಕೂ, ಸಿಕ್ಕ ಅಲ್ಪ ಪ್ರತಿಫಲ ದಲ್ಲಿ ಕೂಡ ಸಂತೋಷಪಡಲಿಕ್ಕೂ ಸಿದ್ಧರಾಗಿರುತ್ತೇವೆ. ಆದರೆ ನಾವು ನೌಕರರಿರುವಾಗ ಸ್ಥಿತಿಯು ಇದಕ್ಕೆ ಕೇವಲ ವಿಪರೀತ ವಾಗುವದು. ನಾವು ಪರರ ನೌಕರರಿದ್ದರೂ, ಅವರ ಪ್ರತಿಯೊಂದು ಕೃತಿಯು ನಮಗೆ ಒತ್ತಾಯದ್ದಾಗಿ ತೋರುವದು, ಕಿಂಚಿತ್‌ಕ ಷ್ಟವೂ ಸಹಿಸದಾಗುವದು, ಎಷ್ಟು ಪ್ರತಿಫಲದೊರೆತರೂ ಅಲ್ಪವಾಗಿ ತೋರಿ ದುಃಖವಾಗುವದು.

ನೌಕರಿಮಾಡದೆ ಸ್ವತಂತ್ರರೀತಿಯಿಂದ ಚರಿತಾರ್ಥಸಾಗಿಸಿಕೊ ಳ್ಳುವ ಜನರೇ ದೇಶದ ಪ್ರಗತಿಗೆ ಕಾರಣರೂ ಆಧಾರಸ್ತಂಭರೂ ಆಗಿ ರುವರು. ಅವರು ರಾಷ್ಟ್ರವೆಂಬ ದೇಹದ ಬಲವಾದ ಸ್ನಾಯುಗ ಳೆಂದು ಅನ್ನಲು ಬಾಧಯಿಲ್ಲ. ಸ್ವಾತಂತ್ರ್ಯದಲ್ಲಿ ವಿಶೇಷ ಕಷ್ಟಗ ಳನ್ನು ಸಹಿಸಿ, ಪ್ರಸಿದ್ಧಿಗೆ ಬರುವ ಹಾಗು ಕೀರ್ತಿಯುತರಾಗುವ ಕಠಿ ಣಪಾಠಗಳು ಅವರಿಗೆ ಕಲಿಸಲ್ಪಟ್ಟಿರುತ್ತವೆ. ಮತ್ತು ಈ ಶಿಕ್ಷಣವೇ ಅವರ ಪ್ರಗತಿಗೆ ಕಾರಣವಾಗಿರುತ್ತದೆ. ಅವರ ಪ್ರಗತಿಯ ಎಲ್ಲ ಶ್ರೇಯಸ್ಸು ಅವರಲ್ಲಿಯ ಸ್ವಾತಂತ್ರ್ಯಪ್ರೀತಿಯದೇ ಆಗಿರುತ್ತದೆ. ಇಂಥವರು ನೌಕರರಾಗಿದ್ದರೆ, ಈ ಮಹತ್ವವು ಅವರಿಗೆ ಎಂದೂ ಪ್ರಾಪ್ತ ವಾಗುತ್ತಿದ್ದಿಲ್ಲ.

ಸಾಮಾನ್ಯವಾಗಿ ವಿಚಾರಮಾಡಿದರೆ, ಯಾವನು ಪರರ ಸೇವೆ ಯಲ್ಲಿ ಬಹು ದಿವಸಗಳನ್ನು ಕಳೆದಿರುವನೋ, ಯಾವನು ಪ್ರತಿ ಕೆಲ ಸಕ್ಕೆ ಮಂದಿಯ ಉಪದೇಶವನ್ನು ಗ್ರಹಿಸಬೇಕಾಗುವದೋ, ಸ್ವಮತ ಪ್ರತಿಪಾದನದ ಸಂಧಿಯು ಯಾವನಿಗೆ ಇಡಿ ಜನ್ಮದಲ್ಲಿ ದೊರಕುವದಿ ಲ್ಲವೋ, ಇಂಥವನು ಜವಾಬುದಾರಿಯ ಕೆಲಸಮಾಡಲಕ್ಕೆ ಸಹಸಾ ಮುಂದುವರಿಯುವದಿಲ್ಲವೆಂಬದು ವ್ಯಕ್ತವಾಗುವದು. ಮಂದಿಯ

ಹುಕುಮಿನಿಂದ ನಡೆದುನಡೆದು ಇಂಥವರ ಸ್ವತಂತ್ರವಿಚಾರಗಳೂ, ಸ್ವಮತಗಳೂ ಲುಪ್ತವಾಗಿರುತ್ತವೆ. ಇವರು "ಒಡೆಯನ ನೇಳಿದ, ಬಡಿಗನ ಮಾಡಿದ" ಎಂಬಂತೆ ಹೇಳಿದಷ್ಟು ಮಾಡುವವರಾಗಿರುತ್ತಾರೆ. ಈ ನಿರುದ್ಯೋಗಿಜನರನ್ನು ಪ್ರಸಂಗವಶಾತ್ ನೌಕರಿಯಿಂದ ಬಿಡಿಸಿಬಿಟ್ಟರೆ, ಮೀನಗಳನ್ನು ನೀರೊಳಗಿಂದ ಹೊರಗೆ ಬಿಸುಟಿದಂತಾಗಿ ಮುಂದುಗಾಣದಾಗುವರು. ಬಹಳ ದಿವಸಗಳವರೆಗೆ ಸರಕಾರಿ ನೌಕರಿಯನ್ನು ಮಾಡಿ, ಪೆನ್‌ಶನ್ ತೆಗೆದುಕೊಂಡಕೂಡಲೆ ತಮ್ಮ ಗತಿಯು ಮುಂದೆ ಹ್ಯಾಗಾಗುವದೋ ಎಂಬ ದುರ್ಬಲಮಾನಸಿಕವ್ಯಥೆಯಿಂದ ಪೀಡಿತರಾಗಿ ಕಠಿಣವಾದ ಬೇನೆಗೆ ಇಲ್ಲವೆ ಆಕಸ್ಮಿಕಮರಣಕ್ಕೆ ಗುರಿಯಾಗುವ ಜನರನ್ನು ನೋಡಿದರೆ ನಮ್ಮ ಮೇಲಿನ ಬರಹದ ಸತ್ಯತೆಯು ಕಂಡುಬರುವದು.

ನಿಜವಾದ ದೊಡ್ಡಸ್ತಿಕೆಯು ನೆಲೆಗೊಳ್ಳಬೇಕಾದರೆ, ಮನುಷ್ಯನಲ್ಲಿ ಆಚಾರಸ್ವಾತಂತ್ರ್ಯ, ವಿಚಾರಸ್ವಾತಂತ್ರ್ಯಗಳಿರಬೇಕಾಗುವವು. ಪೂರ್ಣಸ್ವಾತಂತ್ರ್ಯವು ಸಿಕ್ಕ ಹೊರತು ಮನುಷ್ಯನ ಮನಸ್ಸು ಹೊಸ ಹಾಗು ಅಕಲ್ಪಿತವಾದ ಕಾರ್ಯಕ್ಷೇತ್ರದಲ್ಲಿ ಪ್ರವೇಶಿಸಲಾರದು. ಸ್ವಾವಲಂಬನವೇ ಮನುಷ್ಯನಲ್ಲಿ ಮನುಷ್ಯತ್ವವನ್ನುಂಟುಮಾಡುವ ಪ್ರಾಮುಖ್ಯಸಾಧನವಾಗಿದೆ. ಅಂತೇ ಹಿಂದೆ ಹೇಳಿದಂತೆ ದೊಡ್ಡ ಹುದ್ದೆಯ ಅಮಲದಾರನಿಗಿಂತ ಕೂಳಿಲ್ಲದ ಬಡರಯತನು ಹೆಚ್ಚು ಯೋಗ್ಯತೆಯುವನೆಂದು ಎಣಿಸಲ್ಪಡುವನು. ಆದ್ದರಿಂದ ಸ್ವಾವಲಂಬನವೇ ಮನುಷ್ಯನ ಧ್ಯೇಯವಾಗಿರಬೇಕು.

ತನ್ನ ಸ್ವಂತದ ಉದ್ಯೋಗದಲ್ಲಿ ತತ್ಪರನಾದಾಗ ಮನುಷ್ಯನಿಗೆ ಆಯಾ ಉದ್ಯೋಗದ ಉತ್ಕರ್ಷ ಮಂದತ್ವಗಳ, ಅನುಕೂಲ ಪ್ರತಿಕೂಲತೆಗಳ ವಿಚಾರವನ್ನು ಮಾಡಬೇಕಾಗುತ್ತದೆ. ಈ ವಿಚಾರದಿಂದ ಅವನಲ್ಲಿ ಒಂದು ಪ್ರಕಾರದ ಗ್ರಹಣಶಕ್ತಿಯು, ಸಹನಶೀಲತೆಯು ದೂರದೃಷ್ಟಿಯು ಹಾಗು ಮುಂದುವರಿದುಹೋಗುವಸ್ವಭಾವವು ಬೆಳೆಯುತ್ತುತ್ತವೆ. ಎರಡನೆಯವರ ಸಲುವಾಗಿ ಮಾಡಿದ ಎಂಥ ವಿಶಿಷ್ಟ

ಪ್ರಯತ್ನದಿಂದಲೂ ಈ ಗುಣಗಳು ಮನುಷ್ಯನಲ್ಲಿ ಪ್ರಾದುರ್ಭವಿಸುವ ಸಂಭವವಿರುವದಿಲ್ಲ. ಸ್ವಂತದ ಉದ್ಯೋಗದಲ್ಲಿ ಸ್ವಂತದ ಲಾಭ ಹಾನಿಗಳ ಪರವಿಯೇ ಯಾವಾಗಲೂ ನಮ್ಮನ್ನು ಜಾಗ್ರತಗೊಳಿಸು ವದು; ಹಾಗು ಸತತ ಪರಿಶ್ರಮ ಮಾಡಲಿಕ್ಕೆ ಕಾರಣೀಭೂತವಾಗು ವದು. ಸ್ವಂತದ ಉದ್ಯೋಗಗಳಲ್ಲಿ ನಮ್ಮ ಶೋಧಕಬುದ್ಧಿಯು ಪೂರ್ಣ ಉಪಯೋಗಮಾಡಿಕೊಳ್ಳಲಿಕ್ಕೆ ಬರುತ್ತಿರುವದರಿಂದ, ನಮ್ಮ ಮಾನಸಿಕ ಶಕ್ತಿಯು ಹಾಗು ಬುದ್ಧಿಯು ವಿಕಾಸಕ್ಕೆ ಬಾಧೆಬಾರದೆ, ಅವು ಕ್ರಮೇಣ ಬೆಳೆದು ನಮ್ಮ ಪ್ರಗತಿಗೆ ಕಾರಣಗಳಾಗುವವು. ಯಾಕಂ ದರೆ, ಯಾವ ಪರಿಸ್ಥಿತಿಯಲ್ಲಿ ನಮಗೆ ಹೆಚ್ಚು ವಿಚಾರಮಾಡುವ, ಮನನ ಇಲ್ಲವೆ ಚಿಂತನಮಾಡುವ, ಅಭ್ಯಾಸಮಾಡುವ, ಕಾರ್ಯಕ್ರ ಮಗೊಳಿಸುವ ಹಾಗು ಅದರಂತೆ ನಡೆಯುವ ಯೋಗ್ಯ ಸಂಧಿಯು ಸಿಗುವದೋ, ಆ ಪರಿಸ್ಥಿತಿಯ ಯೋಗದಿಂದ ನಮ್ಮ ಉನ್ನತಿಯಾಗು ತ್ತದೆ. ಆ ಪರಿಸ್ಥಿತಿಯೆಂದರೇ ಸ್ವಾತಂತ್ರ್ಯ.

ಈಗಿನಂಥ ಭಯಂಕರ ಮಹರ್ಗತೆಯ ಕಾಲದಲ್ಲಿ ಸ್ವಲ್ಪ ಬಂಡ ವಲದಿಂದ ಯಾವದಾದರೊಂದು ಸ್ವತಂತ್ರ ಉದ್ಯೋಗವನ್ನು ತೆಗೆ ಯುವ ಮನುಷ್ಯನು, ನಿಕರದ ಪ್ರಸಂಗದಲ್ಲಿ ಹತ್ತರದ ಮದ್ದುಗುಂಡು ತೀರುತ್ತಬಂದಿದ್ದ ಸೇನಾಪತಿಯು ವರ್ತಿಸುವಂತೆ ಬಹಳ ಎಚ್ಚರಿಕೆ ಯಿಂದ ನಡೆಯಬೇಕಾಗುವದು. ಅವನು ಕಾರ್ಯಸಾಧನಕ್ಕಾಗಿ ತನ್ನ ಕಾಯಿಕ-ವಾಚಿಕ-ಮಾನಸಿಕ ಮೊದಲಾದ ಎಲ್ಲ ಶಕ್ತಿಗಳನ್ನೂ, ಸದಸದ್ವಿವೇಕಬುದ್ಧಿಯನ್ನೂ, ಧೈರ್ಯ ಹಾಗು ಸಹನಶೀಲತೆ-ಶ್ರಮ ಸಹಿಷ್ಣುತೆಗಳನ್ನೂ ಸಹಾಯಕ್ಕೆ ತೆಗೆದುಕೊಳ್ಳಬೇಕು. ತನ್ನ ಒಂದೂ ಮನೋಭಿಲಾಷೆಯ ಗುರಿಯು ವ್ಯರ್ಥವಾಗದಂತೆ, ಒಂದು ಪೈಕೂಡ ಅಕ್ರಮವಾಗಿ ವೆಚ್ಚವಾಗದಂತೆ, ಪ್ರತಿಯೊಂದು ಪ್ರಯ ತ್ನವೂ ನಿಷ್ಫಲವಾಗದಂತೆ ಜಾಗರೂಕನಾಗಿರಬೇಕು. ಅಂದರೆ ಅವನ ಪ್ರಗತಿಯಾಗಹತ್ತುತ್ತದೆ: ಮಹತ್ವಾಕಾಂಕ್ಷೆಯು ತನ್ನಿಂದ ಎಂಥ ಪರಿಶ್ರಮವನ್ನು ಮಾಡಿಸಿಕೊಳ್ಳುತ್ತದೆಂಬದು ನಿದರ್ಶನಕ್ಕೆ ಬರಹ

ತ್ತುತ್ತದೆ. ಅತ್ಯಂತ ಕಠಿಣ ಹಾಗು ತೊಡಕಿನ ಪ್ರಸಂಗಗಳಿಗೆ ಮೇಲಿಂದ ಮೇಲೆ ಎದೆಗೊಡಬೇಕಾಗುವದರಿಂದಲೂ, ಮನುಷ್ಯನ ಬಹಿಃಪ್ರಾಣವಾದ ಹಣದ ಸಲುವಾಗಿ ಆಗಾಗ್ಗೆ ಕಷ್ಟ-ನಷ್ಟಗಳನ್ನು ಹೊಂದಬೇಕಾಗುವದರಿಂದಲೂ, ತೇಜಿ-ಮಂದತ್ವಗಳ ಆಘಾತಗಳಿಂದ ಮನಸ್ಸಿನಲ್ಲಿ ಉಂಟಾಗುವ ಧೈರ್ಯ-ದೌರ್ಬಲ್ಯಗಳಿಂದಲೂ ಆ ಮನುಷ್ಯನ ಸ್ಥಿತಿಯು ಚದರಂಗದ ಆಟದಲ್ಲಿ ಸೋತ ಮನುಷ್ಯನಂತೆ ಆಗುವದು. ಈ ಹೊಸ ಉದ್ಯೋಗಸ್ಥನು ಸ್ವಪ್ನದಲ್ಲಿ ಕೂಡ ಅಜಾಗರೂಕನಾಗಿರಬಾರದು; ಕ್ಷುಲ್ಲಕ ತಪ್ಪು ಕೂಡ ಪ್ರಸಂಗವಶಾತ್ ಅವನ ನಾಶಕ್ಕೆ ಕಾರಣವಾಗುವದು. ಅವನು ಒಂದು ಕ್ಷಣವನ್ನು ಕೂಡ ಆಲಸ್ಯದಲ್ಲಿಯಾಗಲಿ, ನಿಷ್ಕಾಳಜಿಯಲ್ಲಾಗಲಿ ಕಳೆಯಕೂಡದು. ಯಾಕಂದರೆ, ಅವನ ಉದ್ಯೋಗದ ಉಚ್ಛ್ರಾಯ-ಅಪಚ್ಛ್ರಾಯಗಳು ಆಗಿನ ಅವನ ವರ್ತನ ಚಾತುರ್ಯವನ್ನು ಹೆಚ್ಚಾಗಿ ಅವಲಂಬಿಸಿರುತ್ತವೆ: ಈ ಕಾಲದಲ್ಲಿ ಅವನು, ಮಹಾಯುದ್ಧದ ಪ್ರಸಂಗದಲ್ಲಿ ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಹಗಲು-ರಾತ್ರಿ ಒಂದೇಸವನೆ ತಮ್ಮ ಶಿಬಿರವನ್ನು ಕಾಯುವ ಕಾವಲುಗಾರರಂತೆ ಬಹಳ ಎಚ್ಚರದಿಂದಿರಬೇಕಾಗುವದು.

ಎರಡನೆಯವರ ಸಲುವಾಗಿ ನೌಕರನಾಗಿ ದುಡಿಯಬೇಕಾಗಿದ್ದಾಗ ಮನುಷ್ಯನ ಮಹತ್ವಾಕಾಂಕ್ಷೆಯು ಬಹಳವಾದರೆ, ಅತಿದೊಡ್ಡ ಪಗಾರದೊರಕಿಸುವ ಬಹಳ ದೊಡ್ಡಹುದ್ದೆಯನ್ನು ಪಡೆಯುವ ವರೆಗೆ ಮಾತ್ರ ಇರುವದು. ಆದರೆ ತನ್ನ ಸ್ವಂತದ ಉದ್ಯೋಗದಲ್ಲಿ ತೊಡಗಿದ ಮನುಷ್ಯನಿಗೆ ಬೇರೆತರದ ಮಹತ್ವಾಕಾಂಕ್ಷೆಯು ಸ್ಫುರಣವಾಗುತ್ತಿರುತ್ತದೆ. ಸ್ವಾತಂತ್ರ್ಯದ ಮಧುರ ಫಲಗಳ ಸೇವನದ ಅನುಭವವೇ ಲಭಿಸುತ್ತಿದ್ದುದರಿಂದ ಅವನು ಆ ಸ್ವಾತಂತ್ರ್ಯರಕ್ಷಣಕ್ಕಾಗಿಯೂ ಅದನ್ನು ವೃದ್ಧಿಗೊಳಿಸುವದಕ್ಕಾಗಿಯೂ ಬೇಕಾದಷ್ಟು ಶ್ರಮವಹಿಸಲು ಸ್ವಸಂತೋಷದಿಂದ ಸಿದ್ಧನಾಗಿರುತ್ತಾನೆ. ಅಂಗೀಕೃತಉದ್ಯೋಗವನ್ನು ಮನಃಪೂರ್ವಕವಾಗಿ ಮಾಡುವಾಗ ಯಾವ ಹೊಸ ಹೊಸ

ಸಂಗತಿಗಳ ಅನುಭವವು-ಶಿಕ್ಷಣವು ಮನುಷ್ಯನಿಗೆ ಎಷ್ಟು ತೀವ್ರ ಪ್ರಾಪ್ತ ವಾಗುವವೋ ಆ ಪ್ರಕಾರದ ಅನುಭವವೂ ಶಿಕ್ಷಣವೂ ಪರರ ದಾಸ್ಯತ್ವ ದಲ್ಲಿದ್ದಾಗ ಜನ್ಮಜನ್ಮಾಂತರದಲ್ಲಿಯೂ ದೊರಕದು.

ಜವಾಬದಾರಿಯ ಭಾವನೆಯೇ ಶಿಕ್ಷಣಹೊಂದುವ ಸುಲಭಮಾರ್ಗವಾಗಿದೆ. ಬಹಳಕರಿಣ ಹಾಗು ಜವಾಬದಾರಿಯ ಪ್ರಸಂಗಗಳು ಬಂದಹೊರತು ತಾವು ಮುಂದೆ ಏನು ಮಾಡಬಹುದೆಂಬದನ್ನು ಊಹಿಸಲಿಕ್ಕಾಗುವದಿಲ್ಲ; ನಮ್ಮ ಸಾಮರ್ಥ್ಯದ ಕಲ್ಪನೆಯು ನಮಗಿರುವದಿಲ್ಲ. ಆದರೆ ಯಾವಾಗ ನಮಗೆ ಎರಡನೆ ಕಡೆಯಿಂದ ಸಹಾಯವು ದೊರೆಯುವ ಸಂಭವವಿರುವದಿಲ್ಲವೋ, ಸ್ವಂತದ ಕಾಲಮೇಲೆ ನಿಂತ ಹೊರತು ಅನ್ಯಮಾರ್ಗವಿರುವದಿಲ್ಲವೋ ಆವಾಗ್ಗೇ ನಾವು ನಿಕರದಿಂದ ಪ್ರಯತ್ನಮಾಡಹತ್ತುತ್ತೇವೆ. ಈ ನಿಕರದ ಪ್ರಯತ್ನದಲ್ಲಿ ಈಶ್ವರನು ನಿಶ್ಚಯದಿಂದ ನಮಗೆ ಯಶಸ್ಸು ಕೊಡುವನು.

ಸೇವಾಧರ್ಮಕ್ಕೆ ಕನಿಷ್ಠತ್ವಬರಲಿಕ್ಕೆ ಮುಖ್ಯಕಾರಣವೇನಂದರೆ, ಸೇವಾಧರ್ಮದಿಂದ ಸೇವಕನ ಸತ್ವಕ್ಕೆ ಭಂಗಬರುತ್ತಿದ್ದು, ಪ್ರಗತಿಮಾರ್ಗಾವಲಂಬನಕ್ಕೆ ಅವನಿಗೆ ಸಂಧಿಯೇ ಸಿಗದಾಗುವದು. ಹೀಗೆ ನೈಸರ್ಗಿಕಗುಣಗಳ ವೃದ್ಧಿಗೇ ಭಂಗಬರುತ್ತಿರಲು, ಪ್ರಯತ್ನಪೂರ್ವಕಸಾಧಿಸಬೇಕಾದ ಪ್ರಗತಿಯು ಗತಿಯೇನು? ಹೀಗಾಗಿ ಸೇವಕನು ಎಲ್ಲ ಬಗೆಯಿಂದಲೂ ದಾಸ್ಯವಿಮೋಚನ ಮಾಡಿಕೊಳ್ಳಲು (ಪ್ರಗತಿ ಹೊಂದಲು) ಅಯೋಗ್ಯನಾಗುತ್ತಾನೆ.

ಇನ್ನು ಕೆಲವರು ಹೀಗೆ ತರ್ಕಿಸಬಹುದು, ನಾವು ಎಲ್ಲರೂ ಸ್ವತಂತ್ರರಾಗುವದೂ ಎಲ್ಲರೂ ಉದ್ಯೋಗಸ್ಥರಾಗುವದೂ ಅರಸರಾಗುವದೂ ಶಕ್ಯವಾಗಿಯಾದರೂ ತೋರುವದೋ? ಎಲ್ಲರೂ ಪಲ್ಲಕ್ಕಿಯಲ್ಲಿ ಕೂತರೆ ಪಲ್ಲಕ್ಕಿ ಹೊರುವವರಾರು" ತಾರ್ಕಿಕರ ಈ ತರ್ಕವು ವಿಚಾರಣೀಯವಾಗಿದೆ, ಆದರೆ ಇದೇ ವಿಚಾರವು ಸ್ವತಂತ್ರರೀತಿಯಿಂದ ಇರುವ ಉದ್ಯೋಗಸ್ಥರ, ರಯತರ ಇಲ್ಲವೆ ಅರಸರ ಮನಸಿನಲ್ಲಿ ಬಂದು ಅವರು ತಮ್ಮ ತಮ್ಮ ವೃತ್ತಿಗಳನ್ನು ಬಿಟ್ಟುಕೊಟ್ಟ

ನಮ್ಮಂತೆ ನೌಕರರಾಗಬಯಸಿದರೆ ನಮ್ಮ ತಾರ್ಕಿಕರ ತರ್ಕಕ್ಕೇನೆನ್ನಬೇಕಾಗುವದು? ಆಗ ನಾವು ನೌಕರಿ ಮಾಡುವದಾದರೂ ಯಾರದು? ಹೊರಲಿಕ್ಕೆ ಪಲ್ಲಕ್ಕಿಯಾದರೂ ಯಾರದು ಸಿಗುವದು? ಆದ್ದರಿಂದ ಸ್ವಾತಂತ್ರ್ಯ ಪ್ರೀತಿಯುಳ್ಳ ಮನುಜನು ಹೊಲ್ಲದ ಈ ಹೇಡಿಕುತರ್ಕಗಳಿಗೆ ಮನಸ್ಸನ್ನೀಸದೆ, ತನ್ನ ಅಂತಃಕರಣಕ್ಕೆ ಸರಿದೋರುವ ಮಾರ್ಗವನ್ನು ಹಿಡಿದು ತೀವ್ರವಾಗಿ ಪ್ರಗತಿಯನ್ನು ಹೊಂದಲುಯತ್ನಿಸಬೇಕು. ಸ್ವಾತಂತ್ರ್ಯಪ್ರೀತಿಯುಳ್ಳ ಎಲ್ಲ ವ್ಯಕ್ತಿಗಳ ಅಧಿಕಾರವು ಲೋಕದಲಿ ಒಂದೇಸವನೆ ಆಗಿರುವದು. ಆ ವೃತ್ತಿಯಿಂದ ನಮ್ಮನ್ನು ಪರಾಙ್ಮುಖಮಾಡಲಿಕ್ಕೆ ಯಾವನಿಗೂ ಅಧಿಕಾರವಿರುವದಿಲ್ಲ. ಸ್ವಾತಂತ್ರ್ಯ ಪ್ರೀತಿಯನ್ನು ವೃದ್ಧಿಗೊಳಿಸದೆ ಕುಗ್ಗಿಸುವದೆಂದರೆ, ಮನುಷ್ಯತ್ವದ ಕರ್ತವ್ಯಕ್ಕೆ ಭಂಗತಂದಂತಾಗುವದು. ಆದ್ದರಿಂದ ಮನುಷ್ಯತ್ವಕಾಯ್ದುಕೊಳ್ಳುವದಕ್ಕಾಗಿ ಪ್ರತಿಯೊಬ್ಬನೂ ಸ್ವಾತಂತ್ರ್ಯ ಪ್ರಿಯನಾಗಬೇಕು.

ಪರತಂತ್ರ ಮನುಷ್ಯನು ಸ್ವತಂತ್ರನಾಗಬಯಸಿ ಪ್ರಯತ್ನಪಡಹತ್ತಿದರೆ ಅವನಿಗೆ ಒಮ್ಮೆಲೆ ಸರ್ವವೂ ಸಾಧ್ಯವಾಗಲಾರದೆಂಬದು ನಿಜವು; ಯಾಕಂದರೆ ಗತಆಯುಷ್ಯವು ಪಾರತಂತ್ರ್ಯರಜ್ಜುವಿನಿಂದ ಬಿಗಿಯಲ್ಪಟ್ಟಿತ್ತಾದ್ದರಿಂದ, ಈಗಲೂ ಅವನ ದೇಹದ ಮೇಲೆ, ಮನಸ್ಸಿನ ಮೇಲೆ ಆ ರಜ್ಜುವಿನ ಬಾಸಾಳಗಳು ಮೂಡಿರುವದರಿಂದ, ಕೆಲಕೆಲವು ಪ್ರಸಂಗಗಳಲ್ಲಿ ತನ್ನಿಂದ ತಾನೇ ಅವನು ತನ್ನ ಸ್ವಾತಂತ್ರ್ಯಭಂಗಕ್ಕೆ ಕಾರಣನಾಗಿ, ಪ್ರಗತಿಗೆ ಆಗಿನ ಮಟ್ಟಿಗೆ ಬಾಧೆತಂದುಕೊಳ್ಳುವನು. ಆ ರಜ್ಜುವಿನ ಬಾಸಾಳಗಳು ಸಂಪೂರ್ಣ ಇಲ್ಲದಂತಾಗಲು ಅವನ ಪ್ರಗತಿಯು ಒಳ್ಳೇ ಒತ್ತರದಿಂದ ಆಗಹತ್ತುವದು. ಆಗ ಅವನು ತನ್ನ ಮೊದಲಿನ ಹಾಗು ಈಗಿನ ಮಹತ್ವಾಕಾಂಕ್ಷೆಗಳ ತುಲನೆಯನ್ನು ಮಾಡಿದರೆ, ತನ್ನಲ್ಲಿ ಒಂದು ಪ್ರಕಾರದ ಸಾಮರ್ಥ್ಯವು ಉಂಟಾಗಿರುವದೆಂದು ಅವನಿಗೆಕಂಡುಬರುವದು. ಸ್ವಾವಲಂಬನದ ಸುಖದ ಮುಂದೆ ಪರಾವಲಂಬನದ ಸುಖವು ಅವನಿಗೆತುಚ್ಛವಾಗಿ ಕಾಣಹತ್ತುವದು. ಹೀಗೆ

ಆಗುವದು ಸಿದ್ಧವಾತಾಗಿದ್ದರೂ ನಮ್ಮಲ್ಲಿಯು ಬಹುಜನರು ತಿಂಗತಿಂಗ ಳಿಗೆ ತಪ್ಪದೆ ಸಿಗುವ ಪಗಾರಕ್ಕಾಗಿಯೂ, ಹೆಚ್ಚು ಜವಾಬುದಾರಿ ಸಾಹ ಸಗಳಿಂದ ಅಲಿಪ್ತರಾಗುವದಕ್ಕಾಗಿಯೂ, ತಮ್ಮ ದೇಹವನ್ನು ಮಾರಿ ಕೊಳ್ಳುವರು. ಇವರು ತಮ್ಮ ಭಾಷಣಸ್ವಾತಂತ್ರ್ಯ, ಆಚಾರಸ್ವಾ ತಂತ್ರ್ಯ, ವಿಚಾರಸ್ವಾತಂತ್ರ್ಯಗಳನ್ನು ಕಳಕೊಂಡು ತಮ್ಮ ಪ್ರಗತಿ ಯನ್ನು ತಮ್ಮ ಕಾಲಿಲೆ ತುಳಿದು ನಾಶಮಾಡಿಕೊಳ್ಳುತ್ತಾರೆ. ಈಗಿನ ಕಾಲದಲ್ಲಿ ದೊಡ್ಡ ಪದವೀಧರರು ಮೊದಲುಮಾಡಿಕೊಂಡು, ಅಕ್ಷರ ಶತ್ರುವಿನವರೆಗೆ ಪ್ರತಿಯೊಬ್ಬನ ಒಲವೂ ಚಾಕರಿಯ ಕಡೆಗೇ ಇರು ವದು. ಬಿ, ಏ, ಪಾಸಾದರೂ ನೌಕರಿಯು ಬಯಕೆಯು; ಎಂ, ಏ ಪಾಸಾದರೂ ನೌಕರಿಯು ಬಯಕೆಯು; ಆಯ್, ಸಿ, ಎಸ್, ಪಾಸಾ ದರೂ ನೌಕರಿಯ ಬಯಕೆಯು; ಹರಹರ! ಸ್ವಾಮಿತ್ವ ಮೆರೆಯಿಸುವದ ಕ್ಕಾಗಿ, ಬೇಕಾದ ಸಂಗತಿಯನ್ನು ಸಾಧ್ಯಮಾಡಿಕೊಳ್ಳುವದಕ್ಕಾಗಿ, ಸ್ವಾತಂತ್ರ್ಯಕ್ಕಾಗಿ, ಕರ್ತವ್ಯನಿಷ್ಠೆಯನ್ನು ತೋರಿಸುವದಕ್ಕಾಗಿ ಮತ್ತು ಸ್ವಾವಲಂಬನಕ್ಕಾಗಿ ಹುಟ್ಟಿ ಬೆಳೆದ ಮನುಷ್ಯಪ್ರಾಣಿಯು ಸೇವಾಧರ್ಮದಲ್ಲಿ ಸುಖಸಮಾಧಾನದಿಂದಿರುವದು ಯೋಗ್ಯವೆ? ಹೇಳಿದ ಚಾಕರಿಮಾಡಿಕೊಂಡು, ಹಾಕಿದಷ್ಟು ಒಕ್ಕರಿಯನ್ನು ತಿನ್ನುವ ನಾಯಿಯಂತೆ ದಾಸ್ಯದಲ್ಲಿ ಸುಖ ಸಮಾಧಾನಗಳಿಂದಿರುವದು ಭೂಷ ಣವೇ? ಕುಂಠಿತ ಪ್ರಗತಿಗಾಮಿಗಳಾಗಿ ಸದೈವದಾಸ್ಯತ್ವದಲ್ಲಿರಲು ಹವ ಣಿಸುವದು ಎಂಥ ಖೇದಕರವಾದ ಮಾತಿದು!

ಸ್ವಾತಂತ್ರ್ಯಸುಖವನ್ನು ಅನುಭವಿಸಲಿಕ್ಕೂ, ಸ್ವಕರ್ತವ್ಯದಿಂದ ಉನ್ನತಿಯನ್ನು ಹೊಂದಲಿಕ್ಕೂ, ಸ್ವಂತದ ಬಗ್ಗೆ ಸ್ವತಂತ್ರ ವಿಚಾರ ಮಾಡಿ ಧ್ಯೇಯವನ್ನು ಗೊತ್ತುಮಾಡಿಕೊಳ್ಳಲಿಕ್ಕೂ ಈಶ್ವರನುಮನುಷ್ಯ ಪ್ರಾಣಿಯನ್ನು ನಿರ್ಮಿಸಿರುವನು. ಹೀಗಿದ್ದು ನಾವು ಪೂರ್ವಸುಕೃತ ದಿಂದ ಪ್ರಾಪ್ತವಾದ ನಮ್ಮ ಮನುಷ್ಯದೇಹವನ್ನು ಪರರ ದಾಸ್ಯತ್ವ ದಲ್ಲಿ ಕಳೆಯುವದು ಯೋಗ್ಯವಾಗಬಹುದೇ? ಇನ್ನು ಯಾವನಿಗೆ ಸ್ವತಂತ್ರ ವಿಚಾರಗಳು ಹರಿಯುವದಿಲ್ಲವೋ, ಯಾವನು ಪರರ ದಾಸ್ಯ

ದಲ್ಲಿಯೇ ಅಂತಃಕರಣ ಪೂರ್ವಕವಾಗಿ ಸುಖಿಯಾಗಿರುವನೋ, ದೇವರು ಇಟ್ಟ ಸ್ಥಿತಿಯಲ್ಲಿಯೇ ಯಾವನು ಪರಮ ಸುಖಿಯಾಗಿರುವನೋ ಅವನು ತನ್ನ ಇಚ್ಛೆಯಂತೆ ಇರಲಿ. ಆದರೆ ಯಾವನು ಮೇಲಿನ ಎಲ್ಲ ದುಃಖಗಳನ್ನು ಅಂತಃಕರಣದಲ್ಲಿ ದುಃಖಗಳೆಂದು ಭಾವಿಸಿ, ತೋರಿಕೆಯಲ್ಲಿ ಸುಖಿಯಾಗಿರುವವನಂತೆ ತೋರುವನೋ ಅವನು ಮಾತ್ರ ಕೂಡಲೆ ತನ್ನ ಸ್ವಾತಂತ್ರ್ಯಪ್ರೀತಿಯನ್ನು ಜಾಗ್ರತಗೊಳಿಸಿಕೊಂಡು ದಾಸ್ಯವಿಮೋಚನಕ್ಕೆ ಪ್ರಯತ್ನಿಸತಕ್ಕದ್ದು. ಪ್ರಗತಿಮಾರ್ಗವು ಕಷ್ಟಸಾಧ್ಯವಾಗಿದೆಎಂಬದು ನಿಜವಾಗಿದ್ದರೂ, "ಹುಚ್ಚು ಹೋಗದೆ ಲಗ್ನವಾಗದು, ಲಗ್ನವಾಗದೆ ಹುಚ್ಚು ಹೋಗದು" ಇಲ್ಲವೆ "ಈಸುಬಂದ ಹೊರತು ನೀರಹೆದರಿಕೆ ಹೋಗುವದಿಲ್ಲ, ನೀರಹೆದರಿಕೆ ಹೋದ ಹೊರತು ಈಸುಬರುವದಿಲ್ಲ" ಎಂಬಂತೆ ಪ್ರಗತಿಮಾರ್ಗದಲ್ಲಿ ಪ್ರವೇಶಿಸಿದ ಹೊರತು ಪ್ರಗತಿಹೊಂದುವ ಬಗೆ ಹ್ಯಾಗೆ? ಆದ್ದರಿಂದ ಮನುಷ್ಯನು ಸ್ವಾತಂತ್ರ್ಯಪ್ರೀತಿಯೆಂಬ ಈಸಗುಂಬಳಕಾಯಿಯನ್ನು ಕಟ್ಟಿಕೊಂಡು ಈ ಸಂಸಾರವೆಂಬ ಸಾಗರದಲ್ಲಿ ಬಿದ್ದುಬಿಟ್ಟರೆ, ಅವನು ಪ್ರಗತಿಪಥವನ್ನು ಹಿಡಿದು, ಶ್ರೇಷ್ಠವಾದ ಮಾನ-ಕೀರ್ತಿಗಳಿಂದ ಯುಕ್ತನಾಗಿ ಭವವನ್ನು ನಿರಾಯಾಸವಾಗಿ ದಾಟುವನು.

---

## ೨ನೆಯ ಖಂಡ—ದೃಢನಿಶ್ಚಯ.

"ನಿಶ್ಚಯಾಚೆ ಬಲ, ತುಕಾಮ್ಹಣೆ ಹೇಚಿ ಸವಾಂಚೆ ಫಲ"

ಸಾಧುಶ್ರೇಷ್ಠರಾದ ತುಕಾರಾಮಬುವಾನವರ ಈ ವಾಕ್ಯವು ದೃಢನಿಶ್ಚಯದ ಮಹತಿಯನ್ನು ವ್ಯಕ್ತಗೊಳಿಸುತ್ತದೆ. ದೃಢನಿಶ್ಚಯದಿಂದ ಜಗತ್ತಿನಲ್ಲಿ ಬೇಕಾದಂಥ ಪದವಿಗೇರಬಹುದಾಗಿದೆ. ಪೂರ್ವದಲ್ಲಿ ಆರ್ಯಾವರ್ತದಲ್ಲಿ ದೀಪಕನೆಂಬ ಒಬ್ಬ ಮಹಾದೃಢನಿಶ್ಚಯಿಯು ಆಗಿಹೋದನು. ಅವನು ಒಂದು ಪ್ರಸಂಗದಲ್ಲಿ ತೋರಿಸಿದ ದೃಢನಿಶ್ಚಯವು ನಮ್ಮ ವಾಚಕರ ಅವಗಾಹನೆಗೆ ತಂದು ಕೊಡುವದು ಅ-

ಶ್ಯವೆಂದು ನಮಗೆ ತೋರುವದರಿಂದ ಅದರ ಉಲ್ಲೇಖವನ್ನು ಇಲ್ಲಿ ಮಾಡುವೆವು.

ಈ ದೀಪಕನು ಬಾಲ್ಯದಲ್ಲಿ ವಿದ್ಯೆಕಲಿಯುವದಕ್ಕಾಗಿ ಒಬ್ಬ ಮಹಾಜ್ಞಾನಿಯೊಡನೆ ಋಷಿಯ ಬಳಿಯಲ್ಲಿರುತ್ತಿದ್ದನು. ಪೂರ್ವದ ಅಧ್ಯಾಪಕರು, ಋಷಿಗಳು, ಶಿಕ್ಷಣಕೊಡುವ ಪದ್ಧತಿಯು ಈಗಿನಂತೆ ಇದ್ದಿಲ್ಲ. ಅವರ ಕಲಿಸೋಣವು ಗಹನವು. ಆಗಿನ ಗುರುಗಳು ಈಗಿನಂತೆ, ವಿದ್ಯಾರ್ಥಿಗಳಿಂದ ಪ್ರಥಮಿಕಪುಸ್ತಕಗಳನ್ನು ಓದಿಸಿ ಬಳಿಕ ಉಚ್ಚತರದ ಶಿಕ್ಷಣ ಕೊಡುವಂತೆ ಪಾಠ ಹೇಳುತ್ತಿದ್ದಿಲ್ಲ. ಅವರು ತಮ್ಮಲ್ಲಿಗೆ ಬಂದ ಎಲ್ಲ ವಿದ್ಯಾರ್ಥಿಗಳನ್ನು ಅವರವರ ಶೀಲ, ಗುಣಗ್ರಾಹಕತೆ, ದೃಢನಿಶ್ಚಯ ಮೊದಲಾದವನ್ನು ಪರೀಕ್ಷಿಸುವದಕ್ಕಾಗಿ ತಪಗಟ್ಟಲೆ ಸೇವೆಮಾಡಲು ಹಚ್ಚುವರು. ಉತ್ತಂಕನೆಂಬ ಮಹಾತ್ಮಶಿಷ್ಯನು ಗುರುಗಳಲ್ಲಿ ದನಕಾಯ್ದು ವಿದ್ಯೆ ಸಂಪಾದಿಸಿದನು. ಶ್ರೀಕೃಷ್ಣನು ಕಟ್ಟಿಗೆ ತಂದು ವಿದ್ಯೆಗಲಿತನು. ಹೀಗೆ ಗುರುಗಳು ವಿದ್ಯಾರ್ಥಿಗಳನ್ನು ಸೇವೆಮಾಡಲಿಕ್ಕೆ ಹಚ್ಚಿ, ಅವರ ಅಂತಶುದ್ಧಿಯಾಗುವದಕ್ಕೆ, ಅವರಲ್ಲಿ ನಿಜವಾದ ಸದ್ಗುಣಗಳು ಪ್ರಾದುರ್ಭವಿಸಲಿಕ್ಕೂ ಪ್ರಸಂಗ ದೊರಕುವಂತೆ ಅವರಿಗೆ ವಿಧವಿಧದ ಕಷ್ಟಗಳನ್ನು ಕೊಡುತ್ತಿದ್ದರು. ಇದೇಪ್ರಕಾರ ದೀಪಕಶಿಷ್ಯನಿಗೆ ಅವನ ಗುರುಗಳು ಬಹಳವಾಗಿ ಕಾಡಿಸಿದರು. ಆದರೂ ಆ ದೃಢನಿಶ್ಚಯಿಯು ವಿಮನಸ್ಕನಾಗದೆ ಗುರುಸೇವೆಯನ್ನು ಒಮ್ಮನಸಿನಿಂದ ಮಾಡುತ್ತಿದ್ದನು. ಒಮ್ಮೆ ಗುರುಗಳು ದೀಪಕನ ದೃಢನಿಶ್ಚಯವನ್ನು ಪರೀಕ್ಷಿಸುವದಕ್ಕಾಗಿ ಅವನನ್ನು ಕುರಿತು "ತಮ್ಮಾ ದೀಪಕಾ, ನಾನು 'ಜನ್ಮಾಂತರದಲ್ಲಿ ಬಹಳ ನೀಚಕರ್ಮಗಳನ್ನು ಮಾಡಿರುವೆನು. ಈ ಜನ್ಮದಲ್ಲಿ ತಪೋನಿಷ್ಠನಾಗಿ ಬಹಳ ಪುಣ್ಯಸಂಪಾದಿಸಿದ್ದರೂ ಆ ಪ್ರಾಚೀನ ದುಷ್ಕೃತ್ಯವು ನನಗೆ ತೊಂದರೆಕೊಡದೆ ಇರದು. ಅದಕ್ಕಾಗಿ ಕೈಕಾಲು ಗಟ್ಟಿಯಾಗಿದ್ದು ಸ್ವತಂತ್ರನಿರುವಾಗಲೇ ನಾನು ಆದುಷ್ಕೃತಿಯವಿಮೋಚನಕ್ಕಾಗಿ ಉಪಾಯವನ್ನು ಮಾಡಬೇಕೆಂದಿರುವೆನು. ಆ ದುಷ್ಕರ್ಮ

ದಿಂದ ನಾನು ಇಪ್ಪತ್ತೊಂದು ವರ್ಷಗಳ ವರೆಗೆ ಅಂಧನಾಗಿಯೂ, ಕುಷ್ಟದಿಂದ ಪೀಡಿತನಾಗಿಯೂ ಇರಬೇಕಾಗುವದು. ಈ ಅವಧಿ ಯಲ್ಲಿ ನೀನು ನನ್ನ ಸೇವೆಮಾಡಿಕೊಂಡು ಇರುವದಾದರೆ, ನಿನ್ನ ಉಚ್ಛ್ರೇಯವು ನಿಜವಾಗಿ ಆಗುವದು ಆದರೆ ನಾನು ಹೇಳುವ ದನ್ನು ಪೂರ್ಣವಾಗಿ ಲಕ್ಷಗೊಟ್ಟು ಕೇಳು. ನಾನು ವ್ಯಾಧಿಪೀಡಿತ ನಾದಾಗ ಬಹಳ ಕಷ್ಟಪಡಬೇಕಾಗುವದು. ವ್ಯಾಧಿಗ್ರಸ್ತರು ಒಂದು ಪಾಲು ಕಷ್ಟಪಟ್ಟರೆ, ಸೇವಾತತ್ಪರರು ಹತ್ತುಪಾಲು ಕಷ್ಟಪಡಬೇ ಕಾಗುವದು. ಆದ್ದರಿಂದ ವಿಚಾರಮಾಡಿಕೊಂಡು, ದೃಢಮನಸ್ಸಿ ನಿಂದ ಸೇವೆಮಾಡಲಿಕ್ಕೆ ಒಪ್ಪುತ್ತಿದ್ದರೆ ಹೇಳು" ಎಂದರು.

ಗುರುಗಳ ಮಾತನ್ನು ಕೇಳಿ ತಾನು ನಿಶ್ಚಯಪೂರ್ವಕವಾಗಿ ಸೇವಾತತ್ಪರನಾಗುವೆನೆಂದು ದೀಪಕನು ಹೇಳಿದನು. ಬಳಿಕ ಆ ಗುರುಶಿಷ್ಯರು ಸಂಕೇತದಂತೆ ಕಾಶಿಗೆ ಹೋದರು. ಅಲ್ಲ ಗುರುಗಳು ಗಂಗೆಯಲ್ಲಿ ಸ್ನಾನಮಾಡಿ ವ್ಯಾಧಿಯನ್ನು ಬರಮಾಡಿಕೊಂಡರು ಅವರ ವ್ಯಾಧಿಯು ನಿಜವಾದ ವ್ಯಾಧಿಯಾಗಿರದೆ ಶಿಷ್ಯನ ಪರೀಕ್ಷೆಗ ಬೇಕಂತಧರಿಸಿದ ವ್ಯಾಧಿಯಾಗಿತ್ತು. ಗುರುಗಳು ಶಿಷ್ಯನಲ್ಲಿ ದೃಢ ನಿಶ್ಚಯ ನೆಲೆಗೊಳಿಸುವದಕ್ಕಾಗಿ ಹಲವು ಪ್ರಕಾರದ ವೇಷಗಳನ್ನು ಧರಿಸಿದರು. ಅವರ ಮೈಯಲ್ಲಿ ವ್ರಣಗಳಾದವು; ಕಣ್ಣು ಕಾಣದಾ ದವು; ಕಿವಿಗಳು ಕೇಳದಾದವು; ದೇಹದಲ್ಲಿ ಹುಳಬಿದ್ದವು. ವ್ಯಾಧಿ ಹೆಚ್ಚಾದಂತೆ ಗುರುಗಳ ಸಂತಾಪವು ಹೆಚ್ಚಾಗತೊಡಗಿತು ಸಂತಾ ಪದ ಭರದಲ್ಲಿ ಅವರು ದೀಪಕನಿಗೆ ಬಹಳ ಕಷ್ಟಕೊಡಹತ್ತಿದರು. ಅವನು ತಿರಿದುತಂದ ಭಿಕ್ಷಾನ್ನಕ್ಕೆ ಕಂಡ ಕಂಡ ಹಾಗೆ ಹೆಸರಿಡುವರು; ಒಮ್ಮೊಮ್ಮೆ ಅದು ಕಹಿಯಾಗಿದೆಯೆಂದೂ, ಮಧುರವಾಗಿಲ್ಲೆಂದೂ ಹೇಳಿ ಅದನ್ನು ನೆಲದ ಮೇಲೆ ತಿರಸ್ಕಾರದಿಂದ ಬಿಸುಟಬಿಡುವರು. ಮರುದಿನ ಅವನು ಒಳ್ಳೇ ಶೀಯಾದ ಹಾಗು ಮಧುರವಾದ ಅನ್ನ ವನ್ನು ತಂದು ನೀಡಿದರೆ, ಅವರು ಈ ಅನ್ನವು ಬಹಳ ಹುಳಿಯಾಗಿದೆ ಯೆಂದು ಹೇಳಿ ಊಟವನ್ನೇ ಬಿಡುವರು. ಒಂದುದಿನ ಬಟ್ಟೆ ಜಳ

ಜಳಮಾಡಿಲ್ಲವೆಂದೂ, ಮತ್ತೊಂದುದಿನ ಮೇಲಿಂದ ಮೇಲೆ ಬಿಟ್ಟು ಜಳಜಳ ಮಾಡಬೇಡವೆಂದೂ, ಒಮ್ಮೆ ದಿನಾಲು ಜಳಕಮಾಡಿಸೆಂದೂ, ಮತ್ತೊಮ್ಮೆ ನನಗೆ ಜಳಕವೇ ಬೇಡವೆಂದೂ ಹಟಹಿಡಿಯುವರು. ವ್ಯಾಧಿಯು ಹೆಚ್ಚಾದಂತೆ ಸಹಿಸದಾಗಲು ಗುರುಗಳು ಹಗಲಿರಳು ನಿದ್ರೆ-ನೀರಡಿಕೆಗಳಿಲ್ಲದೆ ಕಷ್ಟಪಡಹತ್ತಿದರು. ಅವರ ಮೈಯೊಳಗಿನ ಕ್ರಿಮಿಗಳನ್ನು ಹೊರಪಡಿಸುವದು ದುಸ್ತರವಾಯಿತು. ಮೈಮುಟ್ಟಿದರೆ, ರಕ್ತವೂ, ಕೀವವೂ, ಚಿಮ್ಮುತ್ತಿದ್ದವು. ಇಂಥ ಸ್ಥಿತಿಯಲ್ಲಿ ಗುರುಸೇವಕನಾದ ದೀಪಕನು ತನ್ನ ನಾಲಿಗೆಯಿಂದ ಗುರುಗಳ ವ್ರಣಗಳೊಳಗಿನ ಕ್ರಿಮಿಗಳನ್ನು ತೆಗೆಯುತ್ತಿದ್ದನು. ಅವನ ಈ ದೃಢನಿಶ್ಚಯದ ಗುರುಸೇವೆಯನ್ನು ಕಂಡು ತ್ರಿಮೂರ್ತಿಗಳು ಕೂಡ ಚಕಿತರಾದರು. ಅವರು ವರಕೊಡುತ್ತೇವೆಂದು ಆಗಾಗ್ಗೆ ದೀಪಕನ ಹತ್ತರ ಬರುತ್ತಿದ್ದರು. ಆದರೆ ಗುರುವಾಕ್ಯದಲ್ಲಿ ದೃಢನಿಶ್ಚಯುವುಳ್ಳ ದೀಪಕಶಿಷ್ಯನು ತನ್ನ ಗುರುಗಳ ಅಪ್ಪಣೆಯು ಹೊರತು ತನಗೆ ವರಗಳು ಬೇಡವೆಂದು ಹೇಳಿಬಿಟ್ಟನು. ಕಡೆಗೆ ಆ ತ್ರಿಮೂರ್ತಿಗಳು ಗುರುಗಳ ಬಳಿಗೆ ಬಂದು ದೀಪಕನ ದೃಢನಿಶ್ಚಯವನ್ನು ಅತ್ಯಂತವಾಗಿ ಹೊಗಳಿದರು. ಮಹಾಜ್ಞಾನಿಗಳಾದ ಗುರುಗಳಾದರೂ ದೀಪಕನ ದೃಢನಿಶ್ಚಯಕ್ಕೆ ಮೆಚ್ಚಿಯೇ ಇದ್ದರು. ಆಗ ಅವರು "ಮಹಾಜ್ಞಾನಿಯೂ, ದೃಢನಿಶ್ಚಯದ ದರ್ಶಕನೂ, ಲೋಕೋತ್ತರ ಕೀರ್ತಿಯುತನೂ ಆಗೆ"ಂದು ದೀಪಕನನ್ನು ಹರಸಿದರು.

ಪ್ರಖ್ಯಾತನೂ, ಕರ್ತವ್ಯನಿಷ್ಠನೂ ಆಗಬೇಕಾದರೆ ಮನುಷ್ಯನಲ್ಲಿ ದೃಢನಿಶ್ಚಯವು ಅವಶ್ಯವಾಗಿ ಇರಬೇಕು. ಈ ವರೆಗೆ ಲೋಕದಲ್ಲಿ ಪ್ರಖ್ಯಾತರಾದ ಜನರಲ್ಲಿ ಈ ಗುಣವು ಇದ್ದೇಇತ್ತು. ಶ್ರೀ ಸಮರ್ಥರಾಮದಾಸರು, ಶ್ರೀ ಶಿವಾಜಿಮಹಾರಾಜರು, ಜಾರ್ಜವಾಸಿಂಗ್ಟನ್ನನು, ಪುಣ್ಯಶಾಲಿ ಅಶೋಕಚಕ್ರವರ್ತಿಯು, ಲಾರ್ಡ ಕ್ಲೈವನು, ಸರಬುಕರ ವಾಸಿಂಗ್ಟನ್ನನು, ಕೈ. ಸರ ಗೋಖಲೆಯವರು ಮೊದಲಾದ ಪ್ರತಿಭಾಶಾಲಿಗಳು ಪ್ರಸಿದ್ಧಿಗೆ ಬರಲಿಕ್ಕೆ ಅವರಲ್ಲಿದ್ದ ದೃಢ

ಶ್ಚಯವೇ ಕಾರಣವು; ದೃಢನಿಶ್ಚಯವಿಲ್ಲದವನು ಯಾವ ಕೆಲಸ
ದಲ್ಲಿಯೂ ಖ್ಯಾತಿಹೊಂದಲಾರನು. ಅವನ ಬಾಳು ನಾಯಿಗಿಂತಲೂ
ಕಡೆಯಾಗುವದು. ಮನುಷ್ಯನು ಆತ್ಮಸಂಯಮನದಿಂದ ತನ್ನ
ಧ್ಯೇಯದ ಪ್ರಕಾರ ಯಾವದಾದರೊಂದು ವಿಶಿಷ್ಟಕಾರ್ಯದಲ್ಲಿ ಮನ
ಸ್ಸನ್ನು ತೊಡಗಿಸಿ, ಆ ಕಾರ್ಯ ಸಾಧನ ಪ್ರೀತ್ಯರ್ಥವಾಗಿ ಮನಸ್ಸನ್ನು
ಸ್ಥಿರಗೊಳಿಸುವದೇ ದೃಢನಿಶ್ಚಯದ ಅಭ್ಯಾಸವಾಗಿದೆ. ಹೀಗೆ ಮನ
ಸ್ಸಿನ ಏಕೀಕರಣವಾದವಾದಂತೆ ಹಿಡಿದ ಕಾರ್ಯಗಳಲ್ಲಿ ಹೆಚ್ಚು
ಶ್ರೇಯಸ್ಸು ಪ್ರಾಪ್ತವಾಗುವದು. "ಮನ ಏವ ಮನುಷ್ಯಾಣಾಂ
ಕಾರಣಂ ಬಂಧಮೋಕ್ಷಯೋಃ" ಎಂಬ ಗೀತಾವಾಕ್ಯದಂತೆ ಮನಸ್ಸೇ
ಮನುಷ್ಯನ ಬಂಧನಕ್ಕೂ, ದಾಸ್ಯಕ್ಕೂ, ಮೋಕ್ಷಕ್ಕೂ, ಪ್ರಗತಿಗೂ
ಕಾರಣವಾಗಿದೆ. ಆದ್ದರಿಂದ ಮನಸ್ಸನ್ನು ದೃಢಪಡಿಸುವ ಅಭ್ಯಾಸ
ವನ್ನು ಬಾಲ್ಯದಿಂದಲೇ ಪ್ರಾರಂಭಿಸಬೇಕು. "ಮೂರು ವರ್ಷದ
ಬುದ್ಧಿ ನೂರು ವರ್ಷಗಳ ವರೆಗೆ" ಎಂಬಂತೆ ಬಾಲ್ಯದಲ್ಲಿ ಅಭ್ಯಾಸ
ಮಾಡ ವಿಷಯಗಳು ಆಮರಣ ಸ್ಮರಣದಲ್ಲಿರುವವು.

ಮನುಷ್ಯನ ಪ್ರಗತಿಯು ದೃಢನಿಶ್ಚಯದಿಂದ ಬಹುಬೇಗ ಆಗು
ವದು. ಕೈ. ವಾ. ಗೋಪಾಳ ಕೃಷ್ಣ ಗೋಖಲೆಯವರು ತೀಕ್ಷ್ಣ
ಬುದ್ಧಿಯವರಾಗಿರದಿದ್ದರೂ, ಬಾಲ್ಯದಿಂದಲೇ ಅವರು ತಾವೊಬ್ಬ
ಪ್ರಸಿದ್ಧ ಪುರುಷರಾಗಿ ರಾಷ್ಟ್ರಕಾರ್ಯ ಮಾಡಬೇಕೆಂಬ ಹಂಬಲವು
ಳ್ಳವರಾಗಿದ್ದರು. ಆ ಬಗ್ಗೆ ಅವರು ಒಮ್ಮನಸಿನಿಂದ ಪ್ರಯತ್ನಿಸಿ
ಪ್ರಸಿದ್ಧಿಗೆ ಬಂದರು. ಲಾರ್ಡ ಕ್ಲೈವನಲ್ಲಿ ದೃಢಮನಸ್ಸಿಲ್ಲದಿದ್ದರೆ,
ಇಂಗ್ಲಿಷರ ರಾಜ್ಯವು ಹಿಂದುಸ್ಥಾನದಲ್ಲಿ ನೆಲೆಗೊಳ್ಳುವದು ಸಂಶಯಾ
ಸ್ಪದವಾಗುತ್ತಿತ್ತು. ದೇಶಹಿತ ಕಾರ್ಯದಲ್ಲಿ ದೃಢಮನಸ್ಸಿಡದಿ
ದ್ದರೆ, ಲೋಕಮಾನ್ಯ ಬಾಳ ಗಂಗಾಧರ ಟಿಳಕರವರಿಂದ ಇಷ್ಟು
ಕಷ್ಟ ಸಹಿಸುವದಾಗುತ್ತಿದ್ದಿಲ್ಲ. ಆದ್ದರಿಂದ ಪ್ರಗತಿಗಾಮಿಯಾಗ
ಬಯಸುವ ಪ್ರತಿಯೊಬ್ಬ ಮನುಷ್ಯನು ದೃಢನಿಶ್ಚಯವುಳ್ಳವನಾಗಿ
ರಲೇಬೇಕು. ದೃಢನಿಶ್ಚಯದಿಂದ ಕರ್ತವ್ಯನಿಷ್ಠೆಯೂ, ಸತ್ಯಪಕ್ಷ

ಪಾತಿತ್ರವೂ, ಆತ್ಮಹಿತವೂ, ದೇಶಾಭಿಮಾನವೂ, ಪರೋಪಕಾರ ಬುದ್ಧಿಯೂ. ನಿಸ್ಸೀಮವಾದ ಧೈರ್ಯವೂ, ಸ್ಪಷ್ಟವಾದಿತ್ವವೂ ಇನ್ನೂ ಅನೇಕ ಸುಗುಣಗಳೂ ಲಭಿಸಿ, ಪ್ರಗತಿಗೆ ಕಾರಣೀಭೂತ ಗಳಾಗುವವು.

## ೩ನೆಯ ಖಂಡ—ರೂಢಿಯ ಪರಿತ್ಯಾಗ,

ಲೋ, ಟಿಳಕರು ದೇಶಹಿತಕಾರ್ಯವನ್ನು ಸಾಧಿಸುವಾಗ ಹಿಂದೆ ಇಂಥಿಂಥವರು ಹೀಗೆಯೇ ಆಚರಿಸಿ ದೇಶಹಿತಸಾಧಿಸಿರುವರೆಂಬ ರೂಢಿ ಯನ್ನು ಅನುಕರಿಸಲಿಲ್ಲ; ಶ್ರೀ ಶಿವಾಜಿಮಹಾರಾಜರು ಸ್ವರಾಜ್ಯಸ್ಥಾ ಪಿಸುವಾಗ ಪೂರ್ವಜರ ಅನುಕರಣ ಮಾಡಿ ರಾಜ್ಯಗಳಿಸಲಿಲ್ಲ ಅವರ 'ಗನೀನೊಕ್ಲಾವಾ' ಯುದ್ಧವು ಅಪೂರ್ವವಾಗಿತ್ತು. ಕೇಸರನು ಮೊದ ಲಿನ ಯುದ್ಧದ ಎಲ್ಲ ಪದ್ಧತಿ-ರೂಢಿಗಳನ್ನು ತಿರಸ್ಕರಿಸಿ ಹೊಸ ಪದ್ಧತಿ ಯನ್ನೇ ಗೊತ್ತುಮಾಡಿಕೊಂಡನಲ್ಲವೆ! ಪ್ರಗತಿಗಾಮೇಚ್ಛುವು ರೂಢಿಗ ಳನ್ನು, ವಿಶೇಷವಾಗಿ ದುಷ್ಟರೂಢಿಗಳನ್ನು, ಅನುಕರಣಮಾಡುವ ಗೊಡವಿಗೆ ಸರ್ವಥಾ ಹೋಗಬಾರದು.

ಹಿಂದೆ ಆಗಿಹೋದ ಎಲ್ಲ ಮುಂದಾಳುಗಳು ರೂಢಿವಿನಾಶಕರೇ ಆಗಿದ್ದರೆನ್ನಬಹುದು. ಪ್ರತಿಯೊಂದು ಪ್ರಕೃತಿಯು ರೂಪ, ಲಾವಣ್ಯ, ಸ್ವಭಾವ ಮೊದಲಾದವುಗಳಲ್ಲಿ ಭಿನ್ನವಾಗಿರಲು, ಆ ಪ್ರಕೃತಿಯು ಭಿನ್ನ ಪ್ರಕೃತಿಯವರ ರೂಢಿಯನ್ನು ಅನುಕರಿಸುವದಾದರೂ ಹ್ಯಾಗೆ ಯೋಗ್ಯವೆನಿಸುವದು? ಪ್ರಸಿದ್ಧಿಗೆಬಾರದಮುಂದಾಳುವಾಗದಮನುಷ್ಯನು ಎಂಥ ಸಾಮರ್ಥ್ಯವಂತನಿದ್ದರೂ, ಬಹು ದೊಡ್ಡ ಶ್ರೀಮಂತನಿದ್ದರೂ ಕೇವಲ ಬುದ್ಧಿವಂತನಿದ್ದರೂ ಪ್ರಯೋಜನವಿಲ್ಲ. ಯಾಕಂದರೆ ಅವನು ರೂಢಿಗಳ ನಾಶಕ್ಕೆ ಬಹಳ ಹೆದರುತ್ತಿದ್ದದರಿಂದ ಅವನ ಸಾಮರ್ಥ್ಯವೂ, ದುಡ್ಡೂ, ಬುದ್ಧಿಯೂ ಪ್ರಯೋಜನವಾಗುವದಿಲ್ಲ. ಅಪೂರ್ವತೆಯೂ, ನಿರ್ಭಯತನವೂ ಯಶಸ್ವಿಪುರುಷನ ಮುಖ್ಯಲಕ್ಷಣಗಳಾಗಿವೆ. ಹಳೇ ದುಷ್ಟರೂಢಿಗಳು ಅವು ಎಷ್ಟೇ ಪ್ರಾಚೀನಗಳಾಗಿರಲಿ, ಅವುಗಳಬಗ್ಗೆ

ಪ್ರಗತಿಗಾಮಿಯಲ್ಲಿ ಆದರವಿರಲಾರದು. ಹಳೇದನ್ನು ತೀಡುತ್ತ ಕೂಡ್ರದೆ, ಅವನು ಅದರಲ್ಲಿಯ ಯೋಗ್ಯ ಗುಣವನ್ನಷ್ಟು ಸ್ವೀಕರಿಸುವನು. ಪ್ರಗತಿಗಾಮಿಗಳು ಆತ್ಮವಿಶ್ವಾಸದಿಂದ ಪ್ರೇರಿತರಾಗಿ ಯೋಗ್ಯ ವಿಚಾರಿಗಳಾಗಿ ಧೈರ್ಯದಿಂದ ಯುಕ್ತರಾಗಿ ಶೋಧಕಬುದ್ಧಿಯುವರಾಗಿ ಸಮಾಜರೂಢಿಗಳನ್ನು ಮುರಿಯುವರು; ಹಾಗು ಹಿಂದೆ ಯಾರೂ ಎಂದೂ ತುಳಿಯದ ಮಾರ್ಗವನ್ನು ತುಳಿದು ಪ್ರಗತಿಹೊಂದುವರು.

ಒಂದು ಸಂಗತಿಯು ಕೇವಲ ಹೊಸದೆಂದು ಅದನ್ನು ಮಾಡಲು ಹೆದರಬಾರದು. ಹಾಗು ನಮ್ಮ ತಂದೆಯು, ಅಜ್ಜ-ಮುತ್ತಜ್ಜರ, ಆಪ್ತೇಷ್ಟರ, ಮಿತ್ರರ ಇಲ್ಲವೆ ಸಮಾಜದ ದುಷ್ಟ ರೂಢಿಗಳನ್ನು ತಿಳಿದೂತಿಳಿದು ಅನುಕರಣಮಾಡಬಾರದು. ಇಂಥ ರೂಢಿಗಳ ಅನುಕರಣಮಾಡೋಣವು ಕೇವಲ ಹಾಸ್ಯಾಸ್ಪದವಾಗಿರುವದು. ಪ್ರತಿಯೊಬ್ಬ ಮನುಷ್ಯನು ಒಂದು ವಿಶಿಷ್ಟಕಾರ್ಯಕ್ಕಾಗಿ ಅವತರಿಸಿರುತ್ತಾನೆ. ಆದರೆ ಅವನು ರೂಢಿವಿನಾಶಕನಾಗದ್ದರಿಂದ ಇಷ್ಟಾರ್ಥವನ್ನು ಸಾಧಿಸಿಕೊಳ್ಳದೆ ಮರಣಹೊಂದುವನು. ಪ್ರಸಿದ್ಧಿಗೆ ಬರುವ ಮನುಷ್ಯನು ಅನುಕರಣಪ್ರಿಯನಾಗಿರದೆ, ಸ್ವತಂತ್ರವಿಚಾರ ಆಚಾರದವನಾಗಿರುತ್ತಾನೆ. ಅವನು ಮಾಡುವ ಪ್ರತಿಯೊಂದು ಕೃತಿಯು, ಉದ್ಯೋಗವು, ಉಪದೇಶವು, ಯುಕ್ತಿಗಳು ಕೇವಲ ಅವರ ಸ್ವಂತದ ವಿಚಾರದವಾಗಿರುತ್ತವೆ.

ಹೆರವರ ಸಹಾಯದ ಹೊರತು ಪ್ರಗತಿ ಹೊಂದಲಿಕ್ಕೆ ಯಾರು ಹೆದರುವರೋ ರೂಢಿಗಳನ್ನು ಒದೆದು ಮುಂದಕ್ಕೆ ಬರಲು ಯಾರಿಗೆ ಧೈರ್ಯಸಾಲದೋ ಇಂಥವರು ಪ್ರಖ್ಯಾತರಾಗುವದಂತೂ ಒತ್ತಟ್ಟಿಗಿರಲಿ. ಇವರು ಜಗತ್ತಿನಲ್ಲಿ ಇರುವರೆಂಬದು ಕೂಡ ಮಂದಿಗೆ ಗೊತ್ತಾಗುವ ಸಂಭವವಿಲ್ಲ. ಅನುಕರಣದಂಥ ನಾಶಕಾರಕವಾದ ಪ್ರಗತಿಗೆ ಬಾಧೆತರುವಂಥ ಬೇರೊಂದು ಸಂಗತಿಯು ಸಿಗಲಾರದು. ಅನುಕರಣದಿಂದ ಸ್ವಂತದ ವಿಶಿಷ್ಟತ್ವವು ಇಲ್ಲದಂತಾಗುವದು; ಉತ್ಪಾದಕಶಕ್ತಿಯು ನಾಶವಾಗುವದು. ಕಲ್ಪಕಶಕ್ತಿಯು ಕುಂಠಿತವಾಗುವದು.

ಋಶಿಃಪ್ರಾಪ್ತಿಯು ಅನುಕರಣದಿಂದ ಸರ್ವಥಾ ಪ್ರಾಪ್ತವಾಗುವದಿಲ್ಲ.

ಎಷ್ಟೋಜನರು ಲೋ. ಟಿಳಕರಂತೆ ಪ್ರೋಕ್ತವಾದ ಭಾಷಣಮಾಡ ಲೆಳಿಸಿಯೂ, ಮ. ರಾ. ರಾ. ಹರಿ ನಾರಾಯಣ ಆಪಟೆ ಇವರಂತೆಕಾದಂಬ ರಿಗಳನ್ನು ಬರೆಯಲೆಳಿಸಿಯೂ, ಪ್ರೋ. ರಾಮಮೂರ್ತಿ ಇಲ್ಲವೆಸ್ಯಾಂಡೋ ಇವರಂತೆ ಅಂಗಸಾಧನಮಾಡಲೆಳಿಸಿಯೂ, ಮಿ. ಅಬ್ದುಲ್‌ಕರಿಮಖಾನ ಇಲ್ಲವೆ ಬಾಲಗಂಧರ್ವ ಇವರಂತೆ ಗಾನಾಲಾಪಮಾಡಲೆಳಿಸಿಯೂ, ಪ್ರಸಿದ್ಧಹರಿದಾಸರ ಇಲ್ಲವೆ ಪೌರಾಣಿಕರ ಅದರಂತೆ ಸಾಧು ಸಜ್ಜನರ ಇಲ್ಲವೆ ಸನ್ಯಾಸಿಗಳ ಅನುಕರಣಮಾಡಲೆಳಿಸಿಯೂ ಪ್ರಖ್ಯಾತರಾಗಬೇ ಕೆನ್ನುವರು. ಆದರೆ ಮಂದಿಯು ಅನುಕರಣವು (ನಕಲು) ಚೆನ್ನಾಗಿ ಸಾಧಿಸದ್ದರಿಂದ ಆ ಹತಭಾಗಿಗಳು "ಹಿಂದಿನ ಮನೆ ಭಿಕ್ಷವೂ ಹೋ ಯಿತು, ಮುಂದಿನ ಮನೆಯ ಕೋರಾನ್ನವೂ ತಪ್ಪಿತು." ಎಂಬಂತೆ ನಿರಾಶರಾಗುವರು; ಅಲ್ಲದೆ ಅನುಕರಣಮಾಡುವವನು ತನ್ನನೈಸರ್ಗಿಕ ವಿಶಿಷ್ಟಗುಣವನ್ನು ಕೂಡ ಶಾಶ್ವತವಾಗಿ ಕಳಕೊಳ್ಳಬೇಕಾಗುತ್ತದೆ. ಅನುಕರಣವು (ನಕಲು) ನೈಸರ್ಗಿಕ ವೃತ್ತಿಗಿಂತ ಭಿನ್ನವಾಗುವದು. ಹ್ಯಾಗೆಂದರೆ, ಅನ್ನವನ್ನು ಪುನಃ ಬೇಯಿಸಿದರೆ, ಆದರ ರುಚಿಯು ಅಕ್ಕಿ ಅನ್ನಗಳಿಗಿಂತ ತೀರಭಿನ್ನವಾಗುವದಲ್ಲದೆ, ಪಚನಶಕ್ತಿಗೆ ಕೂಡ ಅದು ಹೆಚ್ಚು ಜಡವಾಗುವದು. ಇದರಂತೆ ನೈಸರ್ಗಿಕ ವೃತ್ತಿಯುವನ ಆಚಾರ ವಿ ಚಾ ರ ಗ ಳು ಜನರಿಗೆ ರುಚಿಸುವಂತೆ, ಅನುಕರಣ ಮಾಡುವವನ ಆಚಾರ ವಿಚಾರಗಳು ರುಚಿಸುವದಿಲ್ಲ. ಇಷ್ಟೇ ಅಲ್ಲ ಜನರು ಆ ಅನುಕರಣೆಯನ್ನು ಹೆಚ್ಚಾಗಿ ದ್ವೇಷಿಸಹತ್ತುವರು.

ಸ್ವಾತಂತ್ರ್ಯಪ್ರೀತಿಯನ್ನು ಜಾಗ್ರತಗೊಳಿಸದ್ದರಿಂದಲೂ, ಸ್ವಂತ ದಲ್ಲಿ ದೃಢನಿಶ್ಚಯವಿರದ್ದರಿಂದಲೂ ಅನುಕರಣದಂಥ ಹೇಯವೃತ್ತಿ ಯನ್ನು ಮನುಷ್ಯನು ಸ್ವೀಕರಿಸಬೇಕಾಗುತ್ತದೆ. ಅನುಕರಣಮಾ ಡುವವರ ಸಂಖ್ಯೆಯು ಹೆಚ್ಚು ಇದ್ದಂತೆ, ಅನುಕರಣೀಯ ಪುರುಷರ ಸಂಖ್ಯೆಯು ಹೆಚ್ಚು ಇರುವದಿಲ್ಲ. ಆ ಜನರು ಬಹುಸ್ವಲ್ಪಮಂದಿಗ ಳಿರುವರು. ಖರೇ ಅನುಕರಣೀಯ ಮನುಷ್ಯನು ವಿಶಿಷ್ಟಕೃತಿ

ಯನ್ನು ಮಾಡಿ, ಪ್ರಸಿದ್ಧನಾಗಿ ಪ್ರಗತಿಹೊಂದುವನು. ಇವನೇ ದಾಸ್ಯದ ಶೃಂಖಲೆಯನ್ನು ಚೂರುಮಾಡಲಿಕ್ಕೆ ಕಾರಣನಾಗುವನು. ಪ್ರಗತಿಹೊಂದುವ ಇಚ್ಛೆಯುಳ್ಳವನು ಇಂಥ ಮನುಷ್ಯನ ಪ್ರತಿಯೊಂದು ಕೃತಿಯನ್ನು ಅನುಕರಣ ಮಾಡದೆ, ಅವನಲ್ಲಿಯ ವಿಶಿಷ್ಟಗುಣಗಳಲ್ಲಿ ಯಾವವು ತಮ್ಮ ವಿಶಿಷ್ಟಗುಣಗಳ ಪೋಷಣೆಗೆ ಅವಶ್ಯವಾಗಿರುವವೋ ಅವುಗಳನ್ನು ಮಾತ್ರ, ಹುಲಿಯು ಇಡಿ ಪ್ರಾಣಿಯನ್ನು ತಿನ್ನದೆ ಬರೇ ರಕ್ತವನ್ನು ಹೀರಿಕೊಳ್ಳುವಂತೆ, ಶೋಷಿಸಿಕೊಳ್ಳತಕ್ಕದ್ದು.

ದೃಢನಿಶ್ಚಯದ ಹಾಗು ಅಲೌಕಿಕ ಮನುಷ್ಯನಿಗೆ ಯೋಗ್ಯ ಮಾರ್ಗ ತೋರಿಸಲಿಕ್ಕೆ ಸೃಷ್ಟಿಯು ಸದಾತತ್ಪರವಾಗಿರುತ್ತದೆ! ಪರಾವಲಂಬಿಯೂ, ಹೇಡಿಯೂ ಆದವನಿಗೆ ಅದು ಕೊಂಚವೂ ಸಹಾಯ ಮಾಡಲಾರದು. ಲೋಕದಲ್ಲಿ ಅಪೂರ್ವತೆಯುಳ್ಳವರ ಅವಶ್ಯಕತೆಯು ಹೆಚ್ಚಾಗಿರುವದು. ಕೇವಲ ಹೊಸ ಪದ್ಧತಿಯಿಂದ ಔಷಧ ಕೊಡುವ ವೈದ್ಯರೂ, ಹೊಸ ಹೊಸ ತರದ ಯಂತ್ರಗಳನ್ನು ತಯಾರಿಸುವ ಯಂತ್ರಕಲಾನಿಪುಣರೂ, ವಿಶಿಷ್ಟಪದ್ಧತಿಯಿಂದ ಖಟ್ಲೆನಡಿಸುವ ವಕೀಲರೂ, ಹಿಂದೆ ಯಾರೂ ಬೋಧಿಸದೆ ಇದ್ದರೀತಿಯಿಂದ ಬೋಧಿಸುವ ಉಪದೇಶಕರೂ, ಹೊಸ ಪದ್ಧತಿಯಿಂದ ಕಲಿಸುವ ಶಿಕ್ಷಕರೂ, ವಿಶೇಷವಾಗಿ ಬೇಕಾಗಿರುವರು. ಈಗಿನ ಮನ್ವಂತರದಲ್ಲಿ ಇಂಥ ಜನರ ಮೇಲಾಟವು ನಡದೇ ಇರುವದು. ಆದರೂ ಎಂಥ ಹೊಸ ವಸ್ತುವಾದರೂ ಅದನ್ನು ಒಮ್ಮೆ ಉಪಯೋಗಿಸಿದ ಮಾತ್ರದಿಂದ ಅದು 'ಸೆಕಂಡಹ್ಯಾಂಡ' ಎಂದು ಕರೆಯಲ್ಪಟ್ಟು ಬೆಲೆಯಲ್ಲಿ ಅದು ಹ್ಯಾಗೆ ಕಡಿಮೆತರದ್ದಾಗುವದೋ ಹಾಗೆ ಇಂದಿನ ವಿಶಿಷ್ಟತ್ವವು ನಾಳೆಗೆ ಹಳೆಯದಾಗುವದರಿಂದ, ಪ್ರಗತಿಗಾಮಿಗಳು ತಮ್ಮ ವಿಶಿಷ್ಟತ್ವವನ್ನು ಸ್ಥಾಪಿಸಲು ಹಿಂದೆಗೆಯಬಾರದು.

ನಾವು ಪ್ರಗತಿಹೊಂದಲಿಕ್ಕೆ ಬೇಕಾಗುವ ಶಕ್ತಿಯು ನಮ್ಮಲ್ಲೇ ಇರುತ್ತದೆ. ಅದು ನಮ್ಮ ವಿಶಿಷ್ಟ ಈರ್ಷೆಯಲ್ಲಿಯೂ, ದೃಢನಿಶ್ಚಯದಲ್ಲಿಯೂ, ನಡಾವಳಿಯಲ್ಲಿಯೂ, ಅಪೂರ್ವತೆಯಲ್ಲಿಯೂ ತುಂಬಿ

ತುಳುಕುತ್ತಿರುತ್ತದೆ. ಹೊರಗಿನ ಶಕ್ತಿಯ ಅಪೇಕ್ಷೆಮಾಡದೆ ಎಷ್ಟು ಬೇಗನೆ ಸ್ವಾವಲಂಬಿಗಳಾಗಿ ನಡೆಯಹತ್ತುವೆವೋ ಅಷ್ಟು ಬೇಗನೆ ನಾವು ನಿಶ್ಚಯದಿಂದ ಪ್ರಗತಿಯನ್ನು ಹೊಂದಿ ದಾಸ್ಯವಿಮೋಚಿತರಾಗುವೆವು.

ನಮ್ಮಲ್ಲಿಯ ಅಪೂರ್ವತೆಯನ್ನು ತೋರಿಸಲು ನಮಗೆ ಧೈರ್ಯ ಸಾಲದ್ದರಿಂದ ನಾವು ಪರರಿಗೆ ದಾಸರಾಗಿರಬೇಕಾಗಿದೆ. ಯಾರು ಅಪೂರ್ವತೆಯನ್ನು ತೋರುವರೋ ಅವರು ಒಂದಿಲ್ಲೊಂದು ರೀತಿಯಿಂದ ಪ್ರಸಿದ್ಧಿಗೆ ಬಂದೇಬರುವರು. ಯಶಸ್ವಿ ಉದ್ಯೋಗಸ್ಥನಿಗೆ ಜಗತ್ತು ಅಪೂರ್ವವಾಗಿ ತೋರುವದು: ಅವನು ಸಾಧ್ಯವಿದ್ದಷ್ಟುಗೆ ಅಪೂರ್ವತೆಯನ್ನು ತನ್ನ ಉದ್ಯೋಗದಲ್ಲಿ ಉಪಯೋಗಿಸುವನು. ಯಾವ ರೂಢಿಗಳನ್ನೂ ಅನುಕರಣಮಾಡುವ ಗೊಡವಿಗೆ ಅವನು ಹೋಗುವದಿಲ್ಲ. ಜಗತ್ತು ಅಂದರೆ ಹಲವು ದುಷ್ಟರೂಢಿಗಳ ಹಾಗು ಅಂಧಪರಂಪರೆಗಳ ದ್ಯೋತಕವಾಗಿರುವದೆಂದು ಭಾವಿಸಿ ಅದಕ್ಕೆ ಎದೆಗೊಡಲು ಅವನು ಯಾವಾಗಲೂ ಸಿದ್ಧನಾಗಿರುತ್ತಾನೆ.

ಪ್ರಸ್ತುತದ ಮಹಾಯುದ್ಧದಲ್ಲಿ ನಿನ್ನೆ ಉಪಯೋಗಿಸಿದ ಪ್ರಚಂಡ ತೋಫುಗಳು ಈ ದಿನ ನಿರುಪಯೋಗಿಗಳಾಗಿ ತೋರುವವು; ಅವಕ್ಕಿಂತ ಗತಿಯಲ್ಲಿ ಹೆಚ್ಚಾಗಿಯೂ ಭಾರದಲ್ಲಿ ಕಡಿಮೆಯಾಗಿಯೂ, ಬೇರೆ ವಿಶಿಷ್ಟತ್ವವುಳ್ಳವುಗಳಾಗಿಯೂ ಆಗಿರುವ ಇಂದಿನ ತೋಫುಗಳು ಅವನ್ನು ತುಚ್ಛೀಕರಿಸಿಬಿಡುವವು. ಅದರಂತೆ ಈ ವರೆಗೆ ಪ್ರಚಾರದಲ್ಲಿದ್ದ ಉಗೆಬಂಡಿಗಳನ್ನು ವಿಮಾನಗಳು, ತಂತಿಟಪಾಲನ್ನು ತಂತಿಯಿಲ್ಲದೆ ಈ ಧರದ ದ್ವಾರಾ ಬರುವ ಟಪಾಲುಗಳು ಆಕ್ರಮಿಸಿ ತಮ್ಮ ತಮ್ಮ ವಿಶಿಷ್ಟಗುಣಗಳಿಂದ ಮೆರೆಯ ಹತ್ತಿರುವವು. ಹಿಂದಕ್ಕೆ ಪ್ರಚಾರದಲ್ಲಿದ್ದ ಶಿಲಾಪ್ರೆಸ್ಸುಗಳು ಮೂಲಿಗೆ ಬಿದ್ದು ಮೊಳೆಗಳ ಛಾಪಖಾನೆಗಳು ಈಗಿನ ಸುಧಾರಣೆಯಲ್ಲಿ ಕಂಗೊಳಿಸುತ್ತಿರುವವು. ಕೆಲವು ವರ್ಷಗಳ ಮುಂಚೆ ಇದ್ದ ಹತ್ತೀರಾಟಗಳು ಜಂಗುಹಿಡಿಯಹತ್ತಿ ಜಿನ್ನುಗಳೂ, ಪ್ರೆಸ್ಸುಗಳೂ ಮುಂದುವರೆಯಹತ್ತಿರುವವು: ಹೀಗೆ ಲೋಕ

ದಲ್ಲಿ ವಿಶಿಷ್ಟತ್ವಕ್ಕೆ ಮಹತ್ವವುಂಟಾಗಿರುವದರಿಂದ ಪ್ರತಿಯೊಬ್ಬನೂ ಯೋಗ್ಯವಾದ ಮಾರ್ಗವನ್ನವಲಂಬಿಸಿ ಪ್ರಗತಿಯನ್ನು ಹೊಂದ ಹತ್ತಬೇಕು.

ಯಾರು ಹೊಸದನ್ನು ತಿರಸ್ಕರಿಸುವರೋ, ಹಳೇದನ್ನು ಅನುಕರಿಸುವದರಲ್ಲಿಯೂ, ಅದರ ವಿಷಯಕ್ಕೆ ಅಭಿಮಾನವಹಿಸುವದರಲ್ಲಿಯೂ ಭೂಷಣವೆಂದು ತಿಳಕೊಳ್ಳುವರೋ, ಅಪೂರ್ವತೆಯನ್ನು ವ್ಯಕ್ತಗೊಳಿಸುವದು ಯಾರಿಗೆ ಶಕ್ಯವಾಗಿ ತೋರುವದಿಲ್ಲವೋ, ಇಂಥವರ ಪ್ರಗತಿಯು ಬಹುಶಃ ಆಗುವದಿಲ್ಲ. ಕಠಿಣಸಂಗತಿಗಳನ್ನು ಅಶಕ್ಯವೆಂದು ತಿಳಿಯುವದೇ ಪ್ರಗತಿರಹಿತನ-ಅಪೂರ್ವತೆಯು ಇಲ್ಲದವನ ಮುಖ್ಯ ಲಕ್ಷಣವಾಗಿದೆ. ಇದಕ್ಕೆ ಮಹಾಭಾರತದೊಳಗಿನ ಒಂದು ಚಿಕ್ಕಸಂಗತಿಯ ಉದಾಹರಣೆಯನ್ನು ಕೊಡುವಾ!

ದುರ್ಯೋಧನನು ಸಭೆಯಲ್ಲಿ ಕುಳಿತಾಗ ಆಕಸ್ಮಿಕವಾಗಿ ನಾರದರು ಬಂದರು. ಆಗ ರಾಜನು ನಾರದರನ್ನು ಯಥಾಯೋಗ್ಯ ಉಪಚರಿಸಿ,—ಸ್ವಾಮಿ, ನೀವು ತ್ರಿಲೋಕಸಂಚಾರಿಗಳು. ಯಾವದಾದರೂ ಹೊಸ ಸಂಗತಿಯನ್ನು ಕಂಡಿದ್ದರೆ ತಿಳಿಸುವದಾಗಬೇಕು. ಎಂದು ಕೇಳಿಕೊಂಡನು. ಅದಕ್ಕೆ ನಾರದರು—ವಿಶ್ವಾಸದಿಂದ ಕೇಳುತ್ತಿದ್ದರೆ ಹೇಳುವೆನು. ಎಂದು ಹೇಳಲು, ದುರ್ಯೋಧನನು ಒಪ್ಪಿಕೊಂಡನು ಆಗ ನಾರದರು—ವಿಶ್ವಾಸದಿಂದ ಕೇಳಬೇಕು ಮಹಾರಾಜಾ, ವಿಷ್ಣುಲೋಕದಿಂದ ಭೂಲೋಕಕ್ಕೆ ಬರುವಾಗ ಮಾರ್ಗದಲ್ಲಿ ವಿಶ್ವಾಸದಿಂದ ಕೇಳಬೇಕು ಮಹಾರಾಜಾ, ಒಂದು ಸೂಜಿಯಹೆಜ್ಜದಲ್ಲಿ ಅಕ್ಷೋಹಿಣಿ ಗಟ್ಟಲೆ.ಸೈನ್ಯವು ಹಾಯ್ದುಹೋಯಿತು ಎಂದು ಹೇಳಿದನು. ಅದನ್ನು ದುರ್ಯೋಧನನು ಅಶಕ್ಯವೆಂದು ಭಾವಿಸಿ ನಕ್ಕನು. ಮರ್ಮವನ್ನು ತಿಳಿದ ನಾರದರು ಕೂಡಲೆ ಅಲ್ಲಿಂದ ಹೊರಟು ಧರ್ಮರಾಜನಿದ್ದಲ್ಲಿಗೆ ಹೋಗಿ ಅವನಿಗೂ ಈ ಸಂಗತಿಯನ್ನು ಮೊಲಿನಂತೆಯೇ ನಿವೇದಿಸಿದರು. ಆದರೆ ಸ್ವತಃಅಪೂರ್ವಸ್ವಭಾವವುಳ್ಳ ಧರ್ಮರಾಜನಿಗೆ ನಾರದರ ವಾಕ್ಯವು ಸತ್ಯವಾಗಿ ತೋರಿತು. ಧರ್ಮರಾಜನು ತನ್ನ ಅಪೂ

ರ್ವತೆಯನ್ನು ವ್ಯಕ್ತಗೊಳಿಸಿ ಸುಯೋಧನನಂಥ ಮಹಾಬಲಿಷ್ಠನನ್ನು
ಸಹ ಹೇಳಹೆಸರಿಲ್ಲದಂತೆ ಮಾಡಿದನು.

ಆದ್ದರಿಂದ ಪ್ರಗತಿಗಾಮಿಯುಳ್ಳ ಮನುಷ್ಯನಿಗೆ ಯಾವ ಸಂಗ ತಿಯೂ ಅಶಕ್ಯವಾಗಿ ತೋರುವದಿಲ್ಲ. ಸಂಕಟಗಳಿಗೂ, ದ್ವೇಷ ಅಸೂಯೆಗಳಿಗೂ, ಉಪಹಾಸ-ಅಪಮಾನಗಳಿಗೂ ಹೆದರದೆ, ಹಳೆ ರೂಢಿ-(ದುಷ್ಟರೂಢಿಗಳನ್ನು) ಕಿತ್ತಿ ಒಗೆಯುವ, ಹಾಗು ಪ್ರತಿನಿತ್ಯ ಅಪೂರ್ವತೆಯನ್ನು ತೋರುವ ಮನುಷ್ಯರಿಂದಲೇ ಈ ಇಪ್ಪತ್ತನೆಯ ಶತಮಾನದ ಎಲ್ಲ ಸುಖಸಂಪತ್ತುಗಳು ಸಿದ್ಧವಾಗಿರುವವು.

ಪ್ರತಿಧ್ವನಿ, ಅನುಕರಣ, ನಕಲು ಈ ತ್ರಯಿಗಳ ಸಂಗತಿಯಿಂದ ಯಾವನ ಮಹತ್ವಾಕಾಂಕ್ಷೆಯೂ ಈಡೇರಲಾರದು ಸ್ವಾತಂತ್ರ್ಯಪ್ರೀತಿ ಯುಳ್ಳ, ದೃಢನಿಶ್ಚಯವುಳ್ಳ ಹಾಗು ರೂಢಿಗಳ ಬಗ್ಗೆ ನಿರ್ಭಯೆ ವುಳ್ಳ ಮನುಷ್ಯನಿಂದಲೇ ಯಾವದಾದರೂ ಹೊಸ ಕಾರ್ಯವಾದು ಆಗಬೇಕು. ಇಂಥ ಸ್ವಭಾವವುಳ್ಳವರು ನಿಶ್ಚಿತಕಾರ್ಯವನ್ನು ಒಮ್ಮೆಲೆ ಆರಂಭಿಸಬೇಕು. ಮೀನ-ಮೇಷಮಾಡುತ್ತ ಕೂಡ್ರಬಾರದು

---

## ಳನೆಯ ಖಂಡ—ಸಾಧನಾಭಾವ.

ಮನಸ್ಸಿನಲ್ಲಿ ನೌಕರಿಮಾಡುವದಿಲ್ಲ; ಆದರೆ ಪ್ರಸ್ತುತ ಕಠಿಣಕಾಲದ ಮೂಲಕ ಯಾವ ಸ್ವತಂತ್ರ ಧಂದೆಯನ್ನೂ ತೆಗೆಯು ಹಾಗಿಲ್ಲವೆಂದೂ, ಮನೆಯಲ್ಲಿ ಒಬ್ಬೊಂಟಿಗನಾದ್ದರಿಂದ ಯಾ ಉದ್ಯೋಗವನ್ನೂ ಕೈಕೊಳ್ಳಲಾರೆನೆಂತಲೂ, ಏನು ಮಾಡುವಿ ನನಗೆ ದುಡ್ಡಿನ ಕೊರತೆಯೊಂದಿಲ್ಲದಿದ್ದರೆ ನಾನು ಇಂಥ ಹಲವ ಉದ್ಯೋಗಗಳನ್ನು ಸಾಗಿಸುತ್ತಿದ್ದೆನೆಂತಲೂ, ನನ್ನ ಪ್ರಕೃತಿ ಸರಿಯೆ ಗಿಲ್ಲ, ಆದ್ದರಿಂದ ನಾನು ಕಮತಮಾಡುವಹಾಗಿಲ್ಲವೆಂತಲೂ, ಮನೆ ಯಲ್ಲಿ ಚಿಕ್ಕ ಚಿಕ್ಕ ಮಕ್ಕಳಿರುವದರಿಂದ ಪ್ರಕೃತದ ಯುದ್ಧದಲ್ಲಿ ಸ್ವಯಂಸೇವಕನಾಗಿ ಯುದ್ಧಮಾಡುವದು ನನಗೆ ಸಾಧಿಸದೆಂತಲೂ ಹಲವರು ಹಲವು ವಿಧವಾಗಿಹೊರಪಡಿಸುವ ಉದ್ಗಾರಗಳನ್ನು ಲಕ್ಷ

ಪೂರ್ವಕವಾಗಿ ಕೇಳಿದರೆ, ಆ ಎಲ್ಲರ ಕಾರ್ಯಸಾಧನೆಗೂ ಒಂದೇ ಒಂದು ಸಂಗತಿಯ ಅಭಾವವು ವ್ಯಕ್ತವಾಗುವದು. ಆ ಸಂಗತಿ ಯಾವದೆಂದರೆ ಸಾಧನಾಭಾವವು. ಕೆಲವರಿಗೆ ಸಮಯದ ಅಭಾವ, ಕೆಲವರಿಗೆ ಮನುಷ್ಯರ ಅಭಾವ, ಕೆಲವರಿಗೆ ದುಡ್ಡಿನ ಅಭಾವ, ಕೆಲವರಿಗೆ ಆರೋಗ್ಯದ ಅಭಾವ; ಹೀಗೆ ಎಲ್ಲಿ ನೋಡಿದರೂ ಸಾಧನಾಭಾವವೇ ಸಾಧನಾಭಾವವು.

"ಯಾವ ಪವಿತ್ರ ಭರತಭೂಮಿಯಲ್ಲಿ ನನ್ನ ಜನ್ಮವಾಗಿರುವದೋ ಆ ದೇಶದ ಸಲುವಾಗಿಯೂ, ನನ್ನ ಸ್ವಂತದ ಸಲುವಾಗಿಯೂ, ಹಾಗು ನನ್ನ ದೇಶಬಾಂಧವರ ಸಲುವಾಗಿಯೂ ಕೆಲಮಟ್ಟಿಗಾದರೂ ಹಿತದ ಕಾರ್ಯವನ್ನು ಮಾಡಬೇಕೆಂದು ನಾನು ಬಯಸುವೆನು. ಹಾಗು ಅದಕ್ಕಾಗಿ ನಾನು ಯಥಾಶಕ್ತಿ ವರ್ತಿಸುತ್ತಿರುವೆನು" ಎಂಬ ಸಂಕ್ಷಿಪ್ತ ವೃತ್ತಾಂತದಿಂದ ಕೈ, ನಾಮದಾರ ಗೋಖಲೆಯವರು ಒಂದು ಪ್ರಸಂಗದಲ್ಲಿ ವಿದ್ಯಾರ್ಥಿಗಳ ಮುಂದೆ ಆತ್ಮನಿವೇದನ ಮಾಡಿಕೊಂಡಿರುವರು. ದಾರಿದ್ರ್ಯಾವಸ್ಥೆಯಲ್ಲಿ ಹುಟ್ಟಿ, ಕೇವಲ ಬಡತನದಲ್ಲಿ ಬೆಳೆದು, ಸಂಕಟ ಪರಂಪರೆಗಳಿಂದ ವೇಷ್ಟಿತರಾಗಿ, ಪ್ರಗತಿಮಾರ್ಗದಲ್ಲಿ ಕೇವಲ ನಿರಾಧಾರರಾಗಿದ್ದ ಈ ಗೋಖಲೆಯವರು ಅತ್ಯಂತ ಪ್ರಗತಿಯನ್ನು ಹೊಂದಿ, ಹಿಂದೂಮಾತೆಯ ಸುಪುತ್ರರ ಮಾಲಿಕೆಯಲ್ಲಿ ಶೋಭಿಸುತ್ತಿರುವರು. ದೃಢನಿಶ್ಚಯದವನಿಗೆ ಪ್ರಗತಿಮಾರ್ಗವನ್ನು ತೋರಿಸಲಿಕ್ಕೆ ಸೃಷ್ಟಿಯು ಹ್ಯಾಗೆ ತತ್ಪರವಾಗಿರುತ್ತದೆಂಬದನ್ನೂ, ಯಶಃಪ್ರಾಪ್ತಿಯು ಕೇವಲ ಸಾಧನಗಳಲ್ಲಿರದೆ, ಮನುಷ್ಯನು ಪ್ರಯತ್ನದಿಂದ ಅದನ್ನು ಹ್ಯಾಗೆ ಸಾಧಿಸಬಹುದೆಂಬದನ್ನೂ ಗೋಪಾಳರಾವ ಗೋಖಲೆಯವರ ಉದಾಹರಣೆಯಿಂದ ತಿಳಿದುಕೊಳ್ಳಬಹುದಾಗಿದೆ. ಆ ಕಾಲಕ್ಕೆ ಪುಣೆಯಲ್ಲಿ ಗೋಪಾಳರಾಯರ ಸಮವಯಸ್ಕರಾದ ಎಷ್ಟೋ ಜನ ವಿದ್ಯಾರ್ಥಿಗಳು ಸಾಧನಾಭಾವದ ಸಲುವಾಗಿ ಅಳುತ್ತ ಕೂತಿದ್ದರು. ಆದರೆ ಗೋಪಾಳರಾಯರು ಅವರಂತೆ ಅಳಬುರಕರಾಗದ್ದರಿಂದ ಅವರು ಪ್ರತಿಯೊಂದು ಪ್ರತಿಕೂಲ ಪ್ರಸಂಗಕ್ಕೂ ಧೈರ್ಯ

ದಿಂದ ಎದೆಗೊಟ್ಟು ಇಷ್ಟಕಾರ್ಯಸಾಧಿಸಿದರು; ಅವರ ಧ್ಯೇಯವು ನಿಶ್ಚಿತವಾದ್ದರಿಂದ ಎಂಥ ಇಕ್ಕಟ್ಟಿನಪ್ರಸಂಗಗಳ ಪರಿಯು ಅವರ ಕಣ್ಣಿಗೆ ಬಂದರೂ ಅದರೊಳಗಿಂದ ಧ್ಯೇಯವು ಅವರಿಗೆ ಸ್ಪಷ್ಟವಾಗಿ ಕಾಣದೆ ಇರುತ್ತಿದ್ದಿಲ್ಲ. ಕೇವಲ ಸಾಧನಾಭಾವಸ್ಥಿತಿಯಲ್ಲಿ ಸಹ ಅವರಿಗೆ ತಮ್ಮ ಅಲೌಕಿಕ ಕಾರ್ಯದ ಹಲವು ಅನುಪಮ ಸಾಧನಗಳು ಗೋಚರವಾಗುತ್ತಿದ್ದವು. ಮಾರ್ಗದಲ್ಲಿ ಬರಬಹುದಾದ ಪ್ರತಿಯೊಂದು ಎಡರುಗಳಿಗೆ ಎದೆಗೊಡಲು ತಾನು ಸಮರ್ಥನಿದ್ದೇನೆಂದು ಗೋಪಾಳರಾಯರಿಗೆ ತೋರುತ್ತಿದ್ದದರಿಂದ ಅವರು ಸಂಕಟಗಳಿಗೆ ಹೆದರುತ್ತಿದ್ದಿಲ್ಲ; ಜೀವಿತಸಾಫಲ್ಯ ಮಾಡಿಕೊಳ್ಳುವ ಕಾರ್ಯದಲ್ಲಿ ಯಾವಾಗಲೂ ಮುಂದುವರಿಯುತ್ತಿದ್ದರು. ಗೋಪಾಳರಾಯರಿಗೆ ಹಲವು ಸಾಧನಗಳು ಬೇಕಾಗಿದ್ದವು. ಆದರೆ ಅವುಗಳ ಸಲುವಾಗಿ ಅವರು ತಮ್ಮ ಪ್ರಗತಿಯನ್ನು ನಿಲ್ಲಿಸಲಿಲ್ಲ: ಆ ಸಾಧನಗಳನ್ನು ಅವರು ತಮ್ಮ ಪ್ರಯತ್ನದಿಂದ ಕೈವಶ ಮಾಡಿಕೊಂಡರು.

ದೃಢನಿಶ್ಚಯವುಳ್ಳವರು ಕಾರಣಗಳನ್ನು ಹೇಳುತ್ತ ಕೂಡುವದಿಲ್ಲ. ಅವರ ಓಟವು ಸದಾ ಕೆಲಸದಕಡೆಗೇ ಇರುತ್ತದೆ. ಈ ಸ್ವಾವಲಂಬಿಗಳು ಮಂದಿಯಸಹಾಯದ ಅಪೇಕ್ಷೆಯನ್ನು ಸಹ ಸಾಬಯಿಸುವದಿಲ್ಲ ಅನುಕೂಲಸಮಯದ ನಿರೀಕ್ಷಣಮಾಡುತ್ತ ಕೂಡ್ರದೆ, ಇಷ್ಟಕಾರ್ಯ ಸಾಧಿಸುವದಕ್ಕಾಗಿ ಒಂದೊಂದು ಹೆಜ್ಜೆ ಮುಂದಿಕ್ಕುತ್ತಿರುತ್ತಾರೆ ಅವರ ಈ ಸಾಹಸದಿಂದ ಸಾಧನಗಳು ಅವರಿಗೆ ತಾವಾಗಿಯೇ ದೊರಕಹತ್ತುತ್ತವೆ. ಯಾರು ತಮಗೆ ಸಾಧನಾಭಾವವೆಂದು ಹೇಳುವರೋ ಅವರು ತಮ್ಮ ಬಾಯಿಂದಲೇ ತಾವು ದುರ್ಬಲರಿರುತ್ತೇವೆಂದು ಒಪ್ಪಿಕೊಂಡಹಾಗಾಗುತ್ತದೆ.

'ಸಾಧನಾಭಾವ'ವು ಪರಾಜಯ ಹೊಂದಿದ ಜನರ ನಿಶ್ಚಿತ ಉತ್ತರವಾಗಿದೆ. ಈ ಜನರು ಮೇಲೆ ಹೇಳಿದಂತೆ ತಮಗೆ ಧನಸಹಾಯ ಇಲ್ಲವೆ ಜನಸಹಾಯ ಇಲ್ಲವೆ ಬುದ್ಧಿಸಹಾಯ ಮೊದಲಾದ ಸಾಧನಗಳು ಯೋಗ್ಯವಾಗಿ ದೊರಕದ್ದರಿಂದ ಪ್ರಗತಿಮಾರ್ಗದಲ್ಲಿ ಪರಾಜಯ

ಹೊಂದಿರುವವೆಂದು ಭಾವಿಸುತ್ತಾರೆ. ಆದರೆ ಬಾಲ್ಯಾವಸ್ಥೆಯಲ್ಲಿ ತಂದೆಯ ಅಕಾಲಿಕ ಮರಣದಿಂದಲೂ, ಬಡವೆಯಾದ ತಾಯಿಯುಪಲ್ಲೆ ಕಾಯಿಮಾರಿ ಸಂಪಾದಿಸುವ ಪ್ರಾಪ್ತಿಯಲ್ಲಿ ಹೊಟ್ಟೆತುಂಬದ್ದರಿಂದಲೂ, ಕೇವಲ ಉಪಜೀವಿಕೆಗಾಗಿಎರಡುರೂಪಾಯಿಪಗಾರಕ್ಕೆ ದುಡಿಯುತ್ತಿದ್ದ ಜಾವಜೀದಾದಾಜಿಗೆ ನಿರ್ಣಯಸಾಗರದಂಥ ಜಗತ್ಪ್ರಸಿದ್ಧ ಪ್ರೆಸ್ಸಿನ ಉತ್ಪಾದಕನಾಗಲಿಕ್ಕೆ ಸಾಧನಗಳೆಷ್ಟು ಅನುಕೂಲವಾಗಿದ್ದವು? ಈ ವಿಪರೀತ ಪರಿಸ್ಥಿತಿಯಲ್ಲಿಯೇ ದೃಢನಿಶ್ಚಯದಿಂದ ಧ್ಯೇಯವನ್ನು ಸಾಧಿಸಿದ್ದರಿಂದ ಅವನು ಅಜರಾಮರ ಕೀರ್ತಿಗೆ ಪಾತ್ರನಾದನಲ್ಲದೆ, ನೂರಾರುಜನರ ಪಾಲನಕರ್ತನೂ, ಕೋಟ್ಯಾಧೀಶನೂ ಆದನು, "ಜಸ್ಟಿಸ್ ಆಫ್ ದಿಪೀಸ"ವನ್ನು ನಿರೀಕ್ಷಿಸುತ್ತ ಕೂಡ್ರದೆ, ಸಾಧನಾಭಾವವೆಂದು ಹೇಳದೆ, ಎಂಥ ಕಠಿಣಪರಿಸ್ಥಿತಿಯಲ್ಲಿಯೂ ಕಾರ್ಯಮಾಡಿತೋರಿಸುವ ಇಂಥನೂರಾರು ಜಾವಜಿಗಳು ನಮ್ಮ ಹಿಂದುಸ್ಥಾನದಲ್ಲಿ ಬೇಕಾಗಿದ್ದಾರೆ. ಆದರೆ ಆ ಜಾವಜಿಗಳು ಪೇಟೆಯಲ್ಲಿ ಮಾರಲಿಕ್ಕೆ ದೊರೆಯದೆ, ಕೇವಲ ಪ್ರಯತ್ನದಿಂದ ಆಗಬಹುದಾದ್ದರಿಂದ ಪ್ರಗತಿಗಾಮೇಚ್ಛುಗಳು ಜಾವಜಿಯ ಉದಾಹರಣೆಯನ್ನು ಮುಂದಿಟ್ಟುಕೊಂಡು ಸತತವಾಗಿ ಪರಿಶ್ರಮಪಟ್ಟು ಪ್ರಗತಿಯನ್ನು ಹೊಂದಬೇಕು.

ಸಾಧನಗಳ ಸಲುವಾಗಿ ತಡೆದು ನಿಲ್ಲುವದು ಬಹಳ ಘಾತಕವಾಗಿದೆ. ಹೀಗೆ ತಡೆದುನಿಲ್ಲುವದರಿಂದ ನಮ್ಮ ಉತ್ಸಾಹದ ಹಾಗು ಕೆಲಸಮಾಡುವ ಪ್ರವೃತ್ತಿಯು ನಾಶವಾಗುವದು. ಯಾವ ಕೆಲಸಮಾಡಲೂ ಇಚ್ಛೆಯಿಲ್ಲದವನಿಗೂ, ಸಾಧನಗಳ ಸಲುವಾಗಿ ತಡೆದು ನಿಲ್ಲುವವನಿಗೂ ಸುಸಂಧಿಗಳು ಅದೃಶ್ಯವಾಗುವವು. ಎಂಥ ಅನುಕೂಲಪರಿಸ್ಥಿತಿಯು ಪ್ರಾಪ್ತವಾದರೂ ಎಂಥ ಸುಸಾಧನಗಳು ಹಸ್ತಗತವಾಗಿದ್ದರೂ ಈ ಹೇಡಿಜನರ ದೃಷ್ಟಿಯಿಂದ ಅದು ತಕ್ಕ ಸಮಯವೇ ಆಗಿರುವದಿಲ್ಲ. ಯೋಗ್ಯ ಸಾಧನವಾಗಿಯೂ ಕಂಡುಬರುವದಿಲ್ಲ. ಇಂಥ ಜನರನ್ನು ಬಂಗಾರರತ್ನಗಳ ಖಣಿಗಳಲ್ಲಿ ತಿರುಗಾಡಿಸಿ

ದರೆ ಕೂಡ ಇವರಿಗೆ ಮೌಲ್ಯವಾದ ವಸ್ತುಗಳು ದೊರೆಯುದಾಗುವವು. ಆದರೆ ದೃಢನಿಶ್ಚಯದ ಧ್ಯೇಯವನ್ನು ಗೊತ್ತುಮಾಡಿಕೊಂಡ, ಅಪೂರ್ವತೆಯ ಗುಣವುಳ್ಳ ಹಾಗು ಸ್ವಾತಂತ್ರ್ಯಪ್ರೀತಿಯುಳ್ಳ ಮನುಷ್ಯನನ್ನು ಎಂಥ ರುಕ್ಷ ಹಾಗು ಕಾಡುಪ್ರದೇಶದಲ್ಲಿ ಬಿಟ್ಟರೂ ಅವನಿಗೆ ತನ್ನ ಸುತ್ತು ಮುತ್ತು ಸಾಧನಗಳ ಸಂಗ್ರಹಾಲಯವೇ ಇದ್ದಂತೆ ಕಾಣುವದು.

ಲೋ. ಟಿಳಕರು "ಗೀತಾರಹಸ್ಯ"ದಂಥ ಕರ್ಮಯೋಗಶಾಸ್ತ್ರದ ಸರ್ವಮಾನ್ಯವಾದ ಉದ್ಗ್ರಂಥವನ್ನು ಜೇಲಿನಲ್ಲಿದ್ದಾಗ ಬರೆದು ಮುಗಿಸಿದರು. ಅವರ ಆಗಿನ ಮನಸ್ಥಿತಿ, ಅನುಕೂಲತೆ, ಪರಿಸ್ಥಿತಿಗಳನ್ನು ಅವಲೋಕಿಸಿದರೆ, ದೃಢನಿಶ್ಚಯವೇ ಅವರಿಂದ ಈ ಪ್ರಚಂಡ ಕೆಲಸವನ್ನು ಮಾಡಿಸಿತೆನ್ನಬೇಕಾಗುವದು. ಲೋ. ಟಿಳಕರಂತೆ ಪ್ರಗತಿಗಾಮಿಗಳಾದ ಅನೇಕರು ಕಠಿಣ ಪ್ರಸಂಗದಲ್ಲಿ ಅಲೌಕಿಕ ಕೃತಿಗಳನ್ನು ಮಾಡಿ ಕೀರ್ತಿಶೇಷರಾಗಿರುವರು. ಆದರೆ ತಮ್ಮ ಎಲ್ಲ ವೇಳೆಯನ್ನು ಕಾರ್ಯಸಾಧನದಲ್ಲಿ ಕಳೆಯುವವರು ವಿರಳ. ಕೆಲವರಿಗೆ ಕಾರ್ಯಸಾಧನದಲ್ಲಿ ಇಡಿದಿವಸದಲ್ಲಿ ತಾಸು ಅರ್ಧತಾಸು ಕೂಡ ವಿರಾಮಹೊಂದಲು ವೇಳೆಸಿಗದಿರುವಾಗ, ಬೇರೆ ಕೆಲವರು ಏನೂ ಕೆಲಸವಿಲ್ಲದೆ ಯಾವ ಮೋಜಿನ ಆಟಗಳಲ್ಲಿ ಕಾಲಕಳೆಯಬೇಕೆಂಬ ಆಲೋಚನೆಯಲ್ಲಿ ಮಗ್ನರಾಗಿರುವರು: ಇದರಂತೆ ಯಾರು ನಿರೋಗಿಗಳಾಗಿರುವರೋ ಅವರು ಹೆಚ್ಚು ಆರೋಗ್ಯವನ್ನು ಹೊಂದುವದಕ್ಕಾಗಿಯೂ, ದೇಹದ ಬಲವನ್ನು ಬೆಳಿಸುವದಕ್ಕಾಗಿಯೂ ವ್ಯಾಯಾಮಾದಿಗಳ ಅವಲಂಬನ ಮಾಡುತ್ತಿರಲು, ಬೇರೆ ಕೆಲವು ಶ್ರೀಮಂತ ರೋಗಿಗಳು ರೋಗನಿವಾರಣಕ್ಕಾಗಿ ಆರೋಗ್ಯವಿಷಯದ ಯಾವ ಮಾರ್ಗವನ್ನೂ ಅವಲಂಬಿಸಲಾರದೆ, ಕೇವಲ ಆಲಸ್ಯದಲ್ಲಿಯೂ, ತಿನಸುಗೂಳಿತನದಲ್ಲಿಯೂ ಕಾಲಕಳೆದು ಹೆಚ್ಚು ಹೆಚ್ಚು ರೋಗಗ್ರಸ್ತರಾಗುತ್ತಿರುವರು. ಪ್ರಗತಿಹೊಂದುವ ಇಚ್ಛೆಯು ಪ್ರಾಪ್ತವಾದಹೊರತು ಮನುಷ್ಯನಿಗೆ ಸರಿಯಾಗಿ ಹೊಟ್ಟೆ ಹಸಿಯುದಿದ್ದಾಗ, ಮಧುರವಾದ

ಫಲಗಳೂ ಸ್ವಾದವಾಗಿ ತೋರದಿರುವಂತೆ, ಎಂಥ ಉತ್ಕೃಷ್ಟ ಸಾಧನಗಳೂ ಸಾಧನಗಳಾಗಿ ತೋರುವದಿಲ್ಲ. ಆದ್ದರಿಂದ ಪ್ರಗತಿಹೊಂದಬೇಕೆನ್ನುವ ಮನುಷ್ಯನು ಮೊದಲು ತನ್ನ ದೃಷ್ಟಿಯನ್ನು ತಿದ್ದಿಕೊಳ್ಳಬೇಕು. ಅಂದರೆ ಅವನಿಗೆ ಪ್ರಗತಿಯು ಇಚ್ಛಾಪ್ರಾಪ್ತವಾಗಿ ಪ್ರತಿಯೊಂದು ಸ್ಥಿತಿಯೂ ಅನುಕೂಲವಾಗಿಯೇ ಕಾಣುವದು.

ಪ್ರಗತಿಯು ಇಚ್ಛೆಯೊಂದು ಪ್ರಾಪ್ತವಾಯಿತೆಂದರೆ, ಜಾವಜಿ, ಗೋಖಲೆ ಇವರಂತೆ ಮತ್ತಾರಾದರೂ ಅಪೂರ್ವ ಕಾರ್ಯವನ್ನು ಮಾಡಿ ತೋರಿಸಹತ್ತುವರು. ಇಷ್ಟೇ ಅಲ್ಲ ಅತ್ಯಂತ ರೋಗಿಯಾದ ಮಹಾವ್ಯಂಗವುಳ್ಳ ಮನುಷ್ಯನು ಕೂಡ ಅಲೌಕಿಕ ಕೆಲಸಮಾಡಿ ತೋರಿಸುವನು. ಈಗಿದ್ದ "ಬೀಜಗಣಿತ"ವನ್ನು ಯಾವನೋ ಜನ್ಮಾಂಧನೊಬ್ಬನು ತನ್ನ ಅಪೂರ್ವವಾದ ಕಲ್ಪಕತೆಯಿಂದ ರಚಿಸಿರುವನೆಂಬ ದಂತಕಥೆಯು ಕೇಳಿಕೆಯಲ್ಲಿದೆ. ನಮ್ಮ ಆರ್ಯಾವರ್ತದಲ್ಲಿ ಇಂಥ ಗುಣಗಳುಳ್ಳ ಆದರಣೀಯರಾದ ಹಲವರು ಸ್ತ್ರೀ ಪುರುಷರು ಆಗಿಹೋದರು. ಸದ್ಯಃಕಾಲದಲ್ಲಿಯೂ ಇರುವರು. ತೀರ ಸ್ವಲ್ಪ ಅಪವಾದಗಳನ್ನು ಬಿಟ್ಟುಕೊಟ್ಟರೆ, ಜಗತ್ತಿನೊಳಗಿನ ಉಳಿದ ಎಲ್ಲ ಅಲೌಕಿಕ ಕಾರ್ಯಗಳು ಕೇವಲ ಪ್ರತಿಕೂಲಸ್ಥಿತಿಯಲ್ಲಿದ್ದ ಬಡಹುಡುಗರಿಂದಲೇ ಆಗಿವೆಯೆಂದು ಹೇಳಲಿಕ್ಕೆ ಅಡ್ಡಿಯಿಲ್ಲ.

ಆತ್ಮೋನ್ನತಿಯ ದೃಢನಿಶ್ಚಯದಿಂದ ಪ್ರೇರಿತನಾದ ಮನುಷ್ಯನ ಎದುರಿನಲ್ಲಿ ಯಾವ ವಿಘ್ನಗಳೂ ಬಹಳ ಹೊತ್ತಿನವರೆಗೆ ನಿಲ್ಲಲಾರವು. ಯಾವ ವಿಘ್ನಗಳು ಸಾಮಾನ್ಯರನ್ನು ಕ್ಷುದ್ರಾವಸ್ಥೆಯಲ್ಲಿರಸಲು ಕಾರಣಗಳಾಗುವವೋ ಆ ವಿಘ್ನಗಳನ್ನು ದೃಢನಿಶ್ಚಯದ ಮನುಷ್ಯನು ಸಹಜವಾಗಿ ಛೇದಿಸುವನು. ಕಾರ್ಯದಲ್ಲಿ ಆಸಕ್ತಿಯು ಹೆಚ್ಚಿದ ಮಾನದಿಂದ ಕಾರ್ಯಸಾಧಿಸುವ ಸಂಭವವು ಹೆಚ್ಚು; ಕಡಿಮೆತರದ ಆಸಕ್ತಿಯಿಂದ ಯಾವ ಕಾರ್ಯವೂ ಸಾಧಿಸಲಾರದು. ಸಾಧಾರಣವಾದ ಬೆಚ್ಚಗಿನ ನೀರಿನಿಂದ ಉಗಿಯು ಉತ್ಪನ್ನವಾಗದ್ದರಿಂದ ಎಂಜಿನವು ನಡೆಯುವದಿಲ್ಲ. ಆದೇ ಸಳಮಳ ಕುದಿಯುವ ನೀರಿನಿಂದ

ಆಗಲೇ ಇಂಜನಿಗೆ ಗತಿಯು ಉಂಟಾಗುವದು. ಈ ನಿಯಮವೇ ಪ್ರಗತಿಪರ ಮನುಷ್ಯನಿಗೆ ಹತ್ತುವದು. ಯಶಃಪ್ರಾಪ್ತಿಯ ಗುಹ್ಯವು ಹೆಚ್ಚಾದ ಆಸಕ್ತಿಯಲ್ಲಿರುವದು. ಪ್ರತಿಬಂಧಗಳನ್ನು ಭೇದಿಸುವ ಶಕ್ತಿಯು ಮಿತಿಮೀರಿದ ಆಸಕ್ತಿಯಿಂದ ಉಂಟಾಗುವದು. ಪ್ರತಿಬಂಧಗಳಿಗೆ, ವಿಘ್ನಗಳಿಗೆ ಹೆದರುವವರು ಅವುಗಳ ವರ್ಚಸ್ಸನ್ನು ಒಪ್ಪಿಕೊಂಡಂತಾಗುವದು. ಆದರೆ ಕಾರ್ಯಾಸಕ್ತಿಯನ್ನು ಬೆಳೆಸಿ ದೃಢನಿಶ್ಚಯದಿಂದ ಕೆಲಸ ಮಾಡಹತ್ತಿದರೆ ಧ್ಯೇಯವನ್ನು ಬಹುಬೇಗ ಸಾಧಿಸಲಿಕ್ಕೆ ಬರುತ್ತದೆ.

ತಮ್ಮ ಊರ ಭೂಮಿಗಿಂತ ಬೇರೆ ಊರ ಭೂಮಿಗಳು ಹೆಚ್ಚು ಫಲಕಾರಿಗಳೆಂದು ತಿಳಿಯುವ ಮೂಢಒಕ್ಕಲಿಗನಂತೆ, ಎಷ್ಟೋ ಜನರು ಕಾರ್ಯಸಾಧನಕ್ಕಾಗಿ ಸ್ಥಳಾಂತರಮಾಡುವದು ಅವಶ್ಯವೆಂದು ತಿಳಿಯುತ್ತಾರೆ ಆದರೆ ಜಾಣರೈತನು ಕಾಡುಭೂಮಿಯನ್ನೇ ಗೊಬ್ಬರಹಾಕಿ ಫಲದ್ರೂಪವಾಗಮಾಡಿಕೊಳ್ಳುವಂತೆ, ಬುದ್ಧಿವಂತಹಾಗು ದೃಢನಿಶ್ಚಯದ ಮನುಷ್ಯನು ಕಾರ್ಯಸಾಧನಕ್ಕಾಗಿ ಸ್ಥಳಾಂತರಮಾಡದೆ ಈದ್ದ ಊರಲ್ಲಿಯೇ ಇದ್ದ ಸ್ಥಿತಿಯಲ್ಲಿಯೇ ಇದ್ದು, ಸ್ವಂತ ಪರಿಶ್ರಮದಿಂದ ಬೇಕಾದ ಅನುಕೂಲತೆಗಳನ್ನು ಉತ್ಪನ್ನಮಾಡಿಕೊಂಡು ಕಾರ್ಯಸಾಧಿಸಹತ್ತಿ ಪ್ರಗತಿಹೊಂದುವನು. ಆದ್ದರಿಂದ ಕಾರ್ಯದಲ್ಲಿ ಆಸಕ್ತಿಯನ್ನಿಡದೆ ದೈವಪರೀಕ್ಷೆಯನ್ನು ಕಂಡುಹಿಡಿಯುವದಕ್ಕಾಗಿ ಸ್ಥಳಾಂತರಮಾಡಿ ದೊಡ್ಡ ದೊಡ್ಡ ಪಟ್ಟಣಗಳ ಕಡೆಗೆ ಓಡಹತ್ತಬಾರದು: ಅಥವಾ ಒಂದು ಉದ್ಯೋಗವನ್ನು ಬಿಟ್ಟು ಬೇರೆ ಉದ್ಯೋಗವನ್ನು ಕೈಕೊಳ್ಳಬಾರದು. ಸಂಕಟಗಳು, ವಿಘ್ನಗಳು ಮನುಷ್ಯನಲ್ಲಿ ಆಸಕ್ತಿಯನ್ನು ಹೆಚ್ಚಿಸಲಿಕ್ಕೂ, ನಿಶ್ಚಯವನ್ನು ದೃಢಪಡಿಸಲಿಕ್ಕೂ, ಸ್ವಾತಂತ್ರ್ಯಪ್ರೀತಿಯನ್ನು ವೃದ್ಧಿಗೊಳಿಸಲಿಕ್ಕೂ, ಅಪೂರ್ವತೆಯನ್ನು ವ್ಯಕ್ತಗೊಳಿಸಲಿಕ್ಕೂ ಕಾರಣಗಳಾಗುವವು. ಯಾವನು ಸಂಕಟಪರಂಪರೆಗಳಿಗೆ ಎದೆಗೊಟ್ಟು ಕಾರ್ಯಸಾಗಿಸುವನೋ ಅವನು ಪುಟಕೊಟ್ಟ ಚಿನ್ನವು ಶುದ್ಧವೂ, ಹೆಚ್ಚು ಕಾಂತಿಮಯವೂ, ವಿಶೇಷ ಬೆಲೆಯು

ಳ್ಳಿದ್ದೂ ಆಗುವಂತೆ ಮನೋದಾರ್ಢ್ಯವಿಶೇಷದಿಂದ ಪ್ರಖ್ಯಾತನಾಗಿ ಪ್ರಗತಿಯನ್ನು ಹೊಂದುವನು.

ಇಂಥ ಇಂಥ ಕಾರ್ಯವನ್ನು ಮಾಡಿದ ಮನುಷ್ಯನೇ ಪ್ರಗತಿ ಹೊಂದಬೇಕೆಂತಿಲ್ಲ; ಇಂಥ ಇಂಥ ಜಾತಿಯು ಇಲ್ಲವೆ ಇಂಥ ಇಂಥ ವರ್ಣದ ಜನರೇ ಪ್ರಗತಿಹೊಂದಬೇಕೆಂತಿಲ್ಲ; ಪ್ರಗತಿಹೊಂದುವ ವಿಷಯದಲ್ಲಿ ಬ್ರಾಹ್ಮಣನೂ ಅಷ್ಟೇ ಅಧಿಕಾರಿಯು; ಚಾಂಡಾಲನೂ ಅಷ್ಟೇ ಅಧಿಕಾರಿಯು; ಬಡ ಕೂಲಿಕಾರನೂ ಅಷ್ಟೇ ಅಧಿಕಾರಿಯು; ಪ್ರಗತಿಹೊಂದಲಿಚ್ಛಿಸುವ ಮನುಷ್ಯನನ್ನು ಕಂಡು ಯಾರೂ ಅಸೂಯೆಪಡುವಕಾರಣವಿಲ್ಲ. ಒಂದುವೇಳೆ ನೆರೆಹೊರೆಯುವರು ಪ್ರಗತಿಪರ ಮನುಷ್ಯನಿಗೆ ಕೇಡುಬಗೆಯಹತ್ತಿದರೂ ಸೃಷ್ಟಿಯು, ಈಶ್ವರನು ಅವನಿಗೆ ಸಂಪೂರ್ಣ ಸಹಾಯಕಾರಿಗಳಾಗಿರುವದರಿಂದ ಅವನ ಉಚ್ಛ್ರಾಯವು ದಿನೇದಿನೇ ಅಭಿವೃದ್ಧಿಯಾಗಹತ್ತುತ್ತದೆ.

ಆದರೆ ಬರೆಯಲಿಕ್ಕೆ ಅತ್ಯಂತ ಖೇದವೆನಿಸುವ ಸಂಗತಿ ಯಾವದೆಂದರೆ, ನಮ್ಮಲ್ಲಿಯ ಬಹುಜನ ಮುದುವರು ಪ್ರಗತಿಮಾರ್ಗದಲ್ಲಿ ಬರುವ ಸಂಕಟಗಳಿಗೆ ಹೆದರಿ ನಮ್ಮ ಮಕ್ಕಳಿಗೆ ಯಾವ ಹೊಸ ಉದ್ಯೋಗವನ್ನೂ ಮಾಡುವ ಅವಶ್ಯವಿಲ್ಲ. ದೇವರ ದಯೆಯಿಂದಲೂ, ಪೂರ್ವಜರ ಪುಣ್ಯದಿಂದಲೂ ಅವರ ಹೊಟ್ಟೆ ಬಟ್ಟೆಗಳಿಗೆ ಕೊರತೆಯಿಲ್ಲ: ಅವರು ಕೂತುತಿಂದರೂ ಚಟ್ನಿ-ಬಕ್ಕರಿಗೆ ಕೊರತೆಯಾಗಲಿಕ್ಕಿಲ್ಲ. ಆದ್ದರಿಂದ ನಮ್ಮ ಮಕ್ಕಳು ಹೆಚ್ಚಿನ ಸಾಹಸಕ್ಕೆ ಹೋಗದೆ ಇದ್ದದ್ದನ್ನು ಸಾಗಿಸಿಕೊಂಡು ಹೋದರೆ ಸಾಕು” ಎಂದು ನಿರುತ್ಸಾಹದ ಹೇಡಿತನದ, ಕರ್ತವ್ಯಪರಾಙ್ಮುಖತೆಯ, ಹೇಯವೃತ್ತಿಯ ಉದ್ಗಾರಗಳನ್ನು ಬಾಲ್ಯದಿಂದಲೇ ತಮ್ಮ ಚಿಕ್ಕಮಕ್ಕಳ ಮನಸ್ಸಿನಲ್ಲಿ ಬಿಂಬಿಸುವಂತೆ ಹೊರಗೆಡುವುತ್ತಿರುತ್ತಾರೆ. ಅವರ ಈ ಉದ್ಗಾರಗಳು ಸಾಮಾನ್ಯದೃಷ್ಟಿಯಿಂದ ಯೋಗ್ಯವಾಗಿ ತೋರಬಹುದಾಗಿದ್ದರೂ ಪ್ರಗತಿಗಾಮಿಯ ದೃಷ್ಟಿಯಿಂದ ಅವು ಬಹಳ ನಿಂದ್ಯವಾಗಿ ತೋರುವವು. ಪ್ರತಿಯೊಬ್ಬನ ಜನ್ಮವೂ, ರೂಪವೂ, ಬುದ್ಧಿಯೂ, ಧ್ಯೇಯವೂ ಹಿಂದೆ

ಹೇಳಿದಂತೆ ಪ್ರತ್ಯೇಕವಾಗಿರುವದರಿಂದ, ಅವನು ಪೂರ್ವಜರ ಅನುಕ
ರಣಮಾಡುವದು ಯೋಗ್ಯವಾದೀತೇ? ಹುಡುಗರಿಗೆ ತಿಳಿಯಹತ್ತಿದಾಗಿ
ನಿಂದ ಅವರ ಒಲವು ಜಾಗ್ರತವಾಗಹತ್ತುತ್ತದ; ಕಾರ್ಯಕಾರಣ
ಗಳಿಂದ ಚಿಕಿತ್ಸೆಮಾಡುವ ಅಧಿಕಾರವು ಪ್ರಾಪ್ತವಾಗುತ್ತದೆ. ಎಷ್ಟೋ
ಹುಡುಗರು ಒಂದೇ ಸಾಲೆಯಲ್ಲಿ, ಒಂದೇ ವರ್ಗದಲ್ಲಿ, ಒಬ್ಬನೇ
ಶಿಕ್ಷಕನಲ್ಲಿ ಕಲಿಯುತ್ತಿದ್ದರೂ, ಅವರೆಲ್ಲರ ಬುದ್ಧಿಯೂ, ವಿಚಾರ
ಗಳೂ, ಶಿಕ್ಷಣವೂ ಭಿನ್ನಭಿನ್ನವಾಗುವಂತೆ, ಅವರವರ ಧ್ಯೇಯಗಳೂ
ಭಿನ್ನಭಿನ್ನವಾಗುವವು. ಹೀಗಿರಲು ಹೇಡಿ ಹಾಗು ಕರ್ತವ್ಯಪರಾ
ಙ್ಮುಖನಾದ ತಂದೆಯು ತನ್ನ ಓಜಸ್ವಿ ಹಾಗು ಕರ್ತವ್ಯನಿಷ್ಠ ಮಗನಿಗೆ
ಮೇಲಿನಂತೆ ಬೋಧಿಸುವದು ಯೋಗ್ಯವೇ? ಅಪಕ್ವವಿಚಾರಗಳಿರುವ
ವರೆಗೆ ಮಗನಿಗೆ ತಂದೆಯ ಬೋಧವು ಸಮ್ಮತವಾಗಿದ್ದರೂ, ಕರ್ತ
ವ್ಯದಿಶೆಯನ್ನು ಕಂಡುಹಿಡಿದ ಮಗನಿಗೆ ತಂದೆಯ ಬೋಧದಲ್ಲಿ ಅರ್ಥ
ವಿಲ್ಲೆಂಬದು ವ್ಯಕ್ತವಾಗುವದು. ಯಾಕಂದರೆ ಕರ್ತವ್ಯನಿಷ್ಠನು
ತನ್ನ ಪೂರ್ವಜರ ಧನ-ಧಾನ್ಯಗಳನ್ನು ಉಪಯೋಗಿಸುವದರಲ್ಲಿ ಸುಖಿ
ಯಾಗಿರುವದಿಲ್ಲ. ಅವನು ಅವುಗಳನ್ನು ಪಿತೃಗಳ ಪೂಜ್ಯತೆಯ
ಮಾನದಿಂದ ಪ್ರಸಾದವೆಂದು ತಿಳಿದರೂ, ಮನುಷ್ಯತ್ವದ ದೃಷ್ಟಿ
ಯಿಂದ ಅವನ್ನು ಅವನು ತನ್ನ ಮಾರಕ-ಅಗ್ರಾಹ್ಯಗಳೆಂದು
ಭಾವಿಸುವನು. ಹಿರಿಯರ ಹೆಸರಿನ ಮೇಲೆ, ಕೀರ್ತಿಯ ಮೇಲೆ,
ಪುಣ್ಯದ ಮೇಲೆ, ಆಸ್ತಿಯ ಮೇಲೆ ಉಪಜೀವಿಸುವದು ಅಲೌಕಿಕ
ಮನುಷ್ಯನಿಗೆ ನರಕಪ್ರಾಯವಾಗಿ ತೋರುವದು. ಹಿರಿಯರ ಆಸ್ತಿಯ
ಚಟ್ನಿ-ಬಕ್ಕರಿ, ಇಲ್ಲವೆ ತರತರದ ಪಕ್ವಾನ್ನ ಇವುಗಳ ಸೇವನಕ್ಕಿಂತ
ಸ್ವಂತದ ಬೆವರುಹನಿಯಿಂದ! ಸಂಪಾದಿಸಿದ ಕಾಟಿಯನ್ನು ಕುಡಿದುಜೀವಿ
ಸುವದರಲ್ಲಿ ಹೆಚ್ಚು ಸುಖವದೆಯೆಂದು ಓಜಸ್ವಿಮನುಷ್ಯನು ಭಾವಿಸಿ,
ಶಕ್ತಿಮೀರಿ ಹೆಣಗಿ ಅಲೌಕಿಕತೆಯನ್ನು ವ್ಯಕ್ತಗೊಳಿಸುವನು. ಆದ್ದ
ರಿಂದ ಪ್ರಗತಿಹೊಂದಬಯಸುವ ಮನುಷ್ಯನು, ಸಾಧನಾಭಾವಕ್ಕಾಗಿ
ತಡೆಯದೆ, ಅಪೂರ್ವತೆಗೆ ಭಂಗತಂದುಕೊಳ್ಳದೆ, ದೃಢನಿಶ್ಚಯಕ್ಕೆ

ಚ್ಯುತಿಬಾರದ ಹಾಗೆ, ಸ್ವಾತಂತ್ರ್ಯಪ್ರೀತಿಗೆ ಕುಂದುತಟ್ಟದ ಹಾಗೆ ಕಾರ್ಯಮಾಡಿ ಪ್ರಗತಿಹೊಂದಬೇಕು.

## ೫ನೆಯ ಖಂಡ—ಪ್ರತಿಕೂಲತೆ.

"ಮಹಾರಾಜಾ, ಈ ಘಟಕ್ಕೆ ಬಂದಷ್ಟು ಪ್ರತಿಕೂಲಪ್ರಸಂಗಗಳು ನಿಮಗೆ ಬಂದಿದ್ದರೆ, 'ಮಹಾರಾಜಾ ನಿಮ್ಮ ಸ್ಥಿತಿಯು ಏನಾಗುತ್ತಿತ್ತೋ ಹೇಳಲಾಗದು ಮಹಾರಾಜಾ! ಮಹಾರಾಜಾ ಮನೆಯಲ್ಲಿ ರಾಮಭಟ್ಟ! ತಂದೆಯವರ ತ್ರಾಸ, ಅಣ್ಣ-ತಮ್ಮಂದಿರತ್ರಾಸ, ಜಾಜ್ವಲ್ಯಸ್ವಭಾವದ ಹೆಂಡತಿಯತ್ರಾಸ ಅಲ್ಲದೆ ಆಪ್ತೇಷ್ಟರ ಹಾಗು ನೆರೆಹೊರೆಯವರ ನಿಂದಾ, ಚೇಷ್ಟೆ, ಅಪಮಾನಗಳತ್ರಾಸ ಇಷ್ಟೆಲ್ಲ ತ್ರಾಸಗಳನ್ನು ಸಹಿಸಿ ಸಹಿಸಿ, ಮಹಾರಾಜಾ, "ಸಾಧು"ಎಂಬ ಎರಡು ಅಕ್ಷರಗಳನ್ನು ಕಾಯ್ದುಕೊಳ್ಳಬೇಕಾದರೆ ಈ ದೇಹವು ಎಷ್ಟು ಕಷ್ಟಪಟ್ಟಿರುವದೆಂಬದನ್ನು ನೀವೇನು ತಿಳಿದೀರಿ ಮಹಾರಾಜಾ!" ಎಂಬ ಶ್ರೀ ಶೇಷಾಚಲ ಸದ್ಗುರು ಮಹಾರಾಜರವರ ಉಪದೇಶವು ಸ್ಮರಣವಾಯಿತೆಂದರೆ ನಮ್ಮ ಹೃದಯವು ಕಂಪಿಸಹತ್ತುತ್ತದೆ.

ಪ್ರತಿಕೂಲಸಂಗತಿಗಳಿಂದ ಶ್ರೀ ಶೇಷಾಚಲ ಗುರುವರರಲ್ಲಿ ಸಾಧ್ವತ್ವವು ನೆಲೆಗೊಂಡದ್ದು ಹ್ಯಾಗೆಂಬದನ್ನು ವಿವೇಚಿಸುವಾ. ಭಾವಿಕರ ದೃಷ್ಟಿಯಿಂದ ಅವರು ಶ್ರೀ ಚಿದಂಬರನ ದ್ವಿತೀಯಾವತಾರಿಕರು ಆಗಿದ್ದರೂ ಪ್ರಯತ್ನವಾದಿಗಳ ದೃಷ್ಟಿಯಿಂದಲೂ, ಅವರ ಅವತಾರದ ಮಹತಿಯು ತಿಳಿದುಬರುವಂತಿದೆ. ಸದ್ಗುರುಗಳು ಸಾಧಾರಣಸ್ಥಿತಿಯ ಬ್ರಾಹ್ಮಣಮನೆತನದಲ್ಲಿ ಜನ್ಮತಾಳಿದರು; ಅವರು ಸ್ವಭಾವತಃ ಕುಶಾಗ್ರಬುದ್ಧಿಯವರಾಗಿರದೆ, ಮಂದಬುದ್ಧಿಯವರಾಗಿದ್ದರು. ಬಾಲ್ಯದಲ್ಲಿ ಬಹಳದಿವಸಗಳವರೆಗೆ ಅಭ್ಯಾಸದಕಡೆ ಲಕ್ಷ್ಯ ಇರದ್ದರಿಂದ ಕೇವಲ ಆಟನೋಟಗಳಲ್ಲಿ ಹೊತ್ತುಗಳೆಯುತ್ತಿದ್ದರು. ಉಪನಯನಸಂಸ್ಕಾರವಾದಮೇಲೆ ಅವರ ವೈದಿಕ ಶಿಕ್ಷಣಕ್ಕೆ ಪ್ರಾರಂಭವಾಯಿತು. ಆದರೆ ದಡ್ಡತನದ ಮೂಲಕ ಅವರು ಅದರಲ್ಲಿ ಆಗ ಪ್ರಗತಿಯನ್ನು

ಹೊಂದಲಿಲ್ಲ. ಹಿರಿಯರು ಲಗ್ನಮಾಡಿದರು. ಆಗಿನಿಂದ ಅವರ ಸಾಧುತ್ವದ ಪ್ರಗತಿಗೆ ಆರಂಭವಾಯಿತು: ಮನೆತನದ ಕೆಲಸದಲ್ಲಿ ಬೀಳದೆ, ಇವರು ಸದಾ ದೇವರ ಪೂಜೆ-ಪುನಸ್ಕಾರ, ಮೊದಲಾದವುಗಳಲ್ಲಿ ಹೊತ್ತುಗಳೆಯತೊಡಗಿದರು. ಇದರಿಂದ ಮನೆಯವರಿಗೂ ಇವರಿಗೂ ಸರಿಬೀಳಲಿಲ್ಲ. ಆಪ್ತೇಷ್ಟರು ನಿಂದೆಯನ್ನು ಮಾಡತೊಡಗಿದರು. ನೆರೆಹೊರೆಯವರೂ, ಮಿತ್ರರೂ ಇವರ ಭಾವಿಕತನವನ್ನು ಕುರಿತು ಚೇಷ್ಟೆಯನ್ನೂ, ಉಪಹಾಸವನ್ನೂ ಮಾಡಹತ್ತಿದರು. ಆದರೂ ಪ್ರಗತಿಯ ಕಡೆಗೇ ಲಕ್ಷ್ಯವಿದ್ದ ಆ ಸಾಧುಶ್ರೇಷ್ಠನು ಯಾರನ್ನೂ ವಿರೋಧಿಸಹೋಗಲಿಲ್ಲ. ಇಷ್ಟೇ ಅಲ್ಲ. ಅವರ ಕ್ರಿಯೆಗೆ ಕಾಯಾ-ವಾಚಾ-ಮನಸಾ ತಡೆಹಾಕಲು ಯತ್ನಿಸದೆ ನೆಟ್ಟಗೆ ತನ್ನ ಧ್ಯೇಯದ ಕಡೆಗೇ ಸಾಗಿದ್ದನು. ಸಾಧುಗಳ ಈ ಕೃತಿಯಿಂದ ವಿವೇಕಿಗಳಾದ ಪ್ರತಿಸ್ಪರ್ಧಿಗಳು ಹಿಂಜರಿದರು. ದುರಭಿಮಾನಿಗಳು ಮಾತ್ರ ರೊಚ್ಚಿಗೆದ್ದರು. ಅವರು ಹ್ಯಾಗಾದರೂ ಮಾಡಿ ಇವನನ್ನು ಅಣ್ಣತಮ್ಮಂದಿರಿಂದ ವಿಂಗಡಿಸಿದರೆ, ಇವನ ಈ ಢೋಂಗೀ ಸಾಧುತ್ವವು ಇಲ್ಲದಂತಾಗಿ ಹತ್ತು ಜನರಂತೆ ಮನೆಮಾರು ಸಾಗಿಸಿಕೊಳ್ಳುವನೆಂದು ಭಾವಿಸಿ, ಗುರುಗಳನ್ನು ಬೇರೆ ಇರಲು ಹಚ್ಚಿದರು. ಬೇರೆ ಇರಹತ್ತಿದಾಗಿನಿಂದ ಕುಹಕರ ದೃಷ್ಟಿಯಂತೆ ಗುರುಗಳ ಸಾಧನವು ಕಡಿಮೆಯಾಗದೆ, ಅದು ಮತ್ತಿಷ್ಟು ಶೀಘ್ರವಾಗಿಯೂ, ಸ್ವಲ್ಪಮಟ್ಟಿಗೆ ಯಾಕಾಗಲೊಲ್ಲದು. ತ್ರಾಸರಹಿತವಾಗಿಯೂ ಸಾಗಹತ್ತಿತು. ಗುರುಪತ್ನಿಯವರು ಅತ್ಯಂತ ಉಜ್ವಲವೃತ್ತಿಯ ಶೀಡಕಸ್ವಭಾವದವರಿದ್ದರು. ಅವರು ತಮ್ಮ ಪತಿದೈವನಿಗೆ ತೊಂದರೆಕೊಡುವದಕ್ಕಾಗಿ, (ಹೀಗೆನ್ನುವದಕ್ಕಿಂತ ಅವನಲ್ಲಿ ಸಾಧುತ್ವವು ತೀವ್ರವಾಗಿ ಸ್ಥಿರಗೊಳ್ಳುವದಕ್ಕೆಂದರೆ ಹೆಚ್ಚು ಸಮಂಜಸವಾಗಿ ತೋರುವದು.) ಬಹುಪರಿಯ ಕಷ್ಟಗಳನ್ನು ಕೊಟ್ಟರು. ಅವರು ತಮ್ಮ ಪತಿಯೆಂದು ಉಜರು ಇಡದೆ ಸಾಧುಗಳವರಿಂದ ಕುಟ್ಟುವದು, ಬೀಸುವದು. ಮುಸುರಿತಿಕ್ಕುವದು ಮೊದಲಾದ ನೀಚ ಕೆಲಸಗಳನ್ನು ಮಾಡಿಸಿದರು. ಮಂದಿಯ

ಎದುರಿಗೆ ಅವರನ್ನು ಸಿಕ್ಕ ಸಿಕ್ಕ ಹಾಗೆ ಅಂದುಕೊಂಡರು. ಇವೆಲ್ಲ ಪರೀಕ್ಷೆಗಳಲ್ಲಿ ಸಾಧುಗಳು ಉತ್ತೀರ್ಣರಾಗಲಿಕ್ಕೆ ಅವರಲ್ಲಿದ್ದ ದೃಢ ನಿಶ್ಚಯ. ಅಲೌಕಿಕತೆ ಮೊದಲಾದ ಗುಣಗಳ ಸಹಾಯವಾಯಿತು. ಎಂಥ ಪ್ರತಿಕೂಲಪ್ರಸಂಗದಲ್ಲಿಯೂ ಅವರಿಗೆ ಸಾಧನದಮಾರ್ಗವು ಸುಗಮವಾಗಿ ತೋರುತ್ತಿತ್ತು. ಅಂತೇ ಅವರು ಅಲೌಕಿಕರೂ, ಕರ್ತೃ ಮಾಕರ್ತೃಮಶಕ್ತಿಯುಳ್ಳವರೂ ಆಗಿ ಲೋಕದಲ್ಲಿ ವಿಖ್ಯಾತ ರಾದರು .

ಪ್ರತಿಕೂಲತೆಯಲ್ಲಿ ಪ್ರಗತಿಯನ್ನು ಹೊಂದಬೇಕಾದರೆ, ಸೌಜನ್ಯ, ಸಹನಶೀಲತೆ, ಶ್ರಮಸಹಿಷ್ಣುತೆ, ದೀರ್ಘಪರಿಶ್ರಮ ಈ ಗುಣಗಳು ಸಾಧಕನಲ್ಲಿರಬೇಕಾಗುತ್ತವೆ. ಒಂದೇ ಕಾರಖಾನೆಯೊಳಗಿನ "ಸರಿ ಜೋಡಿಯಿಂದ ಕೆಲಸಮಾಡುವ ಇಬ್ಬರು ಕೆಲಸಗಾರರಲ್ಲಿ ಒಬ್ಬನ ಲಕ್ಷ್ಯವು ತನ್ನ ಪಗಾರವು ಎಷ್ಟು ಬೇಗ "ಹೆಚ್ಚೀತೆಂಬುದರ ಕಡೆಗೆ ಇದ್ದರೆ, ಇನ್ನೊಬ್ಬನ ಲಕ್ಷ್ಯವು ತಾನು ಎಷ್ಟುಬೇಗ ಕಾರಖಾನೆಯ ಎಲ್ಲ ಕೆಲಸಗಳಲ್ಲಿ ಪಾರಂಗತನಾದೇನೆನ್ನುವದರ ಕಡೆಗೆ ಇರುತ್ತದೆ. ಮೊದಲನೆಯವನಿಗೆ ವರ್ಷಾರುತಿಂಗಳುಗಳಲ್ಲಿ ಬಡತಿ ಸಿಗದಾಗಲು, ಅವನು ಮನಸ್ಸುಗೊಟ್ಟು ಕೆಲಸಮಾಡದಾಗುವನು. ಆದರೆ ಇದಕ್ಕೆ ವಿರುದ್ಧವಾಗಿ ಎರಡನೆಯವನು ಬಡತಿಯ ಆಶೆಗೆ ಬೀಳದೆ ಕಾರಖಾನೆಯನ್ನು ನಡೆಸುವ ಕಾರಖಾನದಾರನ ಗುಹ್ಯಗಳನ್ನು ತಿಳಿದುಕೊಳ್ಳುವದರಲ್ಲಿ ಸತತವಾಗಿ ಶ್ರಮಪಡುವನು. ಆಕಸ್ಮಿಕ ಪ್ರಸಂಗದಿಂದ ಕಾರಖಾನೆಯು ಬಂದುಮಾಡಲ್ಪಟ್ಟರೆ, ಮೊದಲನೆಯವನು ನಿರಾಧಾರನಾಗಿ, ನೌಕರಿಗಾಗಿ ಕಂಡಕಂಡವರನ್ನು ಯಾಚಿಸಹತ್ತುವನು. ಎರಡನೆಯವನು ಕೂಡಲೆ ಚಿಕ್ಕದೇ ಯಾಕಾಗಲೊಲ್ಲದು ಸ್ವಂತದ ಉದ್ಯೋಗವನ್ನು ಪ್ರಾರಂಭಿಸಿ, ಉತ್ಸಾಹದಿಂದಲೂ, ಜಾಗ್ರತೆಯಿಂದಲೂ ನಡೆಯಿಸಹತ್ತುವನು. ಆದ್ದರಿಂದ ಪ್ರಗತಿಯ ನಿಜವಾದ ತತ್ವಗಳನ್ನು-ಪ್ರತಿಕೂಲ ಸಂಧಿಯನ್ನೇ ಅನುಕೂಲ ಮಾಡಿಕೊಳ್ಳುವ ರಹಸ್ಯವನ್ನು-ಬಲ್ಲಂಥ ಮನುಷ್ಯನನ್ನು ಪ್ರಗತಿಮಾರ್ಗದಿಂದ ಪರಾ

ವೃತ್ತರನ್ನಾಗಮಾಡಲಿಕ್ಕೆ ಯಾರೂ ಶಕ್ತರಾಗಲಿಕ್ಕಿಲ್ಲ. ಒಮ್ಮೊಮ್ಮೆ ಒಂದೆರಡು ಪ್ರತಿಕೂಲ ಪ್ರಸಂಗಗಳಲ್ಲಿ ನಮ್ಮ ಸಾಧನವು ಸ್ವಲ್ಪ ಕುಂಠಿತವಾದಂತೆ ತೋರಿದರೂ, ನಿಜವಾಗಿ ಅದು ಕುಂಠಿತವಾಗಿರುವದಿಲ್ಲ. ಚಳಿಗಾಲದ ಮೂಡಣಗಾಳಿಂದ ಎಲೆಗಳುದುರಿ ಆಮ್ರವೃಕ್ಷವು ಬಾಡಿದಹಾಗೆ ತೋರಿದರೂ, ಮುಂದೆ ಬರುವ ವಸಂತಋತುವಿನಲ್ಲಿ ಚಿಗಿತು ಅದು ಮನೋಲ್ಲಾಸಕ್ಕೆ ಕಾರಣೀಭೂತವಾಗುವಂತೆ, ಆ ಸಂದಿಹೋದ ಪ್ರತಿಕೂಲ ಪ್ರಸಂಗಗಳೇ ಪ್ರಗತಿಗೆ ಕಾರಣವಾದದ್ದೆಂದು ಕಂಡುಬರುವದು.

ಉನ್ನತಿಯು(ಪ್ರಗತಿಯು) ನಮ್ಮಲ್ಲಿ ದೃಢನಿಶ್ಚಯವಿದ್ದ ಮಾನದಿಂದ ಬೆಳೆಯುವದು, ಹೊರತು ಅದಕ್ಕಿಂತ ಮಿತಿಮೀರಿ ಆಗಲಾರದು. "ನಮ್ಮ ದೈವದಲ್ಲಿ ಸಾಯುವವರೆಗೆ ಶಿಪಾಯಿಯಾಗುವದೇ ಇರುವದೆ"ಂದು ನಂಬಿರುವ ಮನುಷ್ಯನು ಬಹುಶಃ ಶಿಪಾಯಿತನಬಿಟ್ಟು ಜಮಾದಾರನಾಗಲಾರನು. "ಕಾರಕೂನಿಕಿ ಒಂದು ಸಿಕ್ಕರೆ ಸಾಕು, ನಮಗೆ ಹೆಚ್ಚಿನ ಹುದ್ದೆ ಯಾತಕ್ಕೆ ಬೇಕೆ"ಂದು ಭಾವಿಸಿರುವವನಿಗೆ ಕಾರಕೂನಿಕಿ ಸಿಗುವದೇ ದುರ್ಲಭವಾಗುವದು. ಯಾಕಂದರೆ ಈ ಜನರು ಕಲ್ಪನಾಸೃಷ್ಟಿಯಲ್ಲಿ ಸಹ ಹೆಚ್ಚಿನ ಪದವಿಗೇರುವಾಗ ತೋರಬಹುದಾದ ಪ್ರತಿಕೂಲಸಂಗತಿಗಳಿಗೇ ಅಂಜುತ್ತಿದ್ದದರಿಂದ ಇವರು ನಿಜವಾದ ಪ್ರಗತಿಗೆ ಸ್ವಾಭಾವಿಕವಾಗಿ ಅಯೋಗ್ಯರಾಗುವರು. ಆತ್ಮಶ್ರದ್ಧೆ, ದೃಢನಿಶ್ಚಯಗಳಿದ್ದ ಹೊರತು ಪ್ರತಿಕೂಲಪ್ರಸಂಗಗಳಿಗೆ ಎದೆಗೊಡುವ ಧೈರ್ಯವುಂಟಾಗುವದಿಲ್ಲ. ಈ ಗುಣಗಳು ಇರದ್ದರಿಂದಲೇ ಶಿಪಾಯಿಯು ಕಡೆತನಕ ಶಿಪಾಯಿಯಾಗಿಯೂ, ಕಾರಕೂನನು ಸಾಯುವವರೆಗೆ ಕಾರಕೂನನೇಆಗಿಯೂ ಇರಬೇಕಾಗುತ್ತದೆ.

ಆಕಾಶದಲ್ಲಿ ತೂರಿದ ಚೆಂಡು ಮರಳಿ ನೆಲಕ್ಕೆ ಬೀಳುವದು ಹ್ಯಾಗೆ ಸಂಭವವೋ, ನೀರಲ್ಲಿ ಚಲ್ಲಿದ ಕಲ್ಲು ಮುಣುಗುವದು ಹ್ಯಾಗೆ ಸಂಭವವೋ ಹಾಗೆಯೇ ದೃಢನಿಶ್ಚಯದಿಂದ ಮಾಡಿದ ಪ್ರಯತ್ನದಿಂದ ಪ್ರಗತಿಯಾಗುವದು ಸಂಭವವಾಗಿರುತ್ತದೆ, ಇದರಲ್ಲಿ ಅಭ್ಯಂತರ

ವೇನೂ ಇರುವದಿಲ್ಲ. ಸ್ವಾತಂತ್ರ್ಯಪ್ರೀತಿ, ದೃಢನಿಶ್ಚಯ, ಅಪೂರ್ವತೆ, ಮಹತ್ವಾಕಾಂಕ್ಷೆ, ಸ್ವಾವಲಂಬನ ಮೊದಲಾದ ಗುಣಗಳಲ್ಲಿ ಯಾದರೂ ಗುರುತ್ವಾಕರ್ಷಣಧರ್ಮದಂತೆ ಈ ಪ್ಸಿತಸಾಧನವನ್ನು ತಪ್ಪದೆ ದೊರಕಿಸಿಕೊಡುವ ಶಕ್ತಿಯಿರುತ್ತದೆ. ಈ ಮಾರ್ಗದಿಂದ ಪ್ರಗತಿಯು ಬೇಗನೆ ಆಗುವದಿಲ್ಲೆಂದು ಭಾವಿಸಿ ಆತಂತ್ರವಿಚಾರದಮನುಷ್ಯನು ಬೇರೆ ದುರ್ಮಾರ್ಗದಿಂದ ತೀವ್ರ ಪ್ರಗತಿಹೊಂದಲು ಯತ್ನಿಸಿದರೆ, ಆವನ ಪ್ರಗತಿಯಾಗುವದೊತ್ತಟ್ಟಿಗೇ ಉಳಿದು ಗೌಳಿಗನು ಕೆಚ್ಚಲಕೊಯ್ದು ಎಮ್ಮೆಯ ಎಲ್ಲ ಹಾಲನ್ನು ಒಂದೇದಿವಸ ಕರೆಯಲಿಚ್ಛಿಸಿ, ಹತಭಾಗಿಯಾದಂತೆ, ಹತಾಶನಾಗುವನು.

ಸಂಪತ್ತಿಯಾಗಲಿ, ಸೌಖ್ಯವಾಗಲಿ ತಾವಾಗಿ ನಮ್ಮನ್ನು ಹುಡುಕಿಕೊಂಡು ಬರುವದಿಲ್ಲ. ನಾವು ಅದನ್ನು ಎದುರುಗೊಳ್ಳಲು ಹೋದರೆ ಮಾತ್ರ ಅವು ನಮ್ಮೆಡೆಗೆ ಬರಹತ್ತುವವು. ಯಶೋಮಂದಿರದ ಬಾಗಿಲವು ಸದಾ ತೆರೆಯಲ್ಪಟ್ಟಿರುತ್ತದೆ. ಆದರೆ ಬಾಗಿಲವನ್ನು ಪ್ರವೇಶಿಸುವ ಮಾರ್ಗವನ್ನು ಕಂಡುಹಿಡಿಯುವದು ಮಾತ್ರ ಎಲ್ಲರಿಂದಲೂ ಆಗುವದಿಲ್ಲ. ಇಷ್ಟೇ ಅಲ್ಲ. ಆ ದ್ವಾರವನ್ನು ಪ್ರವೇಶಿಸುವ ಪ್ರತಿಯೊಬ್ಬನ ಮಾರ್ಗವು ಬೇರೆ ಬೇರೆಯಾಗಿರುವದರಿಂದ ತಂದೆಯಮಾರ್ಗವು ಮಗನಿಗೂ, ತಾಯಿಯಮಾರ್ಗವು ಮಗಳಿಗೂ, ಅರಸನಮಾರ್ಗವು ಪ್ರಜೆಗಳಿಗೂ, ಗುರುವಿನಮಾರ್ಗವು ಶಿಷ್ಯನಿಗೂ ಯಶಃಪ್ರಾಪ್ತಿಗೆ ಪ್ರಗತಿಗೆ ಸುಗಮವಾಗಲಿಕ್ಕಿಲ್ಲ; ಆದ್ದರಿಂದ ಪ್ರಗತಿಪರನು ಹಿಂದೆ ಹೇಳಿದಂತೆ ಲೋ, ಟಿಳಕರಂತೆ ವ್ಯಾಖ್ಯಾನಕೊಟ್ಟು, ಶ್ರೀಯುತ ಶಿವರಾಮಪಂತ ಪರಾಂಜಪೆಯವರಂತೆ ಲೇಖಬರೆದು, ಪ್ರೊ, ಕರ್ವೆಯವರಂತೆ ಸಾಹಸಪಟ್ಟು, ವೈ, ವೇಂಕಟ ರಂಗೋ ಕಟ್ಟಿಯವರಂತೆ ಭಾಷೆಯಏಳ್ಗೆಯನ್ನು ಮಾಡಿ ಇಲ್ಲವೆ ಪ್ರಸಿದ್ಧ ಕಳ್ಳನಾದ ಕಟ್ಟಿಚೆನ್ನನಂತೆ ಕಳುವುಮಾಡಿ ತಲೆಹೊಡಕ ವಾಲ್ಮಿಕನಂತೆ ತಲೆಹೊಡೆದು ಪ್ರಸಿದ್ಧರಾಗಲು ಯತ್ನಿಸುವದು ದಡ್ಡತನವು. ಪ್ರಗತಿಗಾಮಿಯು ದೃಢನಿಶ

ಯದ ಬಲದಿಂದ ಪ್ರತಿಕೂಲಪ್ರಸಂಗಗಳ ಮುಂದೆ ಸೆಡ್ಡು ಹೊಡೆಹೊಡೆದು ನಿಲ್ಲಹತ್ತಿದಂತೆ ಆ ಪ್ರಸಂಗಗಳು ಹೋಗಿ ಇಲ್ಲವೇ ಅವೇ ಅನುಕೂಲಗಳಾಗಿ ಪರಿಣಮಿಸಿ ಅವನ ಪ್ರಗತಿಗೆ ಕಾರಣವಾಗುವವು

## ೬ ನೆಯ ಖಂಡ—ಸಮಯಸಾಫಲ್ಯ.

ಬೇಬಂದಶಾಹಿಯು ನಿಜಾಮರಾಜ್ಯದಲ್ಲಿ ಹಿಂದಕ್ಕೊಮ್ಮೆ ಬಾದಶಹನ ಮೆಹರಬಾನಿಗೆಯಿಂದ 'ಗೋಮಾಜಿ ಕಾಪಸೆ' ಎಂಬಾತನಿಗೆ ಮೂರು ಮುಕ್ಕಾಲುಗಳಿಗೆಯವರೆಗೆ ಬಾದಶಾಹಿ ಪದವಿಯು ದೊರಕಿತ್ತಂತೆ! ಆ ಸಮಯಾನುವರ್ತಿಯು ಮೂರು ಮುಕ್ಕಾಲುಗಳಿಗೆಯಲ್ಲಿ ಲಕ್ಷಾಂತರ 'ಜನರಿಗೆ ಇನಾಮುಗಳ ಸನದುಗಳನ್ನು ಮಾಡಿಕೊಟ್ಟನೆಂದೂ, ಅವನು ಹಾಕಿಕೊಟ್ಟ ಇನಾಮುಗಳೇ ಈಗ್ಯೂ ಕರ್ನಾಟಕದೊಳಗಿನ ಜನರಿಗೆ ವಿಶೇಷವಾಗಿ ಬ್ರಾಹ್ಮಣರಿಗೆ ನಡೆಯುತ್ತವೆಯೆಂದೂ ಕೇಳಿಕೆಯಲ್ಲಿದೆ. ಗೋಮಾಜಿ ಕಾಪಸೆಯು ಯಾರೇ ಇರಲಿ, ಎಂಥ ವಿಚಾರದವನೇ ಇರಲಿ. ಅವನ ಸಮಯಸಾಫಲ್ಯವು ಹೊಗಳತಕ್ಕದ್ದೇಸರಿ!

ಎಷ್ಟೋತಲೆಗಟ್ಟಲೆ ಬಾದಶಾಹಿಯನ್ನು ಅನುಭವಿಸಿದ ನಿಜಾಮನು ಮಾಡದ ಕೆಲಸವನ್ನು ಕೇವಲ ಮೂರು ಮುಕ್ಕಾಲುಗಳಿಗೆ ಪಟ್ಟವೇರಿದ ಗೋಮಾಜಿಕಾಪಸೆಯು ಹ್ಯಾಗೆ ಸಾಧಿಸಿದನು ನೋಡಿರಿ! ಮನುಷ್ಯನಲ್ಲಿ ಸ್ವಾತಂತ್ರ್ಯಪ್ರೀತಿ, ದೃಢನಿಶ್ಚಯ, ಮಹತ್ವಾಕಾಂಕ್ಷೆ, ಅಲೌಕಿಕತೆ, ಸದಸದ್ವಿವೇಕ ಬುದ್ಧಿಗಳು ಜಾಗ್ರತವಿದ್ದವೆಂದರೆ ಆ ಮನುಷ್ಯನು ತಕ್ಕ ಸಮಯವನ್ನು ನಿರರ್ಥಕವಾಗಿ ವ್ಯಯಮಾಡುವದಿಲ್ಲ. ಸರ ಎಂ. ವಿಶ್ವೇಶ್ವರಯ್ಯನವರು ಮೈಸೂರ ದಿವಾಣಗಿರಿಯನ್ನು ೫-೬ ವರ್ಷಮಾಡಿದರು. ಈ ಅವಧಿಯಲ್ಲಿ, ಮೈಸೂರಸಂಸ್ಥಾನದಲ್ಲಿ ಆದ ಸುಧಾರಣೆಗಳು ಅಪೂರ್ವವಾಗಿರುವವು. ಗ್ರಾಮಾಭಿವೃದ್ಧಿಖಾತೆ, ರೇಲ್ವೆಖಾತೆ ಮೊದಲಾದ ಹೊಸಖಾತೆಗಳು ಉದಯಕ್ಕೆ ಬಂದು ಪ್ರಜೆಗಳಿಗೆ ಆರೋಗ್ಯ ಹಾಗು ಪ್ರಯಾಣಸೌಕರ್ಯವನ್ನುಂಟು

ಮಾಡಹತ್ತಿವೆ· ಅರ್ಥಸಾಧಕದ ವಿಚಾರಗಳ ಚರ್ವಣವಾಗಹತ್ತಿ ಜನರ ಆರ್ಥಿಕ ದೃಷ್ಟಿಯು ವಿಸ್ತೃತವಾಗಹತ್ತಿದೆ. ಕನ್ನಂಬಾಡಿಯು 'ಕೃಷ್ಣರಾಜಸಾಗರ'ದಂಥ ವಿಸ್ತೀರ್ಣ ಕೆರೆಯು ಕಟ್ಟಲು ಪ್ರಾರಂಭ ವಾದ್ದರಿಂದ ರೈತರು ವಿಶ್ವೇಶ್ವರಯ್ಯನವರ ವಿಷಯಕ್ಕೆ ಆದರವುಳ್ಳವ ರಾಗಿದ್ದಾರೆ. ಪ್ರಜಾಪ್ರತಿನಿಧಿಸಭೆಯಿಂದ ರಾಜ-ಪ್ರಜೆಗಳಲ್ಲಿ ಪ್ರೇಮವು ವೃದ್ಧಿಂಗತವಾಗಹತ್ತಿದೆ. ಆದರೆ ಇದು ಯಾತರ ಫಲವು? ಸರ ವಿಶ್ವೇಶ್ವರಯ್ಯನವರ ಸಮಯಸಾಫಲ್ಯವೆಂದು ನಿಸ್ಸಂಶಯವಾಗಿ ಮೂರು ಮೂರು ಸಾರೆ ಹೇಳಬಹುದು. ಯಾಕಂದರೆ, ವಿಶ್ವೇಶ್ವರ ಯ್ಯನವರಿಗಿಂತ ಮೈಸೂರ ರಾಜ್ಯಕ್ಕೆ ಪೂರ್ವದಲ್ಲಿ ದಿವಾಣರಿದ್ದಿಲ್ಲ ವೆಂತಲ್ಲ: ಇಲ್ಲವೆ ಆಗ ಅನಾನುಕೂಲತೆಗಳು ಇದ್ದವೆಂದು ಹೇಳ ಲಿಕ್ಕೂ ಬರುವಹಾಗಿಲ್ಲ ಆಗ ಈಗಿನಕ್ಕಿಂತ ಹೆಚ್ಚು ಅನುಕೂಲತೆ ಗಳು ಇದ್ದವು. ಪ್ರಸ್ತುತದ ಮಹಾಯುದ್ಧದಂಥ ಸಾಧನಾಭಾವದ ಪ್ರಸಂಗದಲ್ಲಿ ಕೂಡ ಮೈಸೂರರಾಜ್ಯದ ಸುಧಾರಣೆಯು ಒಂದೇಸ ವನೆ ಆಗುವದನ್ನು ನೋಡಿದರೆ ಸಮಯಸಾಫಲ್ಯಮಾಡಿಕೊಳ್ಳುವ ಶಕ್ತಿ ವಿಶೇಷದಿಂದ ವಿಶ್ವೇಶ್ವರಯ್ಯನವರು ಕೀರ್ತಿಶಾಲಿಗಳಾಗುತ್ತಲಿ ರುವರು: ಅವರ ದೃಢನಿಶ್ಚಯ, ಸ್ವಾತಂತ್ರ್ಯಪ್ರೀತಿ, ಸುಧಾರಣಾ ಕಾಂಕ್ಷೆ, ದೇಶಹಿತದಕ್ಷತೆ ಮೊದಲಾದ ಗುಣಗಳು ಅವರ್ಣನೀಯವಾ ಗಿವೆ. ಇವರು "ಕ್ಷಣಶಃ ಕಣಶಃ ಚೈವ ವಿದ್ಯಾಮರ್ಥಂಚ ಸಾಧ ಯೇತ್" ಎಂಬಂತೆ ತಮ್ಮ ಪ್ರತಿಕ್ಷಣವನ್ನು ದೇಶಹಿತದಲ್ಲಿ ವೆಚ್ಚಮಾ ಡುತ್ತಿರುವದರಿಂದ ಇವರು ಪ್ರಸಿದ್ಧಿಯಾಗಹತ್ತಿದ್ದರಲ್ಲಿ ಆಶ್ಚರ್ಯವಿಲ್ಲ.

ಕೈ, ಪ್ರೋ. ದೇಸಾಯಿ ಎಂಬ ಗಣಿತಜ್ಞರು ಒಂದು ಮಿನಿ ಟನ್ನು ಸಹ ವ್ಯರ್ಥವಾಗಿ ಕಳೆಯುತ್ತಿದ್ದಿಲ್ಲವಂತೆ; "ಹೊತ್ತುಹೋ ದರೆ ಮತ್ತೆಬಾರದು, ಮುತ್ತುಹೋದರೆ ಮತ್ತೆ ಬಪ್ಪದು" ಸಾವಿರಾರು ರೂಪಾಯಿಗಳಿಗಿಂತ ಒಂದು ತಾಸಿನ ಬೆಲೆಯು ಎಷ್ಟೋ ಹೆಚ್ಚಿರುವ ದೆಂದು ಅವರು ಭಾವಿಸಿದ್ದರು. ಅವರ ನಡಿಗೆಯು ಗತಿಯು ಕೇವಲ ಯಾಂತ್ರಿಕಪದ್ಧತಿಯದಾಗಿತ್ತು; ಮನೆಯಿಂದ ಸಾಲೆಗೆ ಬರಲಿಕ್ಕೆಂದು

ನಿಯಮಿಸಿದ ಮಿನೀಟುಗಳಲ್ಲಿ ಅವರು ತಪ್ಪದೆ ಬರುತ್ತಿದ್ದರು. ಪ್ರಿನ್ಸಿಪಾಲರಿದ್ದಾಗ ರಾತ್ರಿ ಹುಡುಗರ ಕೋಣೆಯನ್ನು ತಪಾಸಿಸುವಾಗ ಪ್ರತಿನಿತ್ಯ ಇಂಥವನ ಕೋಣೆಗೆ ಇಷ್ಟುಹೊಡೆದು ಇಷ್ಟುಮಿನೀಟಗೆ ತಪ್ಪದೆ ಹೋಗುತ್ತಿದ್ದರು. ಆ ಕಾಲವನ್ನು ಅವರು ಎಂದೂ ತಪ್ಪಿಸಲಿಲ್ಲ. ಆ ವೇಳೆತಪ್ಪಿಸಬೇಕೆಂಬ ವಿಚಾರಮಾಡಲಿಕ್ಕೆ ಕೂಡ ಅವರಿಗೆ ಸಮಯದೊರೆಯುತ್ತಿದ್ದಿಲ್ಲವಂತೆ!

ಆದರೆ ದೇಸಾಯಿಯವರ ಅನುಕರಣಮಾಡಿ ಸಮಯಸಾಫಲ್ಯ ಮಾಡಿಕೊಳ್ಳುವದರಲ್ಲಿ ಅವರ ಶಿಷ್ಯರಲ್ಲಿ ಎಷ್ಟುಜನ ವಿದ್ಯಾರ್ಥಿಗಳು ನಮ್ಮ ಕಣ್ಣಿಗೆ ಬೀಳುತ್ತಾರೆ. ಒಬ್ಬನೂ ಇಲ್ಲವೆಂದು ಹೇಳಬಹುದು. ಸರ್ವಸಾಧಾರಣವಾದ ನಿಷ್ಕಾಳಜಿತನವೂ, ವೇಳೆಯ ಅಮೂಲ್ಯತೆಯ ಅಜ್ಞಾನವೂ ಇವೇ ಆಯುಷ್ಯವನ್ನು ಶೋಕಪರ್ಯವಸಾಯಿಯಾಗಿಮಾಡುವ ಕಡುವೈರಿಗಳಾಗಿವೆ. ಬಹುಜನರು ತಮ್ಮ ಆಯುಷ್ಯದೊಳಗಿನ ಎಷ್ಟೋ ತಾಸುಗಳನ್ನೂ, ದಿವಸಗಳನ್ನೂ, ತಿಂಗಳುಗಳನ್ನೂ ನಿರರ್ಥಕವಾದ ಕಾರ್ಯಗಳಲ್ಲಿ ಕಳೆಯುತ್ತಾರೆ. ಆಲಸ್ಯದಲ್ಲಿಯಾಗಲಿ, ಖುಷಿಮೋಜಿನಲ್ಲಾಗಲಿ ವ್ಯಯಮಾಡುವ ವೇಳೆಯ ಶತಾಂಶದಷ್ಟು ಹಣವನ್ನು ಕೂಡ ಅತ್ಯಂತ ದೀವಾಳಿಖೋರನು ಸಹ ಹಾಳುಮಾಡಿಕೊಳ್ಳುವದಿಲ್ಲ.

ಲೋ. ಟಿಳಕರ ವಿಷಯಕ್ಕೆ ಆದರವಹಿಸುವ, ಅವರ ಯಶಸ್ಸನ್ನು ಕುರಿತು ಚಕಿತರಾಗುವ, ಅವರನ್ನು ಹಿಂದುಮಾತೆಯ ಭಾಗ್ಯವಾನ್ ಪುತ್ರರೆಂದು ಭಾವಿಸುವ ಜನರು, ಟಿಳಕರವರು ಹೊಂದಿರುವ ಪ್ರಗತಿಯು ಅವರ ಸಮಯಸಾಫಲ್ಯದ ಫಲವೇ ಆಗಿದೆಯೆಂದು ತಿಳಿಯಬೇಕಲ್ಲವೇ? ಟಿಳಕರವರು ಪ್ರತಿಯೊಂದು ಸಾರೆಯ ಜೇಲಿನೊಳಗಿನ ಆಯುಷ್ಯವನ್ನು ಕೂಡ ಸಾಫಲ್ಯಮಾಡಿಕೊಂಡಿರುವರಾದ್ದರಿಂದ, ಅವರಂಥ ಬೇರೆ ಉದಾಹರಣೆಯೇ ಇಲ್ಲದಾಗಿದೆ. ಸಮಯ ಸಾಫಲ್ಯವೇ ನಿಜವಾದ ಜೀವನ ಸಾಫಲ್ಯವು. ನಿರರ್ಥಕವಾಗಿ ವೇಳೆ ಕಳೆದು ಯಾರು ಪ್ರಸಿದ್ಧಿಗೆ ಬಂದಿರುವರು? ಮರಣವು ಅನಿಶ್ಚಿತ

ವಾದ್ದರಿಂದ ಪ್ರತಿಕ್ಷಣದಲ್ಲಿ ಪ್ರಗತಿಪರ ಕಾರ್ಯಮಾಡಲಿಕ್ಕೆ ಹಿಂದು ಮುಂದು ನೋಡಬಾರದು.

"ಬೇಕಾದರೆ ದುಡ್ಡು ಹಾಳುಮಾಡಿರಿ, ಮನೆಮಾರು ಹಾಳು ಮಾಡಿಕೊಳ್ಳಿರಿ; ಆದರೆ ವೇಳೆಯನ್ನು ಮಾತ್ರ ಹಾಳುಮಾಡಿಕೊಳ್ಳ ಬೇಡಿರಿ" ಎಂದು ಒಬ್ಬ ಆಂಗ್ಲ ಗ್ರಂಥಕಾರನು ಸಮಯದ ಮಹತ್ವ ವನ್ನು ಒಂದುಕಡೆಗೆ ಹೇಳಿರುವನು. ಬೆಲೆಬಾಳುವ ಯಾವ ವಸ್ತು ಗಳೂ ವೇಳೆಯನ್ನು ಸರಿಗಟ್ಟಲಾರವು. ವೇಳೆಯು ಅಮೂಲ್ಯವಾ ಗಿದೆ. ವೇಳೆಯ ಅಪವ್ಯಯದಿಂದ ಆಗಬಹುದಾದ ಹಾನಿಯು ಯಾತರಿಂದಲೂ ತುಂಬಿಬರಲಾರದು. "ಬಾಣಬಿಟ್ಟರೆ ಹೋಯಿತು, ಮುತ್ತು ಒಡೆದರೆ ಹೋಯಿತು" ಎಂಬಂತೆ ಸಂದ ವೇಳೆಯು ತಿರುಗಿ ಎಂದೂ ಬರಲಾರದು. ನಿರರ್ಥಕವಾಗಿ ದುಡ್ಡನ್ನು ಹಾಳುಮಾಡುವ ಮನುಷ್ಯನನ್ನು ಜನರು ನಿಂದಿಸುವಂತೆ,ವ್ಯರ್ಥವೇಳೆಯನ್ನು ಕಳೆಯುವ ಮನುಷ್ಯನನ್ನು ಜನರು ಹಳಿಯುವದಿಲ್ಲ. ಈ ಆಲಸ್ಯಗಾರರು ಪ್ರಗತಿ ಪಥವನ್ನು ಹಿಡಿಯಲು ತಮಗ ಯೋಗ್ಯ ಸಮಯವೇ ಸಿಗುವದಿಲ್ಲೆಂ ತಲೂ, ಸಾಧನಗಳು ಸರಿಯಾಗಿರುವದಿಲ್ಲೆಂತಲೂ, ಹಿಡಿದ ಕಾರ್ಯ ದಲ್ಲಿ ಯಶವು ಬರುವದಿಲ್ಲೆಂತಲೂ ಗುಣಗುಟ್ಟುವರು. ಆದರೆ ಇವರು ತಮ್ಮ ವೇಳೆಯನ್ನು ಸರಿಯಾಗಿ ಉಪಯೋಗಿಸಲಾರದವರಾ ದ್ದರಿಂದ ಇವರ ಪ್ರಗತಿಯು ಎಂದೂ ಆಗಲಿಕ್ಕಿಲ್ಲೆಂಬದು ಸಿದ್ಧಾಂತವು.

ಎಂಜಿನವು ಎಷ್ಟು ಕೌಶಲದಿಂದ ತಯಾರಿಸಲ್ಪಟ್ಟಿದ್ದರೂ, ಅದಕ್ಕೆ ಉಗಿಯುಶಕ್ತಿಯು ದೊರೆತಹೊರತು ಅದು ಒಂದು ತುಸು ಕೂಡ ಸರಿದಾಡಲಾರದು. ಆದರಂತ ಸಾಮರ್ಥ್ಯವು ಎಷ್ಟಿದ್ದರೇನು? ಆದರ ಉಪಯೋಗ ಮಾಡಿಕೊಂಡರ ಮಾತ್ರ ಪ್ರಯೋಜನವಾಗುವ ಸಂಭವವಿರುವದು? ಕರ್ತವ್ಯಬುದ್ಧಿಯನ್ನು ಜಾಗ್ರತಗೊಳಿಸದ್ದರಿಂದಲೇ ನಮ್ಮಲ್ಲಿಯ ಎಷ್ಟೋ ಜನರ ಆಯುಷ್ಯವು ವ್ಯರ್ಥವಾಗಿ ಕ್ಷೀಣಿಸ ಹತ್ತಿದೆ. ಅವರು ಕೈಲಾಗದವರೆಂತಲ್ಲ. ಬಹು ಜನರು ಸಮಯ ಸಾಫಲ್ಯದ ಮಹತ್ವವನ್ನರಿಯದೆ, ಗಾಢನಿದ್ರೆಹತ್ತಿದವರಂತೆ ಸುಖರೂಪ

ದಿಂದಿರುವರು. ನಾವೆಲ್ಲರೂ ಬರೇ ಹೊಟ್ಟೆಹೊರಕೊಳ್ಳುವದೊಂದೇ ಧ್ಯೇಯವನ್ನು ಮುಂದಿಟ್ಟುಕೊಂಡಿರುವದರಿಂದ, ನಮಗೆ ವೇಳೆಯ ಮಹತ್ವವು ತಿಳಿಯದಾಗಿದೆ. ಪೃಥ್ವಿಯೊಳಗಿನ ದೊಡ್ಡ ದೊಡ್ಡ ಗುಡ್ಡ, ವಿಶಾಲವಾದ ಸರೋವರ, ವಿಸ್ತೀರ್ಣಗಳಾದ ಸಾಗರ ಮೊದಲಾದವುಗಳನ್ನು ನೋಡಿ, ಇವುಗಳಿಂದ ವಿಶೇಷ ಪ್ರಯೋಜನವೇನೆಂದು ಕೇಳುವ "ಮೂಢನು, ತನ್ನ ಎಷ್ಟು ವೇಳೆಯನ್ನು ನಿರರ್ಥಕವಾಗಿ ವ್ಯಯಮಾಡುತ್ತೇನೆಂಬದನ್ನು ತಿಳಿಯದವನಾಗಿರುತ್ತಾನೆ. ಅವನವನ ಮಟ್ಟಿಗೆ ಪ್ರಗತಿಹೊಂದುವ ಸಾಮರ್ಥ್ಯವನ್ನು ದೇವರು ಎಲ್ಲರಿಗೂ ಕೊಟ್ಟಿರುತ್ತಾನೆ. ಆದರೆ ಯಾವದಾದರೊಂದು ತರದ ವ್ಯಂಗದಿಂದಲೂ, ನಿಷ್ಕಾಳಜಿತನದಿಂದಲೂ, ಹುರುಪಿನ ಅಭಾವದಿಂದಲೂ ಅವನ ಸಾಮರ್ಥ್ಯವು ಸಫಲವಾಗುವದಿಲ್ಲ. ಸಾಧನಗಳು ಸಜ್ಜಾಗಿದ್ದರೂ ಅವನ್ನು ಉಪಯೋಗಿಸಿ ಪ್ರಗತಿಹೊಂದಲು ಅವನು ಶಕ್ತನಾಗುವದಿಲ್ಲ.

ಮುಂಜಾಗ್ರತಿ ಇದ್ದವನು ಸಮಯಸಾಫಲ್ಯಮಾಡಿಕೊಳ್ಳಲು ಅರ್ಹನಿರುತ್ತಾನೆ: ಯಾಕಂದರೆ ಪೂರ್ವಜನ್ಮ ಸಂಸ್ಕಾರಧರ್ಮದಂತೆ ಹಿಂದಿನ ಜನ್ಮದ ಪಾಪ-ಪುಣ್ಯಗಳ ಫಲಗಳನ್ನು ಈ ಜನ್ಮದಲ್ಲಿ ಅನುಭೋಗಿಸುವಂತೆ, ಈ ಜನ್ಮದಲ್ಲಿ ಮಾಡುವ ದುಷ್ಕೃತಿ-ಸುಕೃತಿಗಳ ಫಲಗಳನ್ನು ಭವಿಷ್ಯತ್ಕಾಲದಲ್ಲಿ ಅನುಭೋಗಿಸಲೇ ಬೇಕಾಗಿರುವದು "ಒಂದು ಕೈಯಿಂದ ಮಾಡಿದ ಅಡಿಗೆಯನ್ನು ಮತ್ತೊಂದು ಕೈಯಿಂದ ಉಣ್ಣುವದು" ನಿಜವಿರುವದರಿಂದ, ತಾನು ಭವಿಷ್ಯಕಾಲದಲ್ಲಿ ಸುಖಿಯಾಗಬಯಸುವ ಮನುಜನು ವರ್ತಮಾನಕಾಲದಲ್ಲಿ ಪ್ರಯತ್ನಪೂರ್ವಕವಾಗಿ ಸುಖಿಯಾಗಿರಲಿಕ್ಕೆ ಯತ್ನಿಸತಕ್ಕದ್ದು. ಅಸಾರವಾದ ಸಂಸಾರವನ್ನು ಸಾರಭೂತವಾಗಿ ಮಾಡುವ ಸಾಧನವು, ನಮ್ಮ ಕಿರುಕ ವೇಳೆಯ ಸಾಫಲ್ಯವನ್ನು ಮಾಡಿಕೊಳ್ಳುವದರಿಂದಲೇ ಲಭಿಸುವದು. ಕೆಲಸವಿರಲಿ-ಇಲ್ಲದಿರಲಿ, ಇಚ್ಛೆಯು ಇರಲಿ-ಇಲ್ಲದಿರಲಿ, ಕಿರುಕ ವೇಳೆಯನ್ನು ಯೋಗ್ಯವಾಗಿ ವ್ಯಯಮಾಡಹತ್ತಿದರೆ, ಬಡವನು ಫ

ಶ್ರೀಮಂತನೂ, ಅಶಿಕ್ಷಿತನು ಸುಶಿಕ್ಷಿತನೂ ನಿಶ್ಚಯವಾಗಿ ಆಗುವನು. ನೌಕರಿಯನ್ನು ಮಾಡಿ ಉಳಿದ ಕಿರುಕಳ ವೇಳೆಯಲ್ಲಿ ಕೆಲಸಮಾಡ ಹತ್ತಿ ಪ್ರೋ. ಧೋಂಡೋಪಂತ ಕರ್ವೆಯವರು ಸ್ತ್ರೀಶಿಕ್ಷಣದ ಹಲವು ಸಂಸ್ಥೆ, ಅನಾಥಬಾಲಿಕಾಶ್ರಮ, ವನಿತಾವಿದ್ಯಾಲಯ, ನಿಷ್ಕಾಮ ಕರ್ಮಮಠ, ಸ್ತ್ರೀಯರ ಸ್ವತಂತ್ರ ಯೂನಿವ್ಹರ್ಸಿಟಿಗಳನ್ನು ಸ್ಥಾಪಿಸಿ ದರು. ಕೈ. ನಾ. ರಾನಡೆಯವರು ತಮ್ಮ ಕಿರುಕಳ ವೇಳೆಯನ್ನು ದೇಶಹಿತದ ಕಾರ್ಯದಲ್ಲಿ ಉಪಯೋಗಿಸಿ, ಪ್ರಸಿದ್ಧ ದೇಶಹಿತಚಿಂ ತಕರಾದರು.

ಪ್ರಸ್ತುತದಲ್ಲಿ ಈ ಕಿರುಕಳ ವೇಳೆಯಲ್ಲಿ ಶಿಕ್ಷಣಕೊಡುವ ಹಲವು ಸಂಸ್ಥೆಗಳು ರಾಜಾಶ್ರಯ-ಲೋಕಾಶ್ರಯಗಳಿಂದ ನಡೆದಿರು ವವು. ಇವುಗಳಿಂದ ಜನರಿಗೆ ಬಹಳ ಉಪಯೋಗವಾಗುತ್ತಲಿದೆ. ಇದ್ದಊರಲ್ಲಿ ಇದ್ದು ಪಟ್ಟಣಗಳಲ್ಲಿ ನಡೆಯುವ ಶಿಕ್ಷಣವನ್ನು ಕಲಿಸುವ "ಅಕೌಂಟನ್ಸಿಕೋರ್ಸ"ದಂಥ ಉಪಯುಕ್ತ ಪತ್ರವ್ಯವಹಾ ರದ ಸಂಸ್ಥೆಗಳೂ, ರಾತ್ರಿಯಸಾಲೆ, ಸೂಟಿಯದಿವಸದಸಾಲೆ, ಕೂಲಿ ಕಾರರ ಸಾಲೆಗಳೂ ಇದಕ್ಕೆ ಉದಾಹರಣಗಳಾಗಿವೆ. ಈ ಸಂಸ್ಥೆಗಳ ದ್ವಾರಾ ತಮ್ಮ ತಮ್ಮ ಕಿರುಕಳ ವೇಳೆಯಲ್ಲಿ ಪ್ರಗತಿಯನ್ನು ಹೊಂದ ಲಿಕ್ಕೆ ಅತ್ಯಂತ ಸಹಾಯವಾಗಿದೆ.

ಮುಖ್ಯವಾದ ಮಾತು ಏನಂದರೆ, ತಮ್ಮ ಇಡಿ ಆಯುಷ್ಯವು ತಮ್ಮ ಪ್ರಗತಿಯ ಸಲುವಾಗಿಯೇ ಇರುತ್ತದೆ. ಹಲವು ತರದ ವಸ್ತು ಗಳು, ಪ್ರಸಂಗಗಳು, ಪ್ರಾಣಿಗಳು ಇವು ನಮ್ಮ ಪ್ರಗತಿಗೆ ಕಾರಣೀಭೂ ತಗಳಾಗಿರುತ್ತವೆ. ಕಣ್ಣು ಹಾಗು ಕಿವಿಗಳನ್ನು ತೆರೆದಿಟ್ಟು ಆಯು ಷ್ಯದ ಪ್ರತಿಕ್ಷಣವನ್ನು ಜ್ಞಾನಾರ್ಜನ-ಪ್ರಗತಿಯಲ್ಲಿ ಕಳೆಯಬೇಕು. "ಕೆಲವಂಬಲ್ಲವರಿಂದ ಕಲ್ತು ಕೆಲವಂ ಸುಜ್ಞಾನದಿಂನೋಡುತ" ಇತ್ಯಾ ದಿ ವಿಚಾರಗಳ ಸೋಮೇಶ್ವರಕವಿಯ ಉಕ್ತಿಯಂತೆ ನಾವು ದಿನಾಲು ಕೇಳುವ ಸಂಭಾಷಣಗಳಿಂದಲೂ, ಕೇಳುವ ಸುದ್ದಿಗಳಿಂದಲೂ, ಓದುವ ಪುಸ್ತಕಗಳಿಂದಲೂ ಪ್ರಗತಿಮಾರ್ಗಕ್ಕೆ ಅವಶ್ಯವಿರುವ ಸಂಗತಿಗಳನ್ನು

ಗ್ರಹಿಸುತ್ತಿರಬೇಕು. ಹೀಗೆ ಮಾಡದೆ ವಾಚ್ಯಾವಾಚ್ಯ ಸಂಭಾಷಣಮಾಡುತ್ತ ನಿಷ್ಪ್ರಯೋಜಕಗಳಾದ ಸುದ್ದಿಗಳ ಚರ್ವಿತ-ಚರ್ವಣ ಮಾಡುತ್ತ, ಬುದ್ಧಿಗೆ ಮಾಂದ್ಯತ್ವವನ್ನುಂಟುಮಾಡುವ ಪುಸ್ತಕಗಳನ್ನು ಓದುತ್ತ ನಮ್ಮ ಕಾಲವನ್ನು ಆಯುಷ್ಯವನ್ನು ಕಳೆಯತೊಡಗಿದರೆ ನಮಗೆ ಅದರಿಂದ ಸ್ವಲ್ಪವೂ ಪ್ರಯೋಜನವಾಗಲಿಕ್ಕಿಲ್ಲ.

ಗತ ಆಯುಷ್ಯವನ್ನು ಅಶಿಕ್ಷಿತತನದಲ್ಲಿ ಕಳೆದು ಈಗ ಪ್ರೌಢದೆಸೆಯಲ್ಲಿ ಶಿಕ್ಷಣಹೊಂದುವ ಪ್ರಸಂಗ ಬಂದದರಿಂದಲೂ, ದುಷ್ಟವ್ಯವಹಾರಗಳನ್ನು ಬಿಡುವ ಮನಸ್ಸಾಗಿದ್ದರೂ ಅವನ್ನು ಬಿಡುವದಾದೀತೋ ಇಲ್ಲವೋ ಎಂಬ ಸಂಶಯದಿಂದಲೂ ಪೀಡಿತರಾಗಿ ಎಷ್ಟೋ ಜನರು ತಮ್ಮ ಮುಂದಣ ಆಯುಷ್ಯದ ಸಾಫಲ್ಯವು ಹ್ಯಾಗಾದೀತೆಂದು ಚಿಂತಿಸುತ್ತಾರೆ. ಇಂಥವರು ಇಷ್ಟಫಲವನ್ನು ಬೇಗನೆ ನಿಸ್ಸಂಶಯವಾಗಿ ಹೊಂದುವರು. ಯಾಕಂದರೆ—ಪಶ್ಚಾತ್ತಾಪದಿಂದ ಮನುಷ್ಯನಲ್ಲಿ ಒಂದು ತರದ ತೀಕ್ಷ್ಣವಾದ ಕರ್ತವ್ಯಜಾಗ್ರುತಿಯು ಉಂಟಾಗಿ ಅದು ಹಿಡಿದ ಕೆಲಸದಲ್ಲಿ ತಪ್ಪದೆ ಯಶಃಪ್ರಾಪ್ತಿಗೊಳಿಸುವದು. ಆದರಲ್ಲಿ ಪ್ರೌಢವಯಸ್ಸಿನಲ್ಲಿ ಪಶ್ಚಾತ್ತಾಪಪಡುವ ಮನುಷ್ಯನಿಗೆ ಯೋಗ್ಯಮಾರ್ಗವು ಕೂಡಲೆ ಕಾಣಹತ್ತುವದು: ಅಕ್ಷರಶತ್ರುವಾದ ಪ್ರೌಢಪಶ್ಚಾತ್ತಾಪಿಯಿಂದ ಅಕ್ಷರಗಳದ್ವಾರಾ ಶಿಕ್ಷಣಹೊಂದುವದು ಅಸಾಧ್ಯವಾದರೂ, ಅವನು ಶಿಲ್ಪ, ನೇಕಾರಿಕೆ, ಬಡಿಗತನ ಮೊದಲಾದ ಇತರ ಕಲೆಗಳ ಶಿಕ್ಷಣವನ್ನು ಬಹು ಬೇಗ ಸಂಪಾದಿಸಿ ಪ್ರಗತಿಹೊಂದಬಹುದು. ಮದ್ಯಪಾನದಂಥ ದುಶ್ಚಟದಿಂದ ನಿವೃತ್ತರಾಗಬಯಸಿದ ಎಷ್ಟೋ ಪ್ರೌಢಪಶ್ಚಾತ್ತಾಪಿಗಳು ಸ್ವಲ್ಪ ದಿವಸಗಳಲ್ಲಿಯೇ ಮದ್ಯಪೀಯದ್ವೇಷಿಕರೂ, ಸಮಂಜಸವರ್ತಿಗಳೂ ಆದ ಉದಾಹರಣೆಗಳನ್ನು ಬಹುಜನರು ನೋಡಿರಬಹುದು. ಆದರೆ ಪಶ್ಚಾತ್ತಾಪವು ಮಾತ್ರ ನಿಜವಾಗಿ ಆಗಿರಬೇಕು. ಅಂದರೆ ಅವನಿಗೆ ಸಮಯಸಾಫಲ್ಯಮಾಡಿಕೊಳ್ಳುವ ಯೋಗವು ದೊರಕುವದು.

ಪ್ರಗತಿಯ ಮುಖ್ಯ ರಹಸ್ಯವು ಸಮಯಸಾಫಲ್ಯದಲ್ಲಿಯೇ

ಅಡಕವಾಗಿರುವದು. ವ್ಯರ್ಥವಾಗಿ ವೇಳೆಯನ್ನು ಕಳೆಯುವದರಿಂದ ನಮ್ಮ ಪುರುಷಾರ್ಥದನಾಶವೂ, ಸಾಮರ್ಥ್ಯದನಾಶವೂ ಆಗಿನಾವು ಪ್ರಗತಿ ಹೀನರಾಗಬೇಕಾಗುವದು. ವ್ಯರ್ಥ ವೇಳೆಕಳೆಯುವದರಿಂದ, ಉಡಾಳ ಹಾಗು ದುರ್ವ್ಯಸನಿ ಮನುಷ್ಯರ ಸಂಗಮಾಡುವದರಿಂದ ಹೆಚ್ಚು ಅನರ್ಥವಾಗುವದು, ಅಥವಾ ಪ್ರಗತಿಮಾರ್ಗದ ಪ್ರಧಾನಸಾಧನ ವನ್ನು ಕಳಕೊಂಡಂತಾಗುವದು.. ಯಾರು ಸಮಯವನ್ನು ಸಾಫಲ್ಯ ಮಾಡಿಕೊಳ್ಳುವರೋ, ಅವರ ಜೀವಿತವು ಸಫಲವೇ ಸರಿ. ಯಾರು ಜೀವಿತವನ್ನು ಸಫಲಮಾಡಿಕೊಳ್ಳುವರೋ, ಅವರೇ ಮೋಕ್ಷಕ್ಕೆ ಅರ್ಹರಾಗುವರು.

---

### ೭ನೆಯ ಖಂಡ—ಅನನ್ಯಗತಿಕತ್ವವೂ, ಸಂಕಲ್ಪಶಕ್ತಿಯೂ

ಮಾಘವದ್ಯನವಮಿಯ ದಿವಸ ಸಿಂಹಗಡವನ್ನು ಹಸ್ತಗತಮಾಡಿ ಕೊಳ್ಳುವೆನೆಂದು ಶಿವಾಜಿಯ ಬಳಿಯಲ್ಲಿ ಪ್ರತಿಜ್ಞೆಮಾಡಿ ಹೋದ ತಾನಾಜಿಮಾಲಸುರೆ ಎಂಬ ಸರದಾರನು ಸಿಂಹಗಡದ ಕಿಲ್ಲೇದಾರನಾದ ಉದಯಭಾನುವಿನಿಂದ ಮರಣಹೊಂದಿದ ಬಳಿಕ ಗಾಬರಿಗೊಂಡು ಓಡಿಹೋಗಲುದ್ಯುಕ್ತರಾದ ಅವನ ದಂಡಿನ ಮಾವಳೆ ಜನರು ಗಡ ದಿಂದ ಇಳಿದು ಹೋಗಲಿಕ್ಕೆ ಒಂದೇ ಒಂದಾಗಿದ್ದ ಸಾಧನವಾದ ಹಗ್ಗವನ್ನು-ಆಶ್ರಯರಜ್ಜುವನ್ನು ತಾನಾಜಿಯ ತಮ್ಮನಾದ ವೀರಶಿ ರೋಮಣಿಸೂರ್ಯಾಜಿಯು ಈ ಮೊದಲೆ ಕೊಯ್ದು ಚೆಲ್ಲಿರುವನೆಂ ಬದನ್ನು ಕೇಳಿ, ಇನ್ನು ಓಡಿಹೋಗಿ ಕಂದಕದಲ್ಲಿ ಬಿದ್ದು ಹೇಡಿಗ ಳಂತೆ ಪ್ರಾಣಕಳಕೊಳ್ಳುವದಕ್ಕಿಂತ ಜೀವವಿರುವವರೆಗೆ ಶಕ್ತಿಮೀರಿ ಶತ್ರುಗಳೊಡನೆ ಕಾದಿ ಧಾರಾತೀರ್ಥದಲ್ಲಿ ಬಿದ್ದು ವೀರಸ್ವರ್ಗವನ್ನು ಹೊಂದುವದು ಶ್ರೇಯಸ್ಕರವೆಂದು ತಿಳಿದು ಅವರು ತಾನಾಜಿಯ ಮರ ಣದಿಂದ ಅತ್ಯಂತವಾದ ದುಃಖ-ಸಂತಾಪಗಳಿಂದ ಪೀಡಿತರಾಗಿ ಪ್ರಸಂ ಗದಲ್ಲಿ ತಾವು ಓಡಿಹೋಗುವ ಪ್ರಯತ್ನಮಾಡಿದ್ದಕ್ಕೆ ಬಹಳವಾಗಿ ನಾಚಿ ಯುದ್ಧಮಾಡಿದ್ದು ಅಪೂರ್ವವಾಯಿತು. ಕಡೆಗೆ ಕಿಲ್ಲೆಯು

ಮರಾಟರ ಕೈಸೇರಿ ತಾನಾಜಿಯ ಪ್ರತಿಜ್ಞೆಯು ಈಡೇರಿತು! ಇದು ಯಾತರ ಫಲವೆಂದು ನಾವು ಭಾವಿಸಬೇಕು? ತಾನಾಜಿಯ ಪ್ರತಿಜ್ಞೆಯ ಫಲವೋ, ಶಿವಾಜಿಯ ಪುಣ್ಯವೋ, ಸೂರ್ಯಾಜಿಯ ಸಮಯಾನುವರ್ತನದ ಫಲವೋ, ಅಥವಾ ಮಾವಳರ ಶೌರ್ಯದ ಫಲವೋ? ಸಿಂಹಗಡವು ಕೈಸೇರುವದಕ್ಕಾಗಿ ಇವೆಲ್ಲ ಸಾಧನಗಳ ಸಹಾಯವಾಗಿದ್ದರೂ ಆ ಎಲ್ಲ ಸಾಧನಗಳನ್ನು ಏಕಸಮಯಾವಚ್ಛೇದದಿಂದ ಉಪಯೋಗಕ್ಕೆ ತಂದ ಮುಖ್ಯ ಸಾಧನವು ಆಶ್ರಯರಜ್ಜುಛೇದನವಾಗಿದೆ. ಸೂರ್ಯಾಜಿಯು ಗಡದಿಂದ ಇಳಿದು ಹೋಗುವ ಹಗ್ಗವೊಂದನ್ನು ಕೊಯ್ಯದಿದ್ದರೆ, ದುರ್ಗವು ಕೈಸೇರುವದೊತ್ತಟ್ಟಿಗೇ ಇರಲಿ, ಶಿವಾಜಿಯ ವಿಷಯಕ್ಕೆ ಈಗ ಉಪಲಬ್ಧವಾಗಿದ್ದ ಇತಿಹಾಸವು ಕೂಡ ಬೇರೆ ರೀತಿಯಾಗಿಯೇ ನಮಗೆ ದೊರೆಯಬಹುದಾಗಿತ್ತು. ಆಶ್ರಯರಜ್ಜುಛೇದನದಿಂದ ಪ್ರಗತಿಮಾರ್ಗದಲ್ಲಿ ಎಷ್ಟು ಬೇಗ ಕ್ರಾಂತಿಯಾಗುವದೆಂಬುದು ಮೇಲಿನ ಉದಾಹರಣೆಯಿಂದ ಬಹು ಸ್ಪಷ್ಟವಾಗಿ ತಿಳಿಯಬರುವಂತಿದೆ.

ಪರಾಜಯಕ್ಕೆ ಆಸ್ಪದವೇ ಉಳಿಯಬಾರದೆಂದು, ತನ್ನ ಸೈನ್ಯವೆಲ್ಲ ಇಂಗ್ಲಂಡದ ಧಡಕ್ಕೆ ಇಳಿದ ಕೂಡಲೆ ಜುಲಿಸಸೀಝರನೆಂಬ ಪ್ರಸಿದ್ಧ ಸೇನಾನಾಯಕನು ತನ್ನ ಎಲ್ಲ ಹಡಗಗಳನ್ನು ಶಿಪಾಯಿಗಳ ಸಮಕ್ಷ ಒಮ್ಮೆಲೆ ಸುಟ್ಟುಬಿಟ್ಟನು. ಇದರಂತೆ ಸದ್ಯದ ಮಹಾಯುದ್ಧದಲ್ಲಿ ಜರ್ಮನ್ನರೂ, ದೋಸ್ತರಾಷ್ಟ್ರದವರೂ ತಮ್ಮ ತಮ್ಮ ಸೈನ್ಯವು ನಿಕರದಿಂದ ಕಾದುವದಕ್ಕಾಗಿ, ಹೊಳೆ-ಹಳ್ಳಗಳನ್ನು ದಾಟಿದನಂತರ ತಾವು ಕಟ್ಟಿದ ಪೂಲುಗಳನ್ನು ತಾವೇ ನಾಶಮಾಡಿ ಮುಂದಕ್ಕೆ ಸಾಗುತ್ತಿರುವರು. ಹೀಗೆ ಮಾಡುವದು ಸಾಮಾನ್ಯರ ದೃಷ್ಟಿಯಿಂದ ಹಾಸ್ಯಾಸ್ಪದವಾಗಿದ್ದರೂ, ಆದರಲ್ಲಿ ಬಹಳ ಮಹತ್ವವಿರುವದೆಂದು ಪ್ರಗತಿಪರ ಮನುಷ್ಯನು ಭಾವಿಸುವನು. ನಿರ್ವಾಣದ ಪ್ರಸಂಗದಲ್ಲಿ ಕೂಡ ಸ್ವಲ್ಪಾದರೂ ಆಶ್ರಯವಿರುವವರೆಗೆ ಹಿಂದಕ್ಕೆ ಸರಿಯುವದು ಮನುಷ್ಯನ ಸ್ವಾಭಾವಿಕ ಪ್ರವರ್ತಿಯಾಗಿದೆ. ಆಶ್ರಯ

ರಜ್ಜುವಿನಭೇದನವಾದ ಹೊರತು ಜೀವದ ಮೇಲೆ ಉದಾರನಾಗಿ ಕಾದದೆ, ಮೋಹಪರವಶನಾಗಿ ಹಿಂದೆಗೆಯುಹತ್ತುತ್ತಾನೆ. ಖರೇ ಶೌರ್ಯವೂ, ನಿಜವಾದ ಪ್ರಯತ್ನವೂ, ಯೋಗ್ಯ ಸಾಹಸವೂ ಆಶ್ರಯ ರಜ್ಜುವಿನಭೇದನವಾದ ಹೊರತು ಪ್ರಕಾಶಿತವಾಗುವದಿಲ್ಲ. ಆಶ್ರಯ ರಜ್ಜುವಿನ ಮಹತ್ವವು ತಿಳಿಯದ್ದರಿಂದಲೇ ಸದಾಶಿವರಾವ ಪೇಶವೆಯು ಪಾನಿಪತದ ಕಡೆಯ ಕಾಳಗದಲ್ಲಿ ಸೋತು ಮರಾಟರ ನಾಶಕ್ಕೆ ಕಾರಣನಾದನು.

ಒಂದು ಮಹತ್ಕಾರ್ಯವನ್ನು ಆರಂಭಿಸಿದ ಬಳಿಕ ಅದರಲ್ಲಿ ಯಶಃಪ್ರಾಪ್ತಿಯಾಗದೆ, ಮೇಲಿಂದ ಮೇಲೆ ಸಂಕಟಗಳುದ್ಭವಿಸಹತ್ತಿದರೆ ಅವನ್ನು ನೀಗಿಕೊಂಡು ಯೋಗ್ಯರೀತಿಯಿಂದ ಪ್ರಗತಿಹೊಂದುವ ಮಾರ್ಗವು ನಮ್ಮಲ್ಲಿಯ ಬಹುಜನರಿಗೆ ಸಿಗುವದಿಲ್ಲ. ಕಠಿಣ ಪ್ರಸಂಗದೊಳಗಿಂದ ಸಹಜವಾಗಿ ಪಾರಾಗಲಿಕ್ಕೆ ಎಲ್ಲಿಯವರೆಗೆನಮಗೆ ಸಾಧ್ಯವಿರುತ್ತದೋ ಅಲ್ಲಿಯವರೆಗೆ ನಾವು ಅತಿಸಾಹಸದ ಪ್ರಯತ್ನ ಮಾಡಲಿಕ್ಕೆ ಸಹಸಾ ಮುಂದುವರಿಯುವದಿಲ್ಲ. ಇದಕ್ಕೆ ಒಂದು ಸಣ್ಣ ಉದಾಹರಣೆಯನ್ನು ಕೊಡುವಾ. ಬೆಕ್ಕನ್ನು ಪ್ರತಿಬಂಧಿಸಬೇಕೆಂದು ನಾವು ಪ್ರಯತ್ನಪಡಹತ್ತಿದರೆ, ಓಡಿಹೋಗಲಿಕ್ಕೆ ಬಾಗಿಲು ಕಿಟಕಿ, ಬೆಳಕಿಂಡಿಗಳು ಎಲ್ಲಿಯವರಗೆ ತೆರವಿರುವವೋ ಅಲ್ಲಿಯವರೆಗೆ ಆ ಬೆಕ್ಕು ನಮಗೆ ವಿರೋಧಮಾಡದೆ ಸಿಕ್ಕಮಾರ್ಗದಿಂದ ಬೇಗನೆ ಓಡಿಹೋಗುವದು. ಆದರೆ ಯಾವಾಗ ಓಡಿಹೋಗಲಿಕ್ಕೆ ಮಾರ್ಗವು ಸಿಗುವದಿಲ್ಲವೋ ಆವಾಗ ಆ ಕ್ಷುಲ್ಲಕ ಬೆಕ್ಕು ಕೂಡ ಹುಲಿಯಂತೆ ಉಗ್ರಸ್ವರೂಪತಾಳಿ ಗಟ್ಟಿಗಟ್ಟಿಯಾಗಿ ಒದರುತ್ತ ತನ್ನ ನಖಪಂಜರಗಳಿಂದ ಪ್ರತಿಬಂಧಮಾಡುವ ನಮ್ಮನ್ನು ಹೊಡೆಯು ಬಂದು ಪಾರಾಗಿ ಹೋಗುವದು. ಆಶ್ರಯರಜ್ಜುಭೇದನದಿಂದ ಜೀವದ ಹಂಗು ಇಲ್ಲದ ಕಾರ್ಯಸಾಧಿಸುವದಕ್ಕೂ, ಇಷ್ಟಮನೋರಥಕ್ಕಾಗಿ ಹೃದಯ ಸರ್ವಸ್ವವನ್ನು ಅರ್ಪಿಸುವದಕ್ಕೂ ಸಾಧನವಾಗುವದು.

ಎಷ್ಟೋ ಜನರ ಪ್ರಗತಿಯು ಅವನತಿಗೆ ಕಾರಣವೇನಂದರೆ, ಅವರಲ್ಲಿ ಹಿಡಿದ ಕಾರ್ಯದಲ್ಲಿ ತಮಗೆ ಯಶಃಪ್ರಾಪ್ತಿಯು ಆಗಿಯೇ ತೀರುವದೆಂಬ ದೃಢನಿಶ್ಚಯವಿಲ್ಲದಿರುವದು. ನಾವು ಎಂಥ ಪ್ರಕಾರದ ಹಾಗು ಎಷ್ಟು ಪ್ರಗತಿಯನ್ನು ಹೊಂದಬೇಕೆಂದು ಬಯಸುವೆವೋ ಅಂಥ ಪ್ರಕಾರದ ಹಾಗು ಅಷ್ಟತರದ ಪ್ರಯತ್ನಗಳನ್ನು ಮಾಡಲಿಕ್ಕೆ ಮಾತ್ರ ನಾವು ಹತ್ತುವದಿಲ್ಲ. ಶಿಕ್ಷಣಪ್ರೀತ್ಯರ್ಥವಾಗಿ ಸದಾಚಾರದಿಂದ ನಡೆದು ತಪಗಟ್ಟಲೆ ಕಷ್ಟಪಡಲು ಮನಸ್ಸು ಮಾಡದಾಗುವೆವು. ಕ್ಷಣಿಕ ಹಾಗು ಕ್ಷುಲ್ಲಕವಾದ ಸುಖವನ್ನು ತ್ಯಜಿಸಲಿಕ್ಕೂ, ಶ್ರೇಷ್ಠವಾದ ಪ್ರಗತಿಯ ಸಲುವಾಗಿ ಖುಷಿಮೋಜುಗಳನ್ನು ಕಡಿಮೆ ಮಾಡಲಿಕ್ಕೂ ಒಪ್ಪದಾಗುವೆವು.

ಕಿರುಕಳ ವೇಳೆಯನ್ನು ಆತ್ಮಸುಧಾರಣೆಗಾಗಿ ಉಪಯೋಗಿಸುವದಕ್ಕೂ, ಸಾಮರ್ಥ್ಯವನ್ನು ಆರೋಗ್ಯಾದಿ ಸಾಧನಗಳಿಂದ ಬೆಳೆಸಿ ಸುಖಪಡಲಿಕ್ಕೂ ನಮಗೆ ಇಚ್ಛೆಯುಂಟಾಗುವದಿಲ್ಲ. ಯಾರು ಸಂಕಲ್ಪಶಕ್ತಿಯುಳ್ಳವರಿಲ್ಲವೋ, ದೃಢಮನಸ್ಕರಿಲ್ಲವೋ, ಅಪೂರ್ವತೆಯ ಗುಣಗಳುಳ್ಳವರಲ್ಲವೋ, ಯಾರು ಶ್ರಮಸಹಿಸಲಾರರೋ, ಸ್ವಾವಲಂಬಿಗಳಲ್ಲವೋ, ಸಮಯಾನುವರ್ತಿಗಳಲ್ಲವೋ, ಪ್ರಯತ್ನವಾದಿಗಳಲ್ಲವೋ ಅವರು ಪ್ರಗತಿಹೊಂದಬಯಸುವದು ನಿರರ್ಥಕವು. ‘ ಉದ್ಯೋಗಿನಂ ಪುರುಷಸಿಂಹ ಮುಪೈತಿಲಕ್ಷ್ಮೀಃ ದೈವೇನದೇವಮಿತಿಕಾಪುರುಷಾವದಂತಿ ॥ ದೈವಂನಿಹತ್ಯಕುರು ಪೌರುಷಮಾತ್ಮಶಕ್ತ್ಯಾ । ಯತ್ನೇಕೃತೇ ಯದಿನಸಿದ್ಧ್ಯತಿ ಕೋತ್ರದೋಷಃ ॥” ಎಂಬ ಕವಿಯ ಉಕ್ತಿಯಂತೆ ಕೇವಲ ದೈವದ ಮೇಲೆ ಹವಾಲಕೊಟ್ಟು ಕೂಡ್ರುವ ನಿಂದ್ಯಪುರುಷರಾಗದೆ, ಪ್ರಯತ್ನಪೂರ್ವಕ ಕೆಲಸಮಾಡಿ ಅಖಂಡ ಲಕ್ಷ್ಮಿಯನ್ನೂ, ಆರೋಗ್ಯವನ್ನೂ ಹೊಂದಿ ಪ್ರಗತಿಹೊಂದಬೇಕು.

ಹೊರೆಸ ಮೆನಾರ್ಡನೆಂಬ ಸುಪ್ರಸಿದ್ಧ ಅಮೇರಿಕನ್ ಗೃಹಸ್ಥನು ಕಾಲೇಜದಲ್ಲಿ ಕಲಿಯುತ್ತಿದ್ದಾಗ, ತನ್ನ ವಸತಿಯ ಕೋಣೆಯ ಬಾಗಿಲ ಮೇಲೆ “V” ಎಂಬ ಅಕ್ಷರವನ್ನು ಕೆಂಪುಬಣ್ಣದಿಂದ ಬರೆದ

ಸ್ಪಷ್ಟವಾಗಿ ಕಾಣುವಂತೆ ಮಾಡಿದ್ದನು. ಸಂಗಡಿಗರಾದ ವಿದ್ಯಾರ್ಥಿಗಳಲ್ಲೊಬ್ಬರಿಗೂ ಮೆನಾರ್ಡನು ಬರೆದಿದ್ದ "V" ಯ ಅರ್ಥವು ತಿಳಿಯಲಿಲ್ಲ. ಆದ್ದರಿಂದ ಅವರು ಮೆನಾರ್ಡನನ್ನು ವಿಕ್ಷಿಪ್ತನೆಂದು ಭಾವಿಸಿ, ಅವನಿಗೆ "V" ಯನ್ನೇ ಸಂಬೋಧನವಾಗಿ ಉಪಯೋಗಿಸ ಹತ್ತಿದರು. ಕಾಲೇಜ ಪರೀಕ್ಷೆಯಾಗಿ ಯಾವಾಗ ಅವನು "ವ್ಹಲಿಡಿಕ್ಟೋರಿಅನ" (ಫೇಲೋ) ನಾಗಿ ಆರಿಸಲ್ಪಟ್ಟನೋ, ಆವಾಗ ಅವನು ಸಂಗಡಿಗರಾದ ವಿದ್ಯಾರ್ಥಿಗಳನ್ನು ಕುರಿತು—"ಮಿತ್ರರೇ, ನಾನು ಕೋಣೆಯ ಬಾಗಿಲ ಮೇಲೆ ಬರೆದಿಟ್ಟಿದ್ದ "V" ಯ ಅರ್ಥವು ಈಗ ನಿಮಗೆ ತಿಳಿದಿರಬಹುದು. ಕಾಲೇಜದಲ್ಲಿ ಸೇರಿದಾಗಿನಿಂದ "ವ್ಹಲಿಡಿಕ್ಟೋರಿಅನ" ನಾಗಬೇಕೆಂದು ನನ್ನ ಇಚ್ಛೆಯಿತ್ತು" ಎಂದು ಹೇಳಿದನು. ಪ್ರಬಲವಾದ ಇಚ್ಛಾಶಕ್ತಿಯು, ಹಾಗು ಸಂಕಲ್ಪಬಲದ ಸಾಮರ್ಥ್ಯದಿಂದ ಯಾವದು ತಾನೆ ಅಸಾಧ್ಯವು?

ಹೊರೆಸ ಮನಾರ್ಡ ಇವರ ಉದಾಹರಣೆಯಿಂದ ಪ್ರಗತಿಗಾಮಿಗೆ ಬಹಳ ಸಂಗತಿಗಳ ಬೋಧವಾಗಬಹುದಾಗಿದೆ. ತನ್ನ ಸಂಗಡಿಗರಾದ ವಿದ್ಯಾರ್ಥಿಗಳಲ್ಲಿ, ಎಷ್ಟೋ ಜನರು ಬುದ್ಧಿಯಿಂದಲೂ, ಪಾಠಶಕ್ತಿಯಿಂದಲೂ ತನ್ನನ್ನು ತರಮೆಟ್ಟಿ ಹಾರುವರಿರುತ್ತಿರಲಿಕ್ಕೆ, ತನ್ನಂಥ ಸಾಧಾರಣ ವಿದ್ಯಾರ್ಥಿಗೆ "ವ್ಹಲಿಡಿಕ್ಟೋರಿಅನ" ಪದವಿಯು ಸಿಗುವದು ಅಸಾಧ್ಯವೆಂದು ಅವನು ತಿಳಿದಿದ್ದರೆ, "ವ್ಹಲಿಡಿಕ್ಟೋರಿಅನ" ಕ್ಕಾಗಿ ಪ್ರಯತ್ನಿಸುವ ಪೂರ್ವದಲ್ಲಿಯೇ ಆದರಲ್ಲಿ ಪರಾಜಯವು ಖಾತ್ರಿಯಿಂದಾಗುವದೆಂದು ಭಾವಿಸಿದಂತಾಗುತ್ತಿತ್ತು. ಈ ತರದ ಹೇಡಿಭಾವನೆಗಳೇ ಸಾಮರ್ಥ್ಯವಿಹೀನತೆಯ ಹಾಗು ದೃಢನಿಶ್ಚಯದ ಅಭಾವದ ದ್ಯೋತಕಗಳಾಗಿರುವವು. ಆದರೆ ಮೆನಾರ್ಡನು ಈ ಭಾವನೆಯುಳ್ಳವನಾಗಲಿಲ್ಲ: ಅವನು ಮೊದಲಿನಿಂದಲೇ ತನಗೆ ಯಶಃಪ್ರಾಪ್ತಿಯಾಗುವದೆಂದು ಭಾವಿಸಿಕೊಂಡನು. ಹಾಗು ಆ ಭಾವನೆಯನ್ನು ಕಾರ್ಯರೂಪವಾಗಿ ಪರಿಣಮಿಸುವದಕ್ಕೆ ಅವನು ಮನಮುಟ್ಟಿ ದೀರ್ಘಪ್ರಯತ್ನ ಮಾಡಹತ್ತಿದನು. ಯಾವಾಗಲೂ ತನ್ನ

ಭಾವನೆಯು ಜಾಗ್ರತವಾಗಿದ್ದು ಪ್ರಯತ್ನಮಾಡಲಿಕ್ಕೆ ಉತ್ಸಾಹವು ಬೆಳೆಯಬೇಕೆಂದು ಅವನು "ವ್ಹಲಿಡಿಕ್ಟೋರಿಅನ" ದ ಮೊದಲಿನ ಅಕ್ಷರವಾದ "ವ್ಹಿ" "V" ಯು ಸದಾ ಕಣ್ಣಿಗೆ ಗೋಚರವಾಗುವದಕ್ಕಾಗಿ, ಬಾಗಿಲ ಮೇಲೆ ಕೆಂಪುಬಣ್ಣದಿಂದ ಒಡೆದುಕಾಣುವಂತೆ ಬರೆದಿಟ್ಟು ಕೊಂಡಿದ್ದನು

ಇನ್ನು "V" ಯನ್ನು ಬರೆದಿಡುವದರಿಂದ ಮೆನಾರ್ಡನಿಗೆ ಮತ್ತೊಂದು ಪ್ರಕಾರದ ಅತರ್ಕ್ಯ ಸಹಾಯವಾಯಿತೆಂದು ನಮ್ಮ ಭಾವನೆಯಾಗಿದೆ. ಅದಾವದೆಂದರೆ, ಮೆನಾರ್ಡನು "V" ಯನ್ನು ಒಡೆದು ಕಾಣುವಂತೆ ಬರೆದು, ತಾನು ಹೊಂದಬೇಕಾಗಿದ್ದ ಪ್ರಗತಿಯಿಂದ ಪರಾವೃತ್ತನಾಗಲಿಕ್ಕೆ ಬರದಂತೆ ಬಂಧನಮಾಡಿಕೊಂಡನು, ಅಥವಾ ಮನುಷ್ಯನ ಸ್ವಭಾವಧರ್ಮದಂತೆ ವಿಶೇಷ ಸಂಕಟಗಳು ಬಂದಾಗ ಹಿಡಿದ ಕಾರ್ಯದಿಂದ ಹಿಂತಿರುಗಲು ಆಸ್ಪದಉಳಿಯಬಾರದೆಂದು "V" ಯನ್ನುಬರೆದಿಟ್ಟುಆಶ್ರಯರಜ್ಜುವನ್ನು ಛೇದನಮಾಡಿಕೊಂಡನು."V" ಯನ್ನು ಎಲ್ಲರಿಗೂ ಒಡೆದುಕಾಣಿಸುವಂತೆ ಬರೆದಿಡದೆ, ಬರೇ ಮನಸ್ಸಿನಲ್ಲಿ "ವ್ಹಲಿಡಿಕ್ಟೋರಿಅನ" ನಾಗಬೇಕೆಂದು ಬಯಸಿ, ಪ್ರಯತ್ನಮಾಡ ಹತ್ತಿದರೆ ಅವನಿಗೆ ಯಶಃಪ್ರಾಪ್ತಿಯಾಗುವದು.ಸಂಶಯಾಸ್ಪದವಾಗುತ್ತಿತ್ತು.ಒಂದುವೇಳೆ ಅವನು ಯಶವನ್ನು ಹೊಂದದಿದ್ದರೆ, "V"ಯನ್ನು ಬರೆದಿಟ್ಟಾಗ ಆಗುವ ಮನಸ್ತಾಪಕ್ಕಿಂತ, ಬರೆದಿಡದೆ ಹಾಗೇ ಪ್ರಯತ್ನ ಮಾಡಿದಾಗಿನ ಮನಸ್ತಾಪವು ಕಡಿಮೆಯತರದ್ದಾಗುತ್ತಿತ್ತು. ಆದ್ದರಿಂದ ಪ್ರಗತಿಹೊಂದಬಯಸುವವನು ಆ ಪಥದಿಂದ ಹಿಂದಿರುಗಲಿಕ್ಕೆ ಆಸ್ಪದವುಳಿಯದಂತೆ ಆಶ್ರಯರಜ್ಜುವನ್ನು ತನ್ನ ಕೈಯಿಂದ ತಾನೇ ಛೇದಿಸಿಕೊಳ್ಳಬೇಕು. ಅಂದರೆ ಅಧಃಪತನವಾಗದೆ, ತೀವ್ರವಾಗಿ ಹೆಚ್ಚು ಹೆಚ್ಚು ಶ್ರೇಯಸ್ಸನ್ನು ಪಡೆಯುತ್ತ ಹೋಗುವನು.

ಆಶ್ರಯ ರಜ್ಜುಛೇದನಕ್ಕೆ ಸತ್ಯಸಂಕಲ್ಪವೆಂದು ಸಾಧಾರಣವಾಗಿ ಹೇಳಬಹುದು. ನಮ್ಮ ಪೂರ್ವಜರು ಸಂಕಲ್ಪಕ್ಕೆ ಬಹಳವಾಗಿ ಮಹತ್ವಕೊಡುತ್ತಿದ್ದರು. ಸಣ ಸಣ ಸಂಗತಿಗಳನು

ಕೂಡ ಸಂಕಲ್ಪಮಾಡದೆ ಅವರು ಮಾಡಲುದ್ಯುಕ್ತರಾಗುತ್ತಿದ್ದಿಲ್ಲ. ಆ ಪರಿಪಾಠವು ಬ್ರಾಹ್ಮಣರಕ್ರಿಯಾಕರ್ಮಗಳಲ್ಲಿ ಈಗ್ಯೂ ಕಂಡುಬರು ವದು: ಆದರೆ ಸಂಕಲ್ಪಶಕ್ತಿಯು ಮಹತ್ವವನ್ನರಿಯದ ನಾವು, ಹಿರಿಯರ ಅನುಕರಣವನ್ನು ಶಬ್ದಮಾತ್ರದಲ್ಲಿ ಮಾಡಿ ಲೌಕಿಕರಹಾಸ್ಯಕ್ಕೆ ಕಾರಣರಾಗುತ್ತಿದ್ದೇವೆ. ಯಾವ ಕೆಲಸದ ಸಲುವಾಗಿಯಾದರೂ ದೇವ-ಬ್ರಾಹ್ಮಣರ, ಗುರುಹಿರಿಯರ, ಅಗ್ನಿ-ಸೂರ್ಯರ ಸಮಕ್ಷಮ ಸಂಕಲ್ಪಮಾಡಿ ಅಂದರೆ ನಾನು ಇಂಥ ಇಂಥ ಕೆಲಸವನ್ನು ಹೀಗೆಯೇ ಮಾಡುತ್ತೇನೆಂದು ಸಾಕ್ಷಿಯಿಟ್ಟು ಹೇಳಿ, ಕೆಲಸ ಪ್ರಾರಂಭಿಸಿ ಯಥಾಯೋಗ್ಯವಾಗಿ ಮುಗಿಸಬೇಕಾಗುತ್ತದೆ. ಸಂಕಲ್ಪವು ಸತ್ಯವಾಗುವಂತೆ ಯತ್ನಿಸದಿದ್ದರೆ ನಮಗೆ ಅಧೋಗತಿಯು ತಪ್ಪದೆ ಆಗುವದು. ಸಂಕಲ್ಪಮಾಡಿ ಕೆಲಸಪ್ರಾರಂಭಿಸುವದರಿಂದ ಆ ಕೆಲಸ ಮುಗಿಸದೆ ಹಿಂದಿರುಗಲು ಮಾರ್ಗವಿದ್ದ ಆಶ್ರಯವನ್ನು ಛೇದನಮಾಡಿ ಕೆಲಸ ಪ್ರಾರಂಭಿಸಿದಂತಾಗುವದು. ಕೆಲಸಮಾಡದೆ ಹಿಂತಿರುಗಲು ಮಾರ್ಗವೇಇಲ್ಲದಾಗಲು ಎಂಥ ಸಂಕಟಗಳು ಅಡ್ಡಬಂದರೂ ಅವಕ್ಕೆ ಅಂಜದೆ ಕೆಲಸವನ್ನು ಪೂರ್ಣಮಾಡುವದರಲ್ಲಿ ತತ್ಪರನಾಗುವನು. ಈ ಸಂಕಲ್ಪವನ್ನು ಪಾಲಿಸಲಿಕ್ಕೆ ಅಚಲವಾದ ಭಾವನೆಯಿರಬೇಕಾಗುವದು: "ಭಾವನಾಯದಿಭವೇತ್‌ಫಲದಾತ್ರಿ" ಇಲ್ಲವೆ "ಭಾವಿಕಸ್ಯತಪೋಬಲಂ" ಎಂಬಂತೆ ಭಾವನೆಯುಳ್ಳವರೇ, ಸಂಕಲ್ಪಶಕ್ತಿಯುಳ್ಳವರೇ ಆಶ್ರಯರಜ್ಜುಛೇದನಮಾಡಿಕೊಳ್ಳುವವರೇ ಲೋಕದಲ್ಲಿ ಏನಾದರೂ ಕೆಲಸ ಮಾಡಿ ಪ್ರಖ್ಯಾತರಾಗುವರು. ಪುಣ್ಯಶಾಲಿ ರಾಮಚಂದ್ರನು ಭಾವನಾಪೂರ್ವಕವಾಗಿ, ಸಂಕಲ್ಪಪೂರ್ವಕವಾಗಿ ತಂದೆಯಮಾತನ್ನು ಕೇಳಿದ್ದರಿಂದಲೇ ಅವನು ಲೋಕವಂದ್ಯನಾದನು. ಸತ್ಯಪ್ರತಿಜ್ಞ ಹರಿಶ್ಚಂದ್ರರಾಯನು ಸತ್ಯಸಂಕಲ್ಪ ಕಾಯ್ದುಕೊಂಡದ್ದರಿಂದಲೇ ಕೀರ್ತಿಶೇಷನಾಗಿರುವನು. ಶ್ರೀಯೆಳಭೂಪಾಲನೂ, ಧರ್ಮರಾಜನೂ ಲೋಕವಿಖ್ಯಾತರಾದದ್ದಾದರೂ ಸಂಕಲ್ಪಶಕ್ತಿಯಿಂದಲೇ.

ಸಂಕಲ್ಪಕ್ಕೆ ಈಗಿನ ಮನ್ವಂತರದಲ್ಲಿ ಕಾರ್ಯಕ್ರಮ(Programme)ಎಂದೆನ್ನುವರು. ಕಾರ್ಯನಿಷ್ಠಪ್ರತಿಯೊಬ್ಬನೂ ವಿಶೇಷವಾಗಿ ಆಂಗ್ಲೇಯರು ಕಾರ್ಯಕ್ರಮದ ಹೊರತು ಕೆಲಸಕ್ಕೆ ಪ್ರಾರಂಭಿಸುವದಿಲ್ಲ. ಕಾರ್ಯಕ್ರಮವು ತನ್ನ ಮನಸ್ಸಿನಂತೆ ಮೊದಲು ಗೊತ್ತುಮಾಡಲ್ಪಡುವದರಿಂದ, ಅದರಂತೆ ನಡೆಯುವದರಿಂದ ಸ್ವಾತಂತ್ರ್ಯಪ್ರೀತಿ, ದೃಢನಿಶ್ಚಯ, ಕಾರ್ಯದಕ್ಷತೆ, ಸಾಧನಗಳನ್ನು ಒದಗಿಸಿಕೊಳ್ಳುವಿಕೆ, ಸಮಯಸಾಫಲ್ಯಮಾಡುವಿಕೆ ಇನ್ನೂ ಅನೇಕ ಗುಣಗಳ ಪೋಷಣಮಾಡಿಕೊಂಡಂತಾಗುವದು. ಆದ್ದರಿಂದ ಪ್ರತಿಯೊಬ್ಬ ಮನುಷ್ಯನೂ ಮೊದಲು ತಾನು ಯಾವ ಹಾಗು ಎಷ್ಟು ಕೆಲಸವನ್ನು ಮಾಡಿ ಪ್ರಗತಿಯನ್ನು ಹೊಂದಬೇಕೆಂಬದನ್ನು ಗೊತ್ತುಮಾಡಿಕೊಂಡು ಇಡಿ ಆಯುಷ್ಯದ ಕಾರ್ಯಕ್ರಮವನ್ನು ತಯಾರುಮಾಡಿಕೊಳ್ಳಬೇಕು. ಹಾಗು ಆ ಕಾರ್ಯಕ್ರಮದಂತೆ ನಡೆಯುವದರಿಂದ ನಿಜವಾಗಿ ಪ್ರಗತಿಯಾಗುವದೆಂದು ದೃಢಭಾವನೆಯನ್ನು ಮಾಡಿಕೊಳ್ಳಬೇಕು. ಅಂದರೆ ಯಶಃಪ್ರಾಪ್ತಿಯ ಕಾರ್ಯದಲ್ಲಿ ಬರಬಹುದಾದ ವಿಘ್ನಗಳಿಗೆ ಅಸ್ಪದವುಳಿಯದೆ ಪ್ರಗತಿಯು ಭರಾಟೆಯಿಂದ ಆಗಹತ್ತುವದು.

"ದೇಹಂವಾಪಾತಯಾಮಿ ಕಾರ್ಯಂವಾಸಾಧಯಾಮಿ" ಎಂಬಂತೆ ಸಾಂಕಲ್ಪಿಕದೃಢನಿಶ್ಚಯ ಮಾಡಿಕೊಂಡು, ಪ್ರಗತಿಗಾಗಿ ಪ್ರಯತ್ನ ಮಾಡಬೇಕು. ಅಂದರೆ ತಾನಾಜಿಯಂತೆ ಕಾರ್ಯಸಾಧನದಲ್ಲಿ ದೇಹದ ಪಾತವಾದರೂ ಇಷ್ಟವು ಸಾಧಿಸದೆ ಇರುವದಿಲ್ಲ. ಶಿವಪ್ರಭುಗಳು ತಾನಾಜಿಯಂಥ ಸಾಂಕಲ್ಪಿಕ ದೃಢಮನಸ್ಸಿನ ಸಾಹಸಿಗನೊಬ್ಬನ ಹೊರತು ಬೇರೆ ಸರದಾರರಲ್ಲೊಬ್ಬನಿಂದಲೂ ಸಿಂಹಗಡವನ್ನು ತಕ್ಕೊಳ್ಳುವದಾಗುವದಿಲ್ಲವೆಂದು ಚೆನ್ನಾಗಿ ತಿಳಿದಿದ್ದರು ಅಂತೇ ಅವರು ಆ ಅತ್ಯಂತಕಠಿಣಕಾರ್ಯವನ್ನು ತಾನಾಜಿಗೆ ಒಪ್ಪಿಸಿದ್ದರು.

ಏನು ಮಾಡುತ್ತೇವೆ, ಹಾಗು ಮುಂದೆ ಏನನ್ನು ಮಾಡಬೇಕಾಗಿದೆ ಎಂಬದಾವದನ್ನೂ ಅರಿಯದ ನಾವು, ಸದಾ ಸಂಶಯಪಿಶಾಚಿಯಿಂದ ಗ್ರಸ್ತರಾಗಿ ಆಯುರ್ಗಲಿತರಾಗುವೆವು. ಕೆಲಸ ಆರಂಬಿಸುವ

ಮೊದಲೂ, ಕೆಲಸಮಾಡಹತ್ತಿದಾಗಲೂ ನಾವು ಆ ಬಗ್ಗೆ ವಿಚಾರಮಾಡುವದರಲ್ಲಿ ವೇಳೆಯನ್ನು ಮಿತಿಮೀರಿ ಕಳೆಯುವೆವು. ಅನುಕರಣಪ್ರಿಯರಾದ, ಅಪೂರ್ವಗುಣಗಳಿಲ್ಲದ ನಾವು ಮಂದಿಯ ಅನುಕರಣ ಮಾಡಬೇಕೆಂದು ಆಲೋಚಿಸುವಾಗ ವಿಚಾರದಲ್ಲಿ ಹೀಗೆ ಬಹಳ ವೇಳೆ ಹಾಳುಮಾಡಿಕೊಳ್ಳುವೆವು. ಇದರಿಂದ ಪರಿಣಾಮದಲ್ಲಿ ನಮ್ಮ ಆತ್ಮ ವಿಶ್ವಾಸದ, ಸ್ವಾತಂತ್ರ್ಯದ ಹ್ರಾಸವಾಗುವದು. ಪ್ರಸಂಗದಲ್ಲಿ ಸಹಾಯವಾದೀತೆಂಬ ಮರುಳು ವಿಶ್ವಾಸವು ಕೆಲಸದ್ದಲ್ಲ. ನಾವು ಪ್ರಗತಿ ಕಾರ್ಯಕ್ಕೆ ಮಹತ್ವ ಕೊಡದೆ, ಕ್ಷುಲ್ಲಕ ಜನರ ಮಾತನ್ನು ನಡಿಸುವಭರಕ್ಕೂ, ಅವರ ಪ್ರೇರಣೆಯಿಂದ ಹೊಲ್ಲದ ಕೆಲಸಮಾಡಲಿಕ್ಕೂ ಪ್ರವೃತ್ತರಾಗುತ್ತೇವೆ. ಇದರಿಂದ ಪ್ರಗತಿಯಾಗದೆ ಕಾರ್ಯಸಾಧನವಾಗದೆ ದುಷ್ಟ ಜನರ ಸಂಗತಿಯಿಂದ ಹೊಲ್ಲದ ಕೆಲಸಮಾಡಿದ್ದರಿಂದ ಲೋಕೋತ್ತರ ಅಪಕೀರ್ತಿಯು ಮಾತ್ರ ನಮ್ಮ ಉಡಿಯಲ್ಲಿ ಬೀಳುವದು. ಆದ್ದರಿಂದ ಪ್ರಗತಿಗಾಮಿಯು ಪುನಃ ಪುನಃ ವಿಚಾರಮಾಡದೆ, ದುಷ್ಟ ಜನರ ಮಾತು ಕೇಳದೆ, ಕೇವಲ ತನ್ನ ಸದಸದ್ವಿವೇಕಬುದ್ಧಿಗೆ-ಅಂತಃಕರಣಕ್ಕೆ ಸ್ಫೂರ್ತಿಯಾಗುವ ಮಾರ್ಗದಿಂದ ಪ್ರಗತಿಮಾರ್ಗವನ್ನು ಹಿಡಿಯಬೇಕು. ಹೀಗೆ ಮಾಡುವದರಿಂದ ಪ್ರಸಂಗದಲ್ಲಿ ಸಹಾಯವಾದೀತೆಂಬ ಸಂಗತಿಗಳ ಆಶ್ರಯಗಳ ಛೇದನವನ್ನು ಮಾಡಿಕೊಳ್ಳುವದರಿಂದ ಮುಂದೆ ಪ್ರಗತಿಗೆ ಯಾವ ಬಾಧಕಗಳೂ ಉಳಿಯಲಾರವು.

ಅನಿಶ್ಚಿತಧ್ಯೇಯದ ಹಾಗು ಅಂಜುಬುರುಕನಾದ ಮನುಷ್ಯನು ಕಂಡ ಕಂಡವರ ಮಾತಿನಂತೆ ನಡೆಯಹತ್ತುತ್ತಾನೆ ಪ್ರತಿಯೊಬ್ಬರ ಅನುಕೂಲ ಹಾಗು ಪ್ರತಿಕೂಲ ಅಭಿಪ್ರಾಯಗಳಿಂದ ಅವನ ಮನಸ್ಸು ಚಂಚಲವಾಗುವದು. ಧ್ಯೇಯವು ಗೊತ್ತಾಗದ್ದರಿಂದ, ಅಭಿಪ್ರಾಯ ಕೊಡುವ ಪ್ರತಿಯೊಬ್ಬನ ಮತಕ್ಕೆ ಅವನು ಸಮ್ಮತಿಪಡಬೇಕಾಗುತ್ತದೆ. ಒಂದು ಕಾರ್ಯವನ್ನು ಮಾಡಿಯೇ ತೀರಬೇಕೆಂದು ಎಷ್ಟು ನಿಶ್ಚಯಿಸಿದ್ದರೂ, ಅವನ ನಿಶ್ಚಯವನ್ನು ತಿರುಗಿಸಲಿಕ್ಕೆ ಒಬ್ಬ ಸಾ

ಮಾನ್ಯ ಹುಡುಗನೂ ಸಮರ್ಥನಾಗುವನು. ಇಂಥ ಮನುಷ್ಯನು ಇಂದು ಒಬ್ಬನಂತೆಯೂ ನಾಳೆ ಮತ್ತೊಬ್ಬನಂತೆಯೂ ನಡೆಯುಹತ್ತಿ ಮಂದಿಯ ಕೈಯೊಳಗಿನ ಆಟಿಗೆಯಾಗಿ ಕೂಡ್ರುವನು. ಈ ತರದ ಹುಚ್ಚು ಜನರು ಹೆಚ್ಚಾಗಿ ದುರಾಶೆ ಪ್ರೇರಿತರಾಗಿರುವದರಿಂದ ಇಂದು ಮಾಡತಕ್ಕ ಕೆಲಸವನ್ನು ಇನ್ನೊಮ್ಮೆ ವಿಚಾರಮಾಡಿ ನಾಳೆಮಾಡಿದರೆ ಅಷ್ಟರಲ್ಲಿ ದೇವರು ಯಾವರೂಪದಿಂದ ಸಹಾಯಮಾಡಿ ತಮ್ಮ ಕೆಲಸದಲ್ಲಿ ಹೆಚ್ಚು ಲಾಭವಾಗುವಂತೆ ಮಾಡುವನೋ ಎಂದು ತಿಳಿಯುವರು. "Do not put off till tomorrow what you can do to-day" ಎಂಬ ಆಂಗ್ಲ ನಾಣ್ಣುಡಿಯ ಗರ್ಭಿತಾರ್ಥವನ್ನು ವಿಚಾರಿಸಿದರೆ ಈ ಹೊತ್ತು ಆಗಬಹುದಾದ ಕೆಲಸವನ್ನು ಯಾವಕಾರಣದ ಸಲುವಾಗಿಯೂ ನಾಳೆಗೆ ಹಾಕಬಾರದು. ಹೇಳುವದೇನಂದರೆ, ಮನಸ್ಸು ಬಹು ಚಂಚಲವಾಗಿರುವದರಿಂದ ಕಾಲಾತಿಕ್ರಮಣದಿಂದ ಕೃತನಿಶ್ಚಯವು ಸಡಿಲಾಗುವ ಸಂಭವವಿರುತ್ತದೆ. ಹಾಗು ಇಂದಿನ ಕಾರ್ಯವು ನಾಳೆ ಆಗದಾಗುತ್ತದೆ, ಆದ್ದರಿಂದ "ವ್ಯವಸಾಯಾತ್ಮಿಕಾಬುದ್ಧಿರೇಕೇಹಕುರುನಂದನ । ಬಹುಶಾಖಾಹ್ಯನಂತಶ್ಚಬುದ್ಧಯೋಽವ್ಯವಸಾಯಿನಾಮ್" ಎಂಬಂತೆ ಪ್ರಗತಿಹೊಂದುವ ಬಲವಾನ್ ಮನುಷ್ಯನು ಹಿಡಿದಕೆಲಸಕ್ಕಾಗಿ ಸಂಪೂರ್ಣ ಶಕ್ತಿಯನ್ನು ಪಯೋಗಿಸುವದರಲ್ಲಿ ಸ್ವಲ್ಪವೂ ಹಿಂಜರಿಯುವದಿಲ್ಲ. ಇದರಿಂದ ಅವನಲ್ಲಿ ಕರ್ತೃತ್ವಶಕ್ತಿ ಬೆಳಯುವದಲ್ಲದೆ, ವಿಚಾರಶಕ್ತಿಯೂ ಬೆಳೆಯುವದು. ಆಚಾರ ವಿಚಾರಗಳ ಐಕ್ಯದಿಂದ ಮಾಡುವ ಕೆಲಸಗಳಲ್ಲಿ ಯಶವು ದೊರೆತೇದೊರೆಯುವದು. ಹೀಗೆ ಮಾಡದೆ ಒಬ್ಬನ ವಿಚಾರ ಇನ್ನೊಬ್ಬನ ಆಚಾರ ಇವುಗಳಿಂದ ಪ್ರಗತಿಯಾಗುವ ಬಗೆ ಹ್ಯಾಗೆ? ಮೇಲಿಂದ ಮೇಲೆ ವಿಚಾರಮಾಡುವವನ ಕಡೆಯಿಂದ ಯಾವ ಕೆಲಸವೂ ಆಗುವದಿಲ್ಲ.

## ೮ ನೆಯ ಖಂಡ—ಸಾಮರ್ಥ್ಯಸಂಚಯು.

ಯುದ್ಧದಲ್ಲಿ ಉಪಯೋಗಿಸಬೇಕಾದ ತೋಫುಗಳನ್ನು ಮೊದಲು ಪರೀಕ್ಷಿಸಿ ಆ ಮೇಲೆ ಉಪಯೋಗಿಸುವ ರೂಢಿಯುಂಟು. ಪರೀಕ್ಷೆಯು ಕಾಲಕ್ಕೆ ಅವುಗಳಲ್ಲಿ ಸಾಧಾರಣವಾಗಿ ತುಂಬುವ ಮದ್ದುಗುಂಡುಗಳಿಗಿಂತ ಹೆಚ್ಚು ಮದ್ದು-ಗುಂಡುಗಳನ್ನು ತುಂಬಿ ಹಾರಿಸಿ ನೋಡುವರು. ಹೆಚ್ಚು ಮದ್ದು-ಗುಂಡು ಉಪಯೋಗಿಸಿ ಹಾರಿಸಿ ನೋಡುವ ಕಾರಣವೇನಂದರೆ, ಯಾವನಾದರೊಬ್ಬ ಅರಿಯದ ಮನುಷ್ಯನು ಯುದ್ಧಪ್ರಸಂಗದಲ್ಲಿ ಹಾಗೆ ಹಾರಿಸಿದರೆ ಅಪಘಾತವಾಗಬಾರದು. ಪರೀಕ್ಷೆಯಲ್ಲಿ ಪಾಸಾಗದ ಸ್ವಾಭಾವಿಕ ಶಕ್ತಿಗಿಂತ ಹೆಚ್ಚು ಮದ್ದು-ಗುಂಡಿನ ಆಘಾತವನ್ನು ತಡೆಯದ ತೋಫುಗಳನ್ನು ಯುದ್ಧದಲ್ಲಿ ಉಪಯೋಗಿಸದ ಅವನ್ನು ನಾಶಗೊಳಿಸುವರು ಇಲ್ಲವೆ ಅವುಗಳ ಸ್ವಾಭಾವಿಕ ಶಕ್ತಿಯನ್ನಾದರೂ ಕಡಿಮೆಮಾಡುವರು.

ಉಗೆಬಂಡಿಯು ಇಲ್ಲವೆ ಉಗೆಹಡಗಗಳ ಇಲ್ಲವೆ ಎಂಜಿನ್, ಪ್ರೆಸ್ಸು ಮೊದಲಾದವುಗಳ ಇಂಜಿನಗಳ ಶಕ್ತಿಯನ್ನಾದರೂ ಅವುಗಳನ್ನು ಉಪಯೋಗಿಸುವ ಶಕ್ತಿಗಿಂತ ತುಸು ಹೆಚ್ಚು ಶಕ್ತಿಯನ್ನು ಬೇಕಂತ ಇಟ್ಟಿರುತ್ತಾರೆ. ಸಾಧಾರಣವಾಗಿ ೨೦ಹಾರ್ಸ-ಕುದುರೆಯ ಶಕ್ತಿಯ ಇಂಜಿನವು ನಮಗೆ ಬೇಕಾಗಿದ್ದರೆ, ನಿಪುಣಯಾಂತ್ರಿಕನು ತಿಳಿಸಿಯೇ ಆಗಲಿ, ತಿಳಿಸದೆಯೇ ಆಗಲಿ, ಬೇಕಂತ ೫ ಹಾರ್ಸ ಪಾವರ ಹೆಚ್ಚು ಶಕ್ತಿಯುಳ್ಳ ಅಂದರೆ ೨೫ ಹಾರ್ಸ ಪಾವರವುಳ್ಳ ಇಂಜಿನವನ್ನು ನಮಗೆ ಕೊಡುವನು: ಈ ಹೆಚ್ಚು ಶಕ್ತಿಯ ಉಪಯೋಗವನ್ನು ಮಾಡಿಕೊಳ್ಳದಿದ್ದರೂ ಚಿಂತೆಯಿಲ್ಲ. ಆದರೆ ಅದರಲ್ಲಿ ಆ ಶಕ್ತಿಯು ಇರಬೇಕಾದದ್ದು ಅತ್ಯವಶ್ಯವಾಗಿದೆ. ಇದರಂತೆ ಪ್ರಗತಿ ಹೊಂದುವ ಮನುಷ್ಯನಲ್ಲಿ ಅವನು ಮಾಡಬೇಕಾದ ಕೆಲಸದ ಜ್ಞಾನವು ಅವನು ಅದರಲ್ಲಿ ಹೊಂದಬೇಕಾದ ಯಶಸ್ಸಿಗಿಂತ ತುಸುಹೆಚ್ಚು ಇರಬೇಕಾಗುವದು. ಈ ಹೆಚ್ಚು ಶಕ್ತಿಯು ಸಾಮರ್ಥ್ಯಸಂಚಯವು ಪ್ರಸಂಗದಲ್ಲಿ ಅವನಿಗೆ ಒಳ್ಳೇ ಸಹಾಯಕಾರಿಯಾಗದೆ ಇರದು.

ಕಾಲವು ಒಂದೇಸವನೆಯಾಗಿರುವವರೆಗೆ ಬಹುಜನರು ಪ್ರಗತಿಪರಕೆಲಸಗಳಲ್ಲಿ ತೊಡಗಬಹುದು. ಆದರೆ ಸಾಮರ್ಥ್ಯಸಂಚಯವಿದ್ದ ಹೊರತು ಕಠಿಣಪ್ರಸಂಗಗಳಲ್ಲಿ ಅವರ ದೊಡ್ಡ ಕೆಲಸಗಳು ಸುರಳೀತವಾಗಿ ಸಾಗಲಾರವು. ಸಾಮರ್ಥ್ಯಸಂಚಯವಿಲ್ಲದವರು ಆಪತ್ತಿನ ಪ್ರಸಂಗಗಳಲ್ಲಿ ಹತಾಶರಾಗಿ ಹಿಡಿದಕಾರ್ಯಬಿಟ್ಟುಬಿಡುವರು. ಆದರೆ ಸಾಮರ್ಥ್ಯವಂತನು ಚಾತುರ್ಯದಿಂದ ನಡೆದು ಕಠಿಣಪ್ರಸಂಗಗಳಲ್ಲಿಯೂ ಪ್ರಗತಿಹೊಂದಲು ಯತ್ನಿಸುವನು.

ದೊಡ್ಡ ದೊಡ್ಡ ಕೆಲಸಮಾಡುವ ಯೋಗ್ಯತೆಯುಳ್ಳ ಎಷ್ಟೋ ಜನರು ಇಡಿ ಆಯುಷ್ಯವನ್ನು ಸಾಧಾರಣವಾದ ಕೆಲಸಮಾಡುವದರಲ್ಲಿಯೇ ಕಳೆಯುವರು. ಇದಕ್ಕೆ ಕಾರಣವೇನಂದರೆ, ತಮ್ಮಲ್ಲಿ ಹೆಚ್ಚು ಸಾಮರ್ಥ್ಯವಿದ್ದಬಗ್ಗೆ ಅವರಿಗೆ ಆತ್ಮವಿಶ್ವಾಸವಿರುವದಿಲ್ಲ. ಹಾಗು ನಿತ್ಯೋಪಯೋಗಕ್ಕೆ ಬೇಕಾಗುವ ಶಕ್ತಿಗಿಂತ ಹೆಚ್ಚು ಸಾಮರ್ಥ್ಯವನ್ನು ಸಂಗ್ರಹಿಸಲು ಅವರು ಎಂದೂ ಪ್ರಯತ್ನಮಾಡುವದಿಲ್ಲ. ಹೀಗೆ ಸಾಮರ್ಥ್ಯಸಂಚಯಿಸದವರೂ, ಇದ್ದ ಸಾಮರ್ಥ್ಯವನ್ನೆಲ್ಲ ಉಪಯೋಗಿಸುವವರೂ ಆದ ಅವರು ಆಕಸ್ಮಿಕವಾದ ಯಾವದೊಂದು ವಿಪತ್ತಿಗೆ (ಅವು ಎಷ್ಟು ಕ್ಷುಲ್ಲಕಗಳಾಗಿದ್ದರೂ) ಗುರಿಯಾದರೆ ಸಂಪೂರ್ಣನಾಶಹೊಂದುವರು. ಭಯಂಕರ ಬಿರುಗಾಳಿಯಿಂದ ಇಲ್ಲವ ಮಳೆಯಿಂದ ಸಣ್ಣ ಸಣ್ಣ ಗಿಡಗಳೂ, ಮುರುಕಳಿಗಬಂದಿದ್ದ ಮನೆಗಳೂ ಹ್ಯಾಗೆ ಒಮ್ಮೆಲೆ ಬೀಳಹತ್ತುವವೋ ಹಾಗೆ ದುರ್ಬಲರು ಸಂಕಟಗಳು ಒದಬರುವದರೊಳಗಾಗಿ ನಾಶಹೊಂದಹತ್ತುವರು. ಸಾಕಷ್ಟು ಧನಸಂಗ್ರಹವಿಲ್ಲದೆ ನಡಯಿಸಿದ ಉದ್ಯೋಗಗಳೂ, ಯೋಗ್ಯ ಅಭ್ಯಾಸಮಾಡದ ಪರೀಕ್ಷೆಗೆ ಹೋಗುತ್ತಿದ್ದ ವಿದ್ಯಾರ್ಥಿಗಳೂ ತಮ್ಮ ಪರಾಜಯದಿಂದ ಮೇಲಿನ ಸಂಗತಿಗೆ ಪುಷ್ಟಿಕೊಡುವರು. ಬ್ಯಾಂಕುಗಳು ದಿವಾಳಿತೆಗೆಯುಲಿಕ್ಕೆ ಇದೇ ಕಾರಣವಂದು ತಜ್ಞರ ಮತವದೆ. ಚುನ್ನೀಲಾಲಸರಯ್ಯಾ ಎಂಬ ಸುಪ್ರಸಿದ್ಧ ಬ್ಯಾಂಕರನು ಆತ್ಮಹತ್ಯಮಾಡಿಕೊಳ್ಳಲಿಕ್ಕೆ ಇದೇಕಾರಣವು. ತೋಫುಗಳಲ್ಲಿ ಇಲ್ಲವ

ಇಂಜಿನುಗಳಲ್ಲಿ ಎಂದೂ ಉಪಯೋಗಿಸದಂಥ ಹೆಚ್ಚು ಶಕ್ತಿಯು ಹ್ಯಾಗೆ ಅವಶ್ಯವೋ, ಹಾಗೆಯೇ ಬ್ಯಾಂಕುಗಳಲ್ಲಿ ಉಪಯೋಗಕ್ಕಿಂತ ಹೆಚ್ಚು ಹಣವೂ, ರಾಷ್ಟ್ರಗಳಲ್ಲಿ ಯುದ್ಧಕ್ಕೆ ಬೇಕಾಗುವ ದಂಡಿಗಿಂತ ಹೆಚ್ಚು (Resevedforce) ಕಾದಿಟ್ಟದಂಡೂ, ವ್ಯಾಖ್ಯಾತೃವಿನಲ್ಲಿ ಕೊಡಬೇಕಾದ ವ್ಯಾಖ್ಯಾನಗಳಿಗಿಂತ ಹೆಚ್ಚು ವಿಷಯಜ್ಞಾನವೂ, ಲೇಖಕನಲ್ಲಿ ವಿವೇಚಿಸಬೇಕಾದ ಲೇಖಿಕ್ಕಿಂತ ಹೆಚ್ಚು ವಿವೇಚನಶಕ್ತಿಯೂ, ಜಟ್ಟಿಯಲ್ಲಿ ದಿನಾಲು ಉಪಯೋಗಿಸುವ ಶಕ್ತಿಗಿಂತ ಹೆಚ್ಚು ಶಕ್ತಿಯೂ, ಜಠರದಲ್ಲಿ ದಿನಾಲು ಪಚಿಸಬಹುದಾದ ಸಾಮರ್ಥ್ಯಕ್ಕಿಂತ ಹೆಚ್ಚು ಸಾಮರ್ಥ್ಯವೂ ಇರಬೇಕಾಗಿರುವದು. ಪ್ರಸಂಗಕ್ಕೆ ಉಪಯೋಗಬೀಳಬೇಕೆಂದು ಪ್ರಯತ್ನಮಾಡುವಾಗ ಬ್ಯಾಂಕುಗಳು ಬೇಕಂತ ಕೆಲವು ಹಣವನ್ನು ಬೇರೆಯಾಗಿರಿಸಬೇಕಾಗುತ್ತದೆ. ಖರ್ಚಿನಬಾಬಿನಲ್ಲಿ ರಾಷ್ಟ್ರವು ಬಹಳ ತೊಂದರೆಮಾಡಿಕೊಂಡು ಕೆಲವು ದಂಡನ್ನು ಕಾದಿಡಬೇಕಾಗುತ್ತದೆ. ಬಾಲ್ಯದಿಂದ ವ್ಯಾಖ್ಯಾತೃವು ಕಷ್ಟಪಟ್ಟು ಅನೇಕ ವಿಷಯಗಳನ್ನು ಕಲಿತಿರಬೇಕಾಗುತ್ತದೆ. ಕೂತಲ್ಲಿ, ನಿಂತಲ್ಲಿ, ಮಲಗಿದಲ್ಲಿ ವಿಚಾರಮಾಡಿ ಮಾಡಿ ಲೇಖಕನು ವಿವೇಚನಶಕ್ತಿಯನ್ನು ಸಂಗ್ರಹಿಸಬೇಕಾಗುತ್ತದೆ. ದಿನಾಲು ಹಲವು ಪ್ರಕಾರದ ಅಂಗಸಾಧನಮಾಡಿ ಮಾಡಿ ಜಟ್ಟಿಯು ಸಾಮರ್ಥ್ಯವನ್ನು ಸಂಚಯಗೊಳಿಸಿಕೊಂಡಿರಬೇಕಾಗುತ್ತದೆ. ದಿನಾಲು ತುತ್ತುತುತ್ತು ಕಡ್ಡಿಮಾಡಿ ಅನ್ನವನ್ನುಂಡು ಪಚನಶಕ್ತಿಯನ್ನು ಬೆಳೆಸಿರಬೇಕಾಗುತ್ತದೆ.

"ಇಟ್ಟು ಒಳಿಸು" ಎಂಬ ನಾಣ್ಣುಡಿಯು ಗರ್ಭಿತಾರ್ಥವಾದರೂ ಸಾಮರ್ಥ್ಯಸಂಚಯಗೊಳಿಸು ಎಂದಿರುವದು. ಮೇಲಿನ ಸಾಮರ್ಥ್ಯಸಂಚಯದ ನಿಯಮವು ರೋಗಿಗಳಿಗೂ ಹತ್ತುವದು. ಮೊದಲಿನಿಂದ ನಿಯಮಿತವಾಗಿ ಉಣ್ಣುತ್ತ, ಯೋಗ್ಯವಾಗಿ ವಿಶ್ರಾಂತಿಯನ್ನು ಹೊಂದುತ್ತಬಂದಿದ್ದರೆ ಬೇನೆಬರುವ ಸಂಭವವಿದ್ದಿಲ್ಲ. ಒಂದು ವೇಳೆ ಸಾಧಾರಣಬೇನೆಬಂದರೂ ದೇಹವು ನೈಸರ್ಗಿಕಧರ್ಮದಂತೆ

ಬೇನೆಯಿಂದ ತೀವ್ರವೇ ಮುಕ್ತವಾಗುತ್ತಿತ್ತು; ಆದರೆ ರೋಗಿಯು ಉಣ್ಣು-ತಿನ್ನುವದರಲ್ಲಿ ಮಿತಿಯನ್ನಿಡದೆ ತನ್ನ ಪಾಚಕಶಕ್ತಿಗೆ ಹರಿಯದಷ್ಟು ಅನ್ನವನ್ನು ಪ್ರತಿನಿತ್ಯ ಮೂರು ಮೂರು ಸಾರೆ ಉಣ್ಣುವದರಿಂದ ಪಚನಶಕ್ತಿಯು ಕೆಟ್ಟುಹೋಗಿ ಕಾಯಮರೋಗಗಳ ಬೀಡಾರಕ್ಕೆ ಅವನ ದೇಹವು ತಕ್ಕದ್ದಾಗುವದು. ಉಣಿಸು-ತಿನಿಸುಗಳಂತೆ ವಿಶ್ರಾಂತಿಯನ್ನಾದರೂ ರೋಗಿಯು ಮಿತಿಯಿಲ್ಲದೆ ತಕ್ಕೊಳ್ಳುವನು. ಆದರಿಂದಲೂ ದೇಹದ ಅಸ್ವಸ್ಥತೆಗೆ ಅನುವುದೊರೆಯುವದು. ದೃಢಕಾಯನಾಗ ಬಯಸುವವನು ಜಠರವು ಪಚಿಸಬಹುದಾದ ಅನ್ನಕ್ಕಿಂತ ತುತ್ತು ಕಡಿಮೆ ಉಣ್ಣುವ ಪರಿಪಾಠವಿಡಬೇಕು. ಹಾಗು ಬೇಸರಬಾರದಷ್ಟು ವಿಶ್ರಾಂತಿಯನ್ನು ಅನುಭೋಗಿಸುತ್ತಿರಬೇಕು. ಅಂದರೆ ಇವುಗಳಿಂದ ಒಂದುತರದ ಸಾಮರ್ಥ್ಯಸಂಚಯವಾಗಿ ಪ್ರಕೃತಿಯು ನಿರೋಗವಾಗುವದು.

ವೆಲಿಂಗ್ಟನ್ನನ್ನು ಯುದ್ಧನೈಪುಣ್ಯದಿಂದಾಗಲಿ, ಸಾಮರ್ಥ್ಯಶ್ರೇಷ್ಠತ್ವದಿಂದಾಗಲಿ ವಾಟರ್ಲೂ ಕಾಳಗದಲ್ಲಿ ರಣಧುರಂಧರ ನೆಪೋಲಿಯನ್ನ ಬೋನಾಪಾರ್ಟನನ್ನು ಗೆಲ್ಲಲಿಲ್ಲ; ಆದರೆ ಒಳ್ಳೇ ಹೊತ್ತಿಗೆ ದೊರೆತ ೩೦ ಸಾವಿರ ಕಾದಿಟ್ಟದಂಡಿನ ಸಹಾಯದಿಂದ ಅವನು ನೆಪೋಲಿಯನ್ನನನ್ನು ಗೆದ್ದನೆಂದು ಇತಿಹಾಸದಲ್ಲಿ ಬರೆದದೆ. ಇದರಂತೆ ಸದಾಶಿವರಾಯನಿಗೆ ಮಲ್ಹಾರರಾವ ಹೋಳಕರನ ಕಾದಿಟ್ಟದಂಡು ಹೊತ್ತಿಗೆಸರಿಯಾಗಿ ಅನುವಾಗದ್ದರಿಂದ ಪಾನಿಪತ್ತದಲ್ಲಿ ಮರಾಟರ ಭಯಂಕರ ಪರಾಜಯವಾಯಿತು. ಸಾಮರ್ಥ್ಯಸಂಚಯಮಾಡದಿದ್ದವನ ಪರಾಜಯಗಳೆಲ್ಲ ಇದೇ ಪ್ರಕಾರದವಾಗುವವು.

ಕೈ. ನಾಮದಾರ ಗೋಖಲೆಯವರು ವಕ್ತೃತ್ವಸಾಮರ್ಥ್ಯವನ್ನು ಬೆಳಸಿಕೊಳ್ಳುವದಕ್ಕಾಗಿ ಎಷ್ಟೋ ಉತ್ತಮ ಗ್ರಂಥಗಳನ್ನು ಬಾಯಿಪಾಠಮಾಡಿದ್ದರು. ಅವರು ಈ ಭಾಷಾಸಂಚಯದಿಂದ ಲಾರ್ಡಕರ್ಝನ್ನ ಹಾಗು ಲಾರ್ಡಮಿಂಟೋಸಾಹೇಬರಂಥ ಅತ್ಯಂತ ಅಭಿಮಾನಿಗಳ ಬಾಯಿಗಳನ್ನು ಕಟ್ಟಿಬಿಡುತ್ತಿದ್ದರು. ಗೋಖಲೆಯವರ ವಾಕ್ಸಾಮರ್ಥ್ಯವು ಹ್ಯಾಗೆ ಹ್ಯಾಗೆ ಬೆಳೆಯಹತ್ತಿತೋ ಹಾಗೆ ಹಾಗೆ ಅವರ

ವಕ್ತೃತ್ವಕ್ಕೆ ಅಪೂರ್ವತೆಯು ಪ್ರಾಪ್ತವಾಗಹತ್ತಿತು. ಮತ್ತು ಕಡೆ ಕಡೆಗೆ ಗೋಖಲೆಯವರೆಂದರೆ ಭೂಲೋಕದ ಬ್ರಹಸ್ಪತಿಯೇ ಆಗಿ ಹೋದರು.

ಕೋರ್ಟುಗಳಲ್ಲಿ ನಡೆಯುವ ಎಷ್ಟೋ ಖಟ್ಲೆಗಳನ್ನು ಹೊಸಬ ರಾದ ವಕೀಲರು ನಡೆಯಿಸಲಾರರೆಂತಲ್ಲ; ಆದರೆ ಕೋರ್ಟಿನ ಕೆಲಸ ಗಳಲ್ಲಿ ತೀರ ಅನನುಭವಿಕರಾದ ಇವರ ಕಡೆಗೆ ಪಕ್ಷಗಾರರು ಮುದ್ದಾಮಾಗಿ ಹೋಗುವದಿಲ್ಲ; ಯಾಕಂದರೆ ಖಟ್ಲೆ ಕೆಡಲಿಕ್ಕೆ ಈ ಅಪಕ್ವ ವಕೀಲನೊಬ್ಬನು ಮತ್ತೆ ಎಲ್ಲಿ ಕಾರಣನಾಗುವನೋ ಎಂದು ಅವರು ತಿಳಿಯುವರು.

ಯಾವದಾದರೊಂದು ಯಂತ್ರವನ್ನು ಮಾಡುವವನಿಗೆ ೫೦ ರೂ. ಬಕ್ಷೀಸು ಕೊಡುವೆನೆಂದೂ, ಯಾವದಾದರೊಂದು ಯಂತ್ರವನ್ನು ಮಾಡಕಲಿಯುವವನಿಗೆ ೩೦೦೦ ರೂ. ಬಕ್ಷೀಸು ಕೊಡುವೆನೆಂದೂ ಒಬ್ಬ ಪ್ರಸಿದ್ಧ ಯಂತ್ರಕಲಾವಿಶಾರದನು ಪ್ರಸಿದ್ಧಿಸಿದ್ದನಂತೆ, ಇದರಲ್ಲಿ ಅವನು ಕೆಲಸಮಾಡುವ ಮನುಷ್ಯನಿಗಿಂತ ಕೆಲಸಕಲಿಯುವ ಮನುಷ್ಯನಿಗೆ ಹೆಚ್ಚು ಇನಾಮು ಕೊಡಲಿಚ್ಛಿಸಿದ್ದನ್ನು ಕೇಳಿ ಸಾಮಾನ್ಯರು ಚಕಿತ ರಾಗಬಹುದಾಗಿದೆ. ಆದರೆ ಅವನು ಹಾಗೆಬಕ್ಷೀಸು ಕೊಡುವದು ಯೋಗ್ಯವೇ ಆಗಿರುವದು. ಯಾಕಂದರೆ ಯಂತ್ರಪ್ರವೀಣನಿಗೆ ಹೊಸಯಂತ್ರ ಮಾಡುವದಕ್ಕೆ ಒಂದೆರಡು ದಿವಸಗಳಾದರೆಸಾಕು ಅದರೆಅದೇ ಯಂತ್ರ ಮಾಡಕಲಿಯುವವನು ೪-೬ ವರ್ಷ ಒಂದೇಸವನೆ ಲಕ್ಷಗೊಟ್ಟು ಶಿಕ್ಷಣ ಹೊಂದಬೇಕಾಗುತ್ತದೆ- ಆ ಮಾನದಿಂದ ಅವನಿಗೆ ಬಕ್ಷೀಸು ಹೆಚ್ಚು ಸಿಗುವದು ಅವಶ್ಯವಾಗಿದೆ. ಕಲಿಯುವವನು ಸಾಮರ್ಥ್ಯಸಂಚಯು ಗೊಳಿಸಲಿಕ್ಕೆ ಪ್ರಯತ್ನಮಾಡಬೇಕಾಗುತ್ತದೆ. ಆದರೆ ಮಾಡುವವನು ತನ್ನಲ್ಲಿದ್ದ ಸಾಮರ್ಥ್ಯದ ಲೇಶಾಂಶವನ್ನು ಖರ್ಚುಮಾಡಿ ಯಂತ್ರ ತಯಾರಿಸುವನು.

ತಾಸೆರಡುತಾಸಿನ ಕೆಲಸಕ್ಕಾಗಿ ಪ್ರಸಿದ್ಧ ಡಾಕ್ಟರರೂ, ಬ್ಯಾರಿಸ್ಟರರೂ ಮಿತಿಮಿೂರಿ ಪ್ರತಿಫಲವನ್ನು ಕೇಳುವದನ್ನು ನೋಡಿದರೆ ಆಶ್ಚ

ಯೋಗವಾಗುವದು. ಆದರೆ ಅವರು ಆ ಕಲೆಯಲ್ಲಿ ಪ್ರವೀಣತೆಯನ್ನು ಪಡೆದು ಪ್ರಸಿದ್ಧಿಗೆ ಬರಲಿಕ್ಕೆ ಅವರಿಗೆ ಹತ್ತಿದ ಕಾಲ, ಪರಿಶ್ರಮಗಳನ್ನು ಕುರಿತು ಆಲೋಚಿಸಿದರೆ, ಅವರು ಬೇಡುವ ಪ್ರತಿಫಲವು ಯೋಗ್ಯವೆಂದು ತಿಳಿಯಬರುವದು. ಕಡಿಮೆ ಪ್ರತಿಫಲತಕ್ಕೊಂಡು ಕೆಲಸಮಾಡಲಿಕ್ಕೆ ಸಿದ್ಧರಿದ್ದ ಡಾಕ್ಟರ-ಬ್ಯಾರಿಸ್ಟರರಿಗೂ ಇವರಿಗೂ ಆಯಾ ಕಲೆಗಳ ಜ್ಞಾನದಲ್ಲಿ ಏನೂ ಹೆಚ್ಚುಕಡಿಮೆಯಿರುವದಿಲ್ಲ: ಆದರೆ ಪ್ರಸಿದ್ಧಿಪಡೆಯಲಿಕ್ಕೆ ಅವರು ತಪಗಟ್ಟಲೆ ತಮ್ಮ ಉದ್ಯೋಗವನ್ನು ಒಳ್ಳೇ ಪರಿಶ್ರಮದಿಂದ ಸಾಗಿಸಿರುವದರಿಂದ, ಅವರಲ್ಲಿ ಆ ಉದ್ಯೋಗದ ಅನುಭವವು ಹೆಚ್ಚಾಗಿರುತ್ತದೆ. ಅವರ ಅನುಭವವಿಶೇಷಕ್ಕಾಗಿಯೋ-ಸಾಮರ್ಥ್ಯಸಂಚಯಕ್ಕಾಗಿಯೋ ಅವರಿಗೆ ಹೆಚ್ಚು ಪ್ರತಿಫಲವು ದೊರೆಯುವದು.

ನಾಮದಾರ ರೊದ್ದರವರು ಇಲ್ಲವೆ ರಾ. ಬ. ಆರಟಾಳರವರು ಬಿ. ಎ. ಇಲ್ಲವೆ ಎಂ. ಏ. ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವದಿಲ್ಲ. ಅವರು ಒರೇ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆ ಪಾಸಾಗಿದ್ದರೂ, ದೊಡ್ಡ ದೊಡ್ಡ ಹುದ್ದೆಯ ಅತ್ಯಂತ ಜವಾಬುದಾರಿಯ ಕೆಲಸಗಳಿಗೆ ಅರ್ಹರಾಗಿದ್ದರು. ಆದೇ ಈಗ ಪಾಸಾದ ಎಂ ಏ. ಇಲ್ಲವೆ ಬಿ. ಏ ಯುವರಿಗೆ ನಾಮದಾರ ರೊದ್ದರಂಥ ಜವಾಬುದಾರಿಯ ಕೆಲಸಗಳೂ, ಹುದ್ದೆಯೂ ಒಮ್ಮೆಲೆ ಸಿಗಲಾರವು: ಅವರು ಮೂವತ್ತುವರ್ಷಗಟ್ಟಲೆ ತಮ್ಮ ಕೆಲಸವನ್ನು ಏಕಪ್ರಕಾರವಾಗಿ ಮಾಡಿ ಪ್ರಗತಿಯನ್ನು ಹೊಂದಿದ್ದರಿಂದ, ಅವರಿಗೆ ಈಗಿನ ಮಹತ್ವವು ಪ್ರಾಪ್ತವಾಗಿದೆ.

ಕಾವ್ಯಾದಿಗಳ ವ್ಯುತ್ಪತ್ತಿ ಮಾಡಿಕೊಳ್ಳುವಾಗ ಅಮರಕೋಶ, ಸ್ತೋತ್ರರತ್ನಾಕರ, ವ್ಯಾಕರಣಗಳಸೂತ್ರ ಮೊದಲಾದವುಗಳನ್ನು ಪಾಠಮಾಡುವದಕ್ಕೆ ಎಷ್ಟೋ ದಿವಸಗಳನ್ನು ಕಳೆಯಬೇಕಾಗುತ್ತದೆ. ಅಂಕಗಣಿತ-ಬೀಜಗಣಿತಗಳನ್ನು ಕಲಿಯಬೇಕಾದರೆ ಅಂಕಿ, ಮೊಗ್ಗಿ, ಕಾಲು, ಅರ್ಧ, ಮುಕ್ಕಾಲು ಇತ್ಯಾದಿಗಳನ್ನು ಕಲಿಯುವದಕ್ಕೂ, ವರ್ಗಮೂಲ, ಘನಮೂಲ, ಮಹತ್ವಮಾಪನ

ಮೊದಲಾದವುಗಳ ನಿಯಮಗಳನ್ನು ಪಾಠಮಾಡುವದಕ್ಕೂ ಬಹು ದಿವಸಗಳನ್ನು ಕಳೆಯಬೇಕಾಗುತ್ತದೆ. ಮೊದಲು ಮಾಮಲತದಾರನ್ನು ಸಂಪಾದಿಸಬೇಕಾದರೆ ಬಾರನಿಶಿಕಾರಕೂನನ ಕೆಲಸವನ್ನು ಎಷ್ಟೋ ದಿವಸಗಳವರೆಗೆ ಮಾಡಬೇಕಾಗುತ್ತಿತ್ತು. ಹೀಗೆ ಆಯಾ ಕೆಲಸ ಕಲಿಯುವದಕ್ಕಾಗಿ ಕಳೆಯುವ ವೇಳೆಯೂ, ಪಡುವಶ್ರಮವೂ ವ್ಯರ್ಥವಾಗುವದಿಲ್ಲ. ಕಾಲಹರಣದಪರಿಶ್ರಮಮಾಡಿದಂತಾಗುವದಿಲ್ಲ. ಇವುಗಳಿಂದ ಕೆಲಸ ಕಲಿಯುವವನಲ್ಲಿ ಆ ಯಾ ವಿ ಷ ಯ ದ ಸಾಮರ್ಥ್ಯಸಂಚಯವು ಬೆಳೆಯುವದು.

ಸಾಮರ್ಥ್ಯಸಂಚಯದಿಂದ ಅನಿತ್ಯವಾದ ವ್ಯವಹಾರಗಳ ಜ್ಞಾನವಾಗುವದು. ಹೀಗೆ ಅನಿತ್ಯವ್ಯವಹಾರಗಳ ಜ್ಞಾನವಾದ ಹೊರತು ಖರೇ ಪ್ರಗತಿಯಾಯಿತೆಂದು ಹೇಳಲಿಕ್ಕೆ ಬರುವದಿಲ್ಲ. ಪ್ರಗತಿಪರನಿಗೆ ಸಾಮರ್ಥ್ಯಸಂಚಯವೇ ಬಂಡವಾಳವು. ಇದೇ ಅವನ ತಾರಕ ತರುಣೋಪಾಯವು.

ರೈತನು ಭೂಮಿಯನ್ನು ರೆಂಟೆಹೊಡೆದು ಹರಗಿ ತಯಾರುಮಾಡಿಟ್ಟುಕೊಂಡು ಬಿತ್ತುವದಕ್ಕಾಗಿ ಮಳೆಯ ಹಾದಿಯನ್ನು ನೋಡುತ್ತ ಕೂಡ್ರುವಂತೆ, ಪ್ರಗತಿಯ ಇಚ್ಛೆಯುಳ್ಳವನು ಸಾಮರ್ಥ್ಯಸಂಚಯ ಗೊಳಿಸಿಕೊಂಡು ದೃಢನಿಶ್ಚಯದಿಂದ ಕೆಲಸಮಾಡಿ ಯಶಃಪ್ರಾಪ್ತಿಯ ಹಾದಿಯ ಕಾಯಬೇಕು. ಯಾರಲ್ಲಿ ಯೋಗ್ಯ ಸಾಮರ್ಥ್ಯದ ಸಂಚಯವಾಗಿರುವದಿಲ್ಲವೋ ಅವರಿಗೆ ಯಶಃಪ್ರಾಪ್ತಿಯಾಗಲಾರದು.

---

## ೯ನೆಯ ಖಂಡ—ನಿರಾಶಾಮಯ ಆಶಾ.

"ಆಶಾಃ ಆಶಾಃ ಪರಮಂ ದುಃಖಂ ನಿರಾಶಾಃ ಪರಮಂ ಸುಖಂ" ಎಂಬ ವಾಕ್ಯವನ್ನು ಸತ್ಯವಾಗಿ ತೋರ್ಪಡಿಸಲಿಕ್ಕೆ ಪ್ರಗತಿಪರಮನುಷ್ಯನು ಪ್ರಯತ್ನಿಸಬೇಕು. ಈ ಶ್ಲೋಕವು ಅನ್ನಲಿಕ್ಕೆ ಅತ್ಯಂತ ಸುಲಭವಾಗಿರುವಂತೆ, ಆಚರಣೆಯಲ್ಲಿ ತರಲಿಕ್ಕೆ ಇದು ಅತ್ಯಂತ ಕಠಿಣವಾಗಿರುವದು. ಮಹಾರಾಜನಿಗೂ ಆಶೆಬಿಟ್ಟಿಲ್ಲ; ರಾಜನಿಗೂ

ಆಶೆಬಿಟ್ಟಿಲ್ಲ; ಲೌಕಿಕನಿಗೂ ಆಶೆಬಿಟ್ಟಿಲ್ಲ; ಪಾರಮಾರ್ಥಿಕನಿಗೂ ಆಶೆಬಿಟ್ಟಿಲ್ಲ; ಕೃಪಣನಿಗೂ ಆಶೆಬಿಟ್ಟಿಲ್ಲ. ಅತ್ಯಂತ ಉದಾರನಿಗೂ ಆಶೆಬಿಟ್ಟಿಲ್ಲ. ಇಷ್ಟೇಅಲ್ಲ ಜಗತ್ತಿನೊಳಗಿನ ಪ್ರತಿಯೊಂದು ಪ್ರಾಣಿಯು ಈ ಘೋರವಾದ ಆಶಾಸೂತ್ರದಿಂದ ಬಂಧಿಸಲ್ಪಟ್ಟಿರುವದು.

ಈ ವಿವರಣವನ್ನು ಓದಿ ಕೆಲವರು ಅನುಮಾನಪಡಬಹುದಾಗಿದೆ. ಪರಮಯೋಗಿಗಳೂ, ಪೂಜ್ಯಸನ್ಯಾಸಿಗಳೂ ಇನ್ನೂ ಅನೇಕರೂ ಆಶಾರಹಿತರೆಂದು ಗ್ರಂಥಾಂತರದಲ್ಲಿ ಬರೆದಿರಲು ಇವರು ಹೀಗೆ ಎಲ್ಲರೂ ಆಶೋತ್ರಿಗಳೇ ಎಂದು ಬರೆಯುವದಕ್ಕೆ ಆಧಾರವೇನು? ಎಂದು ಕೇಳಬಹುದಾಗಿದೆ ಅವರ ಪ್ರಶ್ನೆಗೆ ಉತ್ತರವಿಷ್ಟೇ; ಆಶಾರಹಿತನಾದವನು ಲೋಕದಲ್ಲಿ ಯಾರೂ ಇಲ್ಲ. ಆದರೆ ನಮ್ಮ ಆಶೆಗೂ ದೊಡ್ಡವರ ಆಶೆಗೂ ಭೇದ ಮಾತ್ರವಿರುವದು. ನಾವು ಪ್ರತಿಯೊಂದು ವಿಷಯಕ್ಕೆ ಹೆಚ್ಚಾದ ಆಶೆಯನ್ನು ತೋರಿಸಿ, ಆಶೆಗಳು ಪೂರ್ಣವಾಗದಿರಲು, ಕಡೆಗೆ ಆಶಾಮಯವಾದ ನಿರಾಶೆಯುಳ್ಳ ನಾವುನರಿಯು ತಿನ್ನಲಿಕ್ಕೆ ದ್ರಾಕ್ಷಿಗಳು ಸಿಗದಾಗಲು ಹುಳಿದ್ರಾಕ್ಷಿಗಳು ಎಂದು ಭಾವಿಸಿ ನಿರಾಶೆಪಟ್ಟಂತೆ ಆಗುವೆವು. ಆದರೆ ದೊಡ್ಡವರು, ಜ್ಞಾನಿಗಳು ಯಾತರಲ್ಲಿಯೂ ಆಸಕ್ತಿಯನ್ನಿಡದೆ ಆಶೆಯನ್ನಿಡದೆ ಹಿಡಿದ ಕೆಲಸಗಳನ್ನು "ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ" ಎಂಬಂತೆ ಮಾಡಿ, ನಿರಾಶಾಮಯವಾದ ಆಶೆಯಿಂದ ಕಡೆಗೆ ಶ್ರೇಷ್ಠವಾದ ಫಲವನ್ನು ಪಡೆಯುವರು. ಇದೇ ನಮ್ಮ ಹಾಗು ದೊಡ್ಡವರ ಆಶೆಯು ಭೇದವಾಗಿದ್ದರೂ, ಫಲದಲ್ಲಿ ಎಲ್ಲರೂ ಒಂದೇ ವಸ್ತುವನ್ನು ಹೊಂದುವೆವಾದ್ದರಿಂದ, ಎಲ್ಲರೂ ಆಶೋತ್ರಿಗಳೇ ಎಂದು ನಮ್ಮ ಮತವದೆ.

ಪ್ರಗತಿಹೊಂದುವ ಮನುಷ್ಯನಲ್ಲಿ ಆಶೆಯು ಅವಶ್ಯವಾಗಿರಬೇಕಾಗುವದು. ಆದರೆ ದುರಾಶೆಯು ಮಾತ್ರ ಸರ್ವಥಾ ಇರಕೂಡದು. ಪ್ರಾಪಂಚಿಕರಾದ ನಾವು ಆಶಾಪಾಶದಿಂದಲ್ಲದೆ ಬೇರೆ ಮತ್ತಾವದರಿಂ

ದಲೂ ಕಾರ್ಯಾಸಕ್ತರಾಗಲಾರೆವು ಯೋಗ್ಯ ಆಶೆಯು ಮನುಷ್ಯನಿಗೆ ತಾರಕವಾಗಿಯೂ, ದುರಾಶೆಯು ಮಾರಕವಾಗಿಯೂ ಪರಿಣಮಿಸುವದು. ಯೋಗ್ಯ ಆಶೆಯೆಂದರೇ ನಿರಾಶಾಮಯಆಶೆಯು. ಕೆಲಸವನ್ನು ಮನಮುಟ್ಟಿ ಮಾಡುವವನು ತಾನಾಗಿ ಹೆಚ್ಚು ಪಗಾರವನ್ನು ಕೇಳಬೇಕಾಗಿಲ್ಲ. ಕಾರಖಾನದಾರನೇ ಅವನ ಕೆಲಸಕ್ಕೆ ಮೆಚ್ಚಿ ಹೆಚ್ಚು ಹೆಚ್ಚು ಪ್ರತಿಫಲವನ್ನು ಕೊಡುತ್ತಹೋಗುತ್ತಾನೆ. ಆದರ ಆಶೆಬುರುಕನು ತನಗೆ ಪಗಾರವು ಹೆಚ್ಚಾಗ ದೂರಯಬೇಕೆಂಬ ಆಶೆಯಿಂದ ಯಜಮಾನನೆದುರಿಗೆ ಒಳ್ಳೇ ದುಡಿಯುವವನಂತ ನಟಿಸುವನು. ಯಜಮಾನನು ಮೊದಮೊದಲು ಅವನ ಆಶೆಗೊಳಪಟ್ಟರೂ ಪರಿಣಾಮದಲ್ಲಿ ನಿಜಸ್ವರೂಪವು ಅವನಿಗ ಗೊತ್ತಾಗದ ಇಂದು. ಒಮ್ಮನಸ್ಸಿನಿಂದ ಯೋಗ್ಯ ಕೆಲಸಮಾಡುವ ಮನುಷ್ಯನಿಗೆ ಪ್ರತಿಫಲವು ದೊರೆಯುವದು ಸಿದ್ಧಾಂತವು. ಆಶೆಮಾಡಿದ ಫಲಗಳು ಕಡಿಮೆ ಯೋಗ್ಯತೆಯುವೂ, ಆಶಮಾಡದಿದ್ದ ಫಲಗಳು ಅಮೂಲ್ಯಯೋಗ್ಯತೆಯುವೂ ಆಗಿರುತ್ತವೆ. ಇದಕ್ಕೆ ಉದಾಹರಣೆಯು—ನೌಕರನು ಆಶೆಗಾಗಿ ಕೆಲಸಮಾಡುವದರಿಂದ ಕಷತನಕ ನೌಕರಿಯು ಕಡಿಮೆಯೋಗ್ಯತೆಯುವನಾಗುವನು. ಎಷ್ಟು ಪಗಾರಗಳಿಸಿದರೂ ಅವನ ವೃತ್ತಿಯು ಆಶಾವೃತ್ತಿಯದಾಗಿರುವದರಿಂದ ಅವನ ಯೋಗ್ಯತೆಯು ಕಡಿಮೆಯಾಗುವದೇ ಸರಿ. ಆದರೆ ಆದೇ ಒಬ್ಬ ಸಾಧುವು ಇಲ್ಲವೆ ಸನ್ಯಾಸಿಯು ಮಾಡುವ ಕೆಲಸವು (ಇವರು ಪ್ರತ್ಯಕ್ಷ ಕೆಲಸಮಾಡುವ ಅವಶ್ಯಕತೆಯೇ ಇಲ್ಲ. ಇವರ ನಿತ್ಯದ ನಡುವಳಿಗಳೇ ವೃತ್ತಿಗಳೇ ಇವರ ಪೂಜ್ಯಕೃತಿಯ ದ್ಯೋತಕಗಳಾಗಿವೆ.) ಅತ್ಯಂತ ಶ್ರೇಷ್ಠವಾಗಿದ್ದು ನಿರಾಶೆಯಿಂದ ಮಾಡಲ್ಪಡುವದರಿಂದ ಅವರಿಗೆ ಬೇಕಾದಷ್ಟು ಧನ-ಧಾನ್ಯ ಮೊದಲಾದ ಮೂಲ್ಯಪದಾರ್ಥಗಳು ದೂರಯುವವಲ್ಲದೆ, ಅಮೂಲ್ಯವಾದ ಕೀರ್ತಿಯು ಅವರನ್ನು ಸೇವಿಸಲಕ್ಕೆ ತತ್ಪರವಾಗುವದು. ಆದ್ದರಿಂದ ಪ್ರಾಪಂಚಿಕನೇ ಆಗಲಿ, ಪಾರಮಾರ್ಥಿಕನೇ ಆಗಲಿ ಸ್ವತಂತ್ರ ಧ್ಯೇಯದ ಪ್ರಗತಿಮಾರ್ಗವನ್ನು, ಗೊತ್ತುಮಾಡಿಕೊಂಡು,

ದೃಢನಿಶ್ಚಯಾದಿ ಪ್ರಗತಿವರ್ಧಕಗುಣಗಳಿಂದ ನಿರಾಶಾಮಯವಾದ ಆಶೆಯಿಂದ ದುಡಿಯಹತ್ತಿದರೆ, ಅವನಿಗೆ ಇಹದಲ್ಲಿಯ ಎಲ್ಲ ಸುಖಗಳೂ ಲಭಿಸುವವಲ್ಲದೆ ಪರದಲ್ಲಿ ಗತಿಯೂ ದೊರಕುವದು.

"ಆಶಾಬಿಡಬೇಕು, ಸಂಸಾರವನ್ನು ಆಶಾರಹಿತವಾಗಿ ಮಾಡಬೇಕು" ಎಂದು ಬೋಧಿಸುವ ದೊಡ್ಡವರ ಬೋಧದ ತಾತ್ಪರ್ಯವು ನಿರಾಶಾಮಯವಾದ ಆಶೆಯನ್ನು ಧರಿಸಿ ಸಂಸಾರಸಾಗಿಸಬೇಕು, ಎಂದಿರುವದು. ಮನುಷ್ಯನು ಆಶಾಬದ್ಧನಾಗಲಿಕ್ಕೆ ವ್ಯಾಮೋಹವೇ ಕಾರಣವಾಗುತ್ತದೆ. ವ್ಯಾಮೋಹವೆಂದರೆ ನಿಜವಾದ ಮೋಹವಲ್ಲ, ಭಾಸಮಯವಾದ ಮೋಹವು. ಯಾವದಾದರೊಂದು ಪದಾರ್ಥವನ್ನು ಇಷ್ಟಾನಿಷ್ಟ ಸಂಗತಿಗಳದ್ವಾರಾ ಪರೀಕ್ಷಿಸದೆ, ಕೇವಲ ಅದರ ತೋರಿಕೆಯ ಗುಣಕ್ಕೆ ಮನಜೋಲುವದು ವ್ಯಾಮೋಹದ ಲಕ್ಷಣವು. ಇಂಥ ವ್ಯಾಮೋಹಗ್ರಸ್ತವಸ್ತುವಿಗಾಗಿ ನಾವು ಆಶೆಪಡಹತ್ತುತ್ತೇವೆ. ಈ ಆಶೆಯೇ ದುರಾಶೆಯಾಗುವದು.

ಪತಂಗವು ದೀಪದ ದಾಹಕ ಗುಣವನ್ನು ತಿಳಿಯದೆ, ಕೇವಲ ಅದರ ಪ್ರಕಾಶಕ್ಕೆ ಮೆಚ್ಚಿ ಆಲಿಂಗಿಸಹೋಗಿ ಸುಟ್ಟುಹೋಗುವದೂ, ಕಾಮುಕನು ಪರಸ್ತ್ರೀಯನ್ನೂ ಜಾರಿಣಿಯನ್ನೂ ಸಂಭೋಗಿಸುವ ಮೋಹಕ್ಕೆ ಬಲಿಬಿದ್ದು ಅನರ್ಥಕ್ಕೆ ಒಳಗಾಗುವದು, ವ್ಯಾಮೋಹ ದುರಾಶೆಗಳ ಉದಾಹರಣಗಳಾಗಿವೆ.

ಆಶಾಗ್ರಸ್ತನಾಗಲಿಕ್ಕೆ ವ್ಯಾಮೋಹದಂತೆ ದುರಭಿಮಾನವೂ ಕಾರಣವಾಗಿರುವದು. ಯಾವನೊಬ್ಬ ಮನುಷ್ಯನಿಗೂ, ನಮಗೂ ಸ್ನೇಹರೂಪವಾದ ಅಭಿಮಾನ ಬೆಳೆಯಬೇಕಾದರೆ ನಾವು ಅವನೊಡನೆ ಸಂಪೂರ್ಣಸಲಿಗೆಯಿಂದ ನಡೆದು, ಅವನ ಗುಣದೋಷಗಳು ತಿಳಿದನಂತರ ನಾವಿಬ್ಬರೂ ಸಮಾನಧರ್ಮದವರಾದರೆ ಮಾತ್ರ ನಾವು ಪರಸ್ಪರಾಭಿಮಾನಿಗಳಾಗುವೆವು. ಹೀಗೆ ಆಗದೆ ಕಾರ್ಯಸಾಧನಕ್ಕಾಗಿ ಒಬ್ಬನು ನಮ್ಮನ್ನು ಹೆಚ್ಚಾಗಿ ಹೊಗಳಿದ ಮಾತ್ರದಿಂದ ಕೇಳಿದಷ್ಟು ದ್ರವ್ಯಸಹಾಯ ಮಾಡಿದಮಾತ್ರದಿಂದ ನಾವು ಅವನ ನಿಜವಾದ ಗುಣಗಳನ್ನು ಪರೀಕ್ಷಿಸದೆ ಅವನಲ್ಲಿಡುವ ಅಭಿಮಾನವು ನಿಜ

ಪಾದ ಅಭಿಮಾನವೆನಿಸುವದಿಲ್ಲ. ಈ ವೃಥಾಭಿಮಾನಕ್ಕಾಗಿ ದುರಾಶೆ ಪಡಬೇಕಾಗುತ್ತದೆ. ಆದ್ದರಿಂದ ಪ್ರಗತಿಗಾಮಿಯು ದುರಾಶಾ, ವ್ಯಾಮೋಹ, ವೃಥಾಭಿಮಾನ, ದುರಭಿಮಾನ ಮೊದಲಾದ ಅವನತಿ-ಕಾರಕ ಗುಣಗಳನ್ನು ಸಂಗ್ರಹಿಸಬಾರದು.

---

## ೧೦ ನೆಯ ಖಂಡ—ಉಪಹಾಸಗಳ ಉಪಯುಕ್ತತೆ.

“ಜ್ಯೂರಿಯುವರು ಹ್ಯಾಗೇ ಅಭಿಪ್ರಾಯಪಟ್ಟಿದ್ದರೂ ನಾನು ಸಂಪೂರ್ಣ ನಿರ್ದೋಷಿಯಾಗಿರುವೆನೆಂದು ನನ್ನ ಮನೋದೇವತೆಯು ಈಗಲೂ ನನಗೆ ಹೇಳುತ್ತದೆ. ಸೃಷ್ಟಿಯ ಅಧಿಪತ್ಯದಲ್ಲಿ ಈ ಕೋರ್ಟಿಗಿಂತ ಹೆಚ್ಚು ಅಧಿಕಾರವುಳ್ಳ ಪರಮೇಶ್ವರನ ನ್ಯಾಯಾಸನವಿರುತ್ತದೆ. ನಾನು ಸ್ವತಂತ್ರನಾಗಿರುವದಕ್ಕಿಂತ ಕಷ್ಟನಷ್ಟಗಳಲ್ಲಿರುವದರಿಂದ ನನ್ನ ಅಂಗೀಕೃತ ರಾಷ್ಟ್ರಕಾರ್ಯವು ಭರಭರಾಟಿಗೆ ಬರಬೇಕೆಂತಲೇ ಈಶ್ವರೀಸಂಕೇತವಿರಬಹುದು!” ಎಂದು ಸನ್ ೧೯೦೮ಇಸ್ವಿಯ ರಾಜದ್ರೋಹದ ಖಟ್ಲೆಯಲ್ಲಿ ಜಸ್ಟಿಸದಾವರ ಇವರು ಆರುವರ್ಷಗಳ ಟಾಪುಶಿಕ್ಷೆಯನ್ನು ವಿಧಿಸಿದಾಗ ಲೋಕಮಾನ್ಯ ಟಿಳಕರವರು ಕೋರ್ಟಿಗೆ ಉದ್ದೇಶಿಸಿ ಮಾತಾಡಿದರು. ಲೋಕಮಾನ್ಯರ ಈ ಭಾಷಣವನ್ನು ಸುವರ್ಣಾಕ್ಷರದಲ್ಲಿ ಬರೆದಿಡಬಹುದಾಗಿದೆ. ಹಾಗು ಪ್ರಗತಿಪರನು ದಿನಾಲು ಪಾರಾಯಣಮಾಡಲಿಕ್ಕೆ ಅದು ತಕ್ಕದ್ದಾಗಿದೆ

ಉಪಹಾಸ, ಅಪಮಾನ, ವಿಟಂಬನೆ, ವಿಪರೀತಪರಿಸ್ಥಿತಿ, ಭಯಂಕರದಾರಿದ್ರ್ಯ ಮೊದಲಾದ ದುಃಖದಾಯಕಸ್ಥಿತಿಯಿಂದಲೇ ಎಷ್ಟೋ ಜನರ ಪ್ರಗತಿಯಾಗಿ ಪ್ರಖ್ಯಾತರಾಗಿರುವರು. ಉಪಹಾಸ ಇಲ್ಲವೆ ಅಪಮಾನವಾದಹೊರತು ಎಷ್ಟೋಜನರಿಗೆ ಪ್ರಗತಿಮಾರ್ಗವು ಗೋಚರವಾಗುವದಿಲ್ಲ. ಅರ್ಜುನನಿಗೆ ಅಪಮಾನ-ಉಪಹಾಸಗಳು ಆದ ಹೊರತು ಕಾರ್ಯಸ್ಫೂರ್ತಿಯೇ ಆಗುತ್ತಿದ್ದಿಲ್ಲವೆಂದು ಭಾರತದಲ್ಲಿ ವರ್ಣಿಸಿದೆ. ಇದರಂತೆ ಅಪಮಾನವು ಕರ್ಣನಿಗೆ ಆದರೆ ಅವ

ನಿಗೆ ಕಾರ್ಯದಸ್ಫೂರ್ತಿಯಾಗದೆ ಅವನು ಕೇವಲ ಹೇಡಿಯಾಗುತ್ತಿದ್ದನು. "ಭಾಪುರೆ ಕರ್ಣ" ಎಂದು ಉಬ್ಬಿಸಿದಾಗಲೇ ಅವನು ದೊಡ್ಡ ದೊಡ್ಡ ಕಾರ್ಯಗಳನ್ನು ಮಾಡಿರುವನು. ಸ್ವಭಾವವೈಚಿತ್ರ್ಯದಂತೆ ಕೆಲವು ಜನರು ಉಪಹಾಸದಿಂದ ಪ್ರಗತಿಯನ್ನು ಹೊಂದುವಂತೆ, ಬೇರೆ ಕೆಲವರು ಉತ್ತೇಜನದಿಂದ ಉನ್ನತಿಯನ್ನು ಹೊಂದುವರು. ಕೆಲವು ಮಾನೀ ಸ್ವಭಾವದವರು ಸಾಧಾರಣ ಉಪಹಾಸ-ಉತ್ತೇಜನಗಳಿಂದ ಕಾರ್ಯಪ್ರವರ್ತರಾದರೆ, ಕೆಲವು ಮಡ್ಡ ಜನರು ಕಾರ್ಯಪ್ರವೃತ್ತರಾಗಲಿಕ್ಕೆ ದುಸ್ಸಹವಾದ ಅಪಮಾನವೂ, ಮಿಗಿಲಾದ ಇನಾಮೂ ಅವಶ್ಯವಾಗುವವು. ಇಂಥವರು ಕೆಲಸಮಾಡಹತ್ತಿದರೆಂದರೆ, ದೇಹದ ಪರಿವೆಯಿಲ್ಲದೆ ದುಡಿದು ಕೊನೆಗಾಣಿಸುವರು.

ನಿನ್ನಿಂದ ಏನಾಗುವದು? ನೀನು ಹೀಗೆಯೇ ರ ರ ಈ ಕಲಿಯುತ್ತ ಕೂಡ್ರುವವನು, ಎಂದು ಗುರುವರ್ಯ ಮಹಾಜನಿ ಇವರು ಅಂದದ್ದರಿಂದ ಕೈ. ಆಗರಕರರವರಿಗೆ ಬಹಳ ಅಪಮಾನವೆನಿಸಿತು. ಆದ್ದರಿಂದ ಅವರು ಕರ್ತವ್ಯಜಾಗ್ರತರಾಗಿ ಮಹಾಜನಿಯವರಂತೆ ಎಂ ಏ. ಪರೀಕ್ಷೆಯಲ್ಲಿ ಪಾಸಾದರಲ್ಲದೆ, ತಮ್ಮ ಓಜಸ್ವಿಯಾದ ಲೆಕ್ಕಣಿಕೆಯಿಂದ ಹಲವು ಉತ್ತಮ ಪುಸ್ತಕಗಳನ್ನು ಬರೆದು ಭಾಷಾಮಾತೆಯನ್ನು ಅಲಂಕರಿಸಿದರು. ಇವರು "ಮರಾಠಾ" ಎಂಬ ಇಂಗ್ಲಿಷಭಾಷೆಯ ವಾರಪತ್ರವನ್ನು ತೆಗೆದರು. ಅವರ ಆ ಮರಾಠಾಪತ್ರವು ಈಗಲೂ ಪುಣೆಯಲ್ಲಿ ಪ್ರಸಿದ್ಧವಾಗುತ್ತಿದೆ. ಹೆಸರುವಾಸಿಗಳಾದ ಎಲ್ಲ ಪುರುಷರು ಹೆಚ್ಚು ಕಡಿಮೆಮಾನದಿಂದ ಅಪಮಾನ-ಕಷ್ಟ-ನಷ್ಟಗಳನ್ನು ಸೋಸಿಯೇ ಮುಂದೆ ಬಂದಿರುವರು:

"ನನ್ನ ಆಯುಷ್ಯದೊಳಗಿನ ಪ್ರತಿಯೊಂದು ವಿಜಯವನ್ನು ನಾನು ದೀರ್ಘ ಶ್ರಮಪಟ್ಟು ಸಂಪಾದಿಸುವದರಿಂದ ಸುಲಭರೀತಿಯಿಂದ ಸಾಧಿಸಬಹುದಾದ ಕಾರ್ಯವು ಕೂಡ ನನಗೆ ದುರ್ಲಭವಾಗಿ ತೋರುತ್ತದೆ" ಎಂದು ಒಬ್ಬ ಯಶಸ್ವಿಉದ್ಯೋಗಸ್ತನು ತನ್ನದೊಂದು ಭಾಷಣದಲ್ಲಿ ಹೇಳಿರುವನು. ಅವನು ಮತ್ತೆ ಅನ್ನುವದೇ

ನೆಂದರೆ, ಯಾವ ಕೆಲಸವು ಶ್ರಮವಿಲ್ಲದೆ ಕೈಗೂಡುವದೋ ಆ ಕೆಲಸದಲ್ಲಿ ಏನಾದರೂ ಗೌಣವಿರಲೇಬೇಕು; ಮತ್ತು ನಿರಾಯಾಸದಿಂದಾದ ' ಕೆಲಸವು ಮಹತ್ವದ್ದೇ ಅಲ್ಲ. ಇಂಥ ನಾವಿರಾರು ಕೆಲಸ ಮಾಡಿದರೂ ಮನುಷ್ಯನ ಪ್ರಗತಿಯಾಗಲಾರದು. ಮೈಮೇಲೆ ೮೯ ಗಾಯುಗಳಾಗಿದ್ದರೂಸಂಗ್ರಾಮಸಿಂಹನು ಸಾಯುವವರೆಗೆ ಯುದ್ಧ ಮಾಡಲಿಕ್ಕೆ ಹೇಗೆ ಬೇಸರಿಯುತ್ತಿದ್ದಿಲ್ಲವೋ, ಹಾಗೆ ಸಂಕಟಪರಂಪರೆಗಳಿಗೆ ಎದುರಾಗಿ ಶ್ರೇಯಸ್ಸನ್ನು ಪಡೆದಿರುವ ಮನುಷ್ಯನು ಕಠಿಣಕಾರ್ಯಗಳನ್ನು ಮಾಡಲಿಕ್ಕೆ ಹಿಂದುಮುಂದು ನೋಡುವದಿಲ್ಲ. ಅಂಥವನಿಗೆ ಸಂಕಟಗಳಿಗೆ ಎದುರಾಗುವದಕ್ಕೂ ವಿಧವಿಧದ ಪ್ರಯತ್ನಮಾಡಿ ವಿಜಯಿಯಾಗುವದಕ್ಕೂ ಒಳ್ಳೇ ಹುರುಪು ಬರುವದು. ಈ ಹುರುಪು ಸಾಮಾನ್ಯ ಕೆಲಸಗಳಲ್ಲಿ ಬರುವದಿಲ್ಲಾದ್ದರಿಂದ ಅವನು ಸಾಮಾನ್ಯ ಕೆಲಸಗಳನ್ನು ಮಾಡಲುದ್ಯುಕ್ತನಾಗುವದಿಲ್ಲ.

ಕೃತ್ರಿಮ ಉಪಹಾಸ-ಅಪಮಾನಗಳಂತೆ ಶರೀರವು ವ್ಯಂಗವಾಗಿ ಉಪಹಾಸವಾಗುವದರಿಂದಲೂ ಮನುಷ್ಯನಲ್ಲಿ ಒಂದುತರದ ಕರ್ತವ್ಯಜಾಗ್ರತಿಯು ಬೆಳೆಯುವದು. ಎಷ್ಟೋ ಜನರು ಕುರುಡರು ಗಾಯನ-ವಾದನಪಟುಗಳಾಗಿರುವರು. ಮೂಕರು ಉತ್ತಮ ಶಿಲ್ಪಿಗರೂ, ನೇಕಾರರೂ, ಬಡಿಗರೂ ಆಗಿರುವರು. ಸಾಧವಮಾಧವನೆಂಬ ಸುಪ್ರಸಿದ್ಧ ಮಹಾರಾಷ್ಟ್ರ ಕಾದಂಬರಿಕಾರನು ಹೆಳವನಿದ್ದನು. ಜನ್ಮತಃ ಕಾಲು-ಕೈಗಳಿಲ್ಲದ ಆಗಡಿಯ ರಾಮಭಟ್ಟ ತಾಳೀಕೋಟೆ (ಒಡೆಯರು) ಎಂಬವರು ಮಹಾಬುದ್ಧಿಶಾಲಿಗಳಿದ್ದರು:

ನಮ್ಮಲ್ಲಿಯೆ ಬಹು ಸ್ವಲ್ಪ ಜನರು ತಮ್ಮ ನಿಜವಾದ ಯೋಗ್ಯತೆಯನ್ನು ಕಂಡುಕೊಂಡವರೂ, ಪ್ರಗತಿಯ ಯೋಗ್ಯ ಮಾರ್ಗವನ್ನು ಹಿಡಿದವರೂ ಆಗಿರುತ್ತಾರೆ: ತಮ್ಮ ಸಾಮರ್ಥ್ಯಭಾಂಡಾರದ, ದೇಹಸಾರ್ಥ್ಯಕ್ಯದ ಮಾರ್ಗವನ್ನು ಗೊತ್ತುಹಚ್ಚಿಕೊಳ್ಳುವಷ್ಟರಲ್ಲಿಯೇ ಎಷ್ಟೋ ಜನರು ಇಹಲೋಕದಯಾತ್ರೆಯನ್ನು ಮುಗಿಸಿಕೊಳ್ಳುವರು. ವಿಶಿಷ್ಟಕಾರ್ಯಕ್ಕಾಗಿ ಒಂದೇಸವನೆ ದುಡಿಯುವದೇ ಪ್ರಗತಿಯ

ಮುಖ್ಯ ಶಕ್ತಿಯಾಗಿದೆ. ಅವಿಶ್ರಾಂತಶ್ರಮಮಾಡಿದ ಹೊರತು ಕೆಲಸದ ಮಹತ್ವವು ಬೆಳೆಯುವದಿಲ್ಲ. ಇಂಥ ಹಲವು ಕೆಲಸಗಳನ್ನು ಮಾಡಿದ ಹೊರ್ತು ಮನುಷ್ಯನ ಮಹತ್ವಬೆಳೆಯುವದಿಲ್ಲ. ಕೆಲಸಮಾಡುವ ಸಂಧಿಗಳನ್ನು ದೊರಕಿಸುವವನು ಪ್ರಗತಿಪರನೂ, ಸಂಧಿಗಳನ್ನು ಪ್ರಯತ್ನಪೂರ್ವಕ ಕಳಕೊಳ್ಳುವವನು ಪ್ರಗತಿಹೀನನೂ ಆಗುವರು. ತಮ್ಮ ಜಾತಿಯವರ ಸಲುವಾಗಿ ಬಡ ಸಿದ್ದೀಗುಲಾಮನಾದ ಡಾ. ಬುಕರ ಟಿ. ವಾಸಿಂಗ್ಟನ್ನನು ಅತ್ಯಂತ ಶ್ರಮಪಟ್ಟು ಹಿತಮಾಡುವ ಸಂಧಿಯನ್ನು ತಂದುಕೊಂಡಿದ್ದರಿಂದಲೇ ಅವನು ಆ ಜಾತಿಯ-ಅದೇಕೆ ಮಾನವಜಾತಿಯ ಕಲ್ಯಾಣಕರ್ತನಾದನು. ಅವನು ತಾನು ಶ್ರೀಮಂತನಲ್ಲವೆಂದೂ, ಸುಶಿಕ್ಷಿತನಲ್ಲವೆಂದೂ ಭಾವಿಸಿದ್ದರೆ, ಅವನಿಗೆ ಈ ಸಂಧಿಯು ದೊರಕುತ್ತಿದ್ದಿಲ್ಲ. ಉಪಹಾಸದಿಂದ ಪೀಡಿತನಾದ ಅವನು ಕೇವಲ ಗುಲಾಮಗಿರಿಯಲ್ಲಿಯೇ.ದೀರ್ಘಪರಿಶ್ರಮಪಟ್ಟು ಸ್ವತಃ ವಿದ್ಯೆಸಂಪಾದಿಸಿ, ಮಂದಿಗೆ ಕಲಿಸಿ ಅವರಲ್ಲಿ ಮನುಷ್ಯತ್ವವನ್ನುಂಟುಮಾಡಿದ್ದರಿಂದಲೇ ಅವನ ಮಹತ್ವ ಬೆಳೆದಿದೆ.

ಸಾಧಾರಣವಾಗಿ ವಿಚಾರಿಸಿ ನೋಡಿದರೆ ಮನುಷ್ಯನು ಆಲಸ್ಯಪ್ರಿಯನೆಂಬದು ಕಂಡುಬರುತ್ತದೆ. ಅವನು ಅವಶ್ಯವೆಂದು ಎಲ್ಲ ಕೆಲಸಗಳನ್ನು ಮಾಡುತ್ತಿರುತ್ತಾನೆ. ಏಳುವದು, ಕೂಡ್ರುವದು, ಓಡಾಡುವದು, ಕೆಲಸಮಾಡುವದು ಇವು ಅವನಿಗೆ ಬೇಸರಿಕೆಯನ್ನುಂಟುಮಾಡುತ್ತವೆ. ಶ್ರೀಮಂತರಿಗೂ 'ಆಲಸ್ಯದಲ್ಲಿಯೂ ಐಷ ಆರಾಮಗಳಲ್ಲಿಯೂ ಬೆಳೆದವರಿಗೂ ಬಡವರ ಕಲ್ಪನೆಯೇ ಆಗುವದಿಲ್ಲ. ಕಷ್ಟಪಟ್ಟು ಪ್ರಗತಿ ಹೊಂದೆಂದು ಯಾರಾದರೂ ಅವರಿಗೆ ಬೋಧಿಸಿದರೆ ಅವರು ಅದರ ಅರ್ಥವನ್ನೇ ತಿಳಿಯದಾಗುವರು. ಇಂಥವರು ದೀರ್ಘಪರಿಶ್ರಮಪಟ್ಟು ಉಪಹಾಸ ಅಪಮಾನಗಳನ್ನು ಸಹಿಸಿ ಪ್ರಗತಿ ಹೊಂದಲಿಕ್ಕೆ ಎಂದೂ ಯತ್ನಿಸಲಾರರು. ಆಲಸ್ಯತನದಿಂದ ಅಧೋಗತಿಯಾಗಿ ಇವರ ಶ್ರೀಮಂತಿಕೆ ಕಳೆದುಹೋಗಿ ಬಡತನಬಂದಾಗ ಮಾತ್ರ ಇವರ ಕಣ್ಣುಗಳು ತೆರೆಯಹತ್ತುವವು.

ಪರಾಜಯವಾದ ಬಳಿಕ ಅವಲಂಬಿಸುವ ಮಾರ್ಗದಿಂದಲೇ ಮನುಷ್ಯನ ಖರೇ ಪರೀಕ್ಷೆಯಾಗುವದು. ಪರಾಜಯದಿಂದ ಅವನು ಪ್ರೋತ್ಸಾಹನಹೊಂದುವನೋ ನಿರಾಶೆಹೊಂದುವನೋ ಎಂಬದನ್ನು ನೋಡಬೇಕು. ಪರಾಜಯಕ್ಕೆ ಹೆದರದಿದ್ದರೆ ಹೆಚ್ಚು ಪ್ರಗತಿಪಡೆಯು ವನು. ಪರಾಜಯಕ್ಕೆ ಹೆದರಿದರೆ ಕಾರ್ಯವಿಮುಖನಾಗಿ ಅಧೋಗತಿ ಹೊಂದುವನು.

"ಆರಂಭಶೂರಃ" ಎಂಬಂತೆ ಎಲ್ಲಿ ನೋಡಿದರೂ ಒಳ್ಳೇ ಈರ್ಷೆ ಯಿಂದ ಹೊಸ ಹೊಸ ಕೆಲಸ ಮಾಡುವವರೇ ಕಣ್ಣಿಗೆ ಬೀಳುತ್ತಾರೆ. ಮತ್ತು ಕ್ಷುಲ್ಲಕ ವಿಘ್ನಬಂದಕೂಡಲೆ ಕಾರ್ಯವಿಮುಖರಾಗಿ ಪರಾ ಜಯಹೊಂದುತ್ತಾರೆ. ಸಾವಿರಗಟ್ಟಲೆ ಜನರಿಗೆ ತಮ್ಮ ದಾರಿದ್ರ್ಯದ ನಿಜವಾದ ಕಾರಣವು ಗೊತ್ತಾಗಿರುವದಿಲ್ಲ. ಹಾಗು ಅದನ್ನು ತಿಳ ಕೊಂಡು ನಿವಾರಣಮಾಡಿಕೊಳ್ಳಲು ಯತ್ನಿಸುವದೂ ಇಲ್ಲ. ಪರಾ ಜಯವು ಪ್ರಾಪ್ತವಾದಾಗ ಎದೆಯೊಡೆದುಕೊಳ್ಳದೆ, ಮತ್ತೊಮ್ಮೆ ಅವಿಶ್ರಾಂತ ಪ್ರಯತ್ನಮಾಡಿ ಪ್ರಗತಿಹೊಂದಿದವರ ಎಷ್ಟೋ ಉದಾಹ ರಣೆಗಳು ಇತಿಹಾಸ ಪ್ರಸಿದ್ಧವಿರುವವು. ತೈಮೂರನೂ, ಘೋರಿ ಮಹಮ್ಮದನೂ, ಶಿಕಂದರಬಾದಶಹನೂ, ಪ್ರತಾಪಸಿಂಹನೂ ಹೀಗೆ ಪ್ರಯತ್ನಮಾಡಿ ಯಶೋಭಾಗಿಗಳಾಗಿರುವರು.

ಪುನಃ ಪುನಃ ಪ್ರಯತ್ನಮಾಡಿದ್ದರಿಂದಲೇ ಆಂಗ್ಲೇಯರನೇಕರು ಹಲವು ದೇಶಗಳನ್ನು ಗೊತ್ತುಹಚ್ಚಿದರು. ಪೇರಿಸನೆಂಬ ಶೋಧ ಕನು ಉತ್ತರಧ್ರುವವನ್ನು ಕಂಡು ಹಿಡಿಯುವದಕ್ಕೆ ಆರುಸಾರೆ ಪ್ರಯ ತ್ನಮಾಡಿ ಪರಾಜಯಹೊಂದಿದನು. ಪ್ರತಿಯೊಂದು ಸಾರೆ ಸಂಗಡಿಗ ರಾದ ನೂರಾರುಜನ ನಾವಿಕರನ್ನೂ, ಎಷ್ಟೋ ಸಾಧನಸಾಮುಗ್ರಿಗ ಳನ್ನೂ ಕಳಕೊಂಡನು. ಆದರೆ ಅವನ ದೃಢನಿಶ್ಚಯವು ಮಾತ್ರ ಸಡಿಲಾಗಲಿಲ್ಲ. ಅಂತಿಮಸಾಧ್ಯಕ್ಕಾಗಿ ೨೫ ವರ್ಷ ಅವನು ಕಷ್ಟಪಡಬೇಕಾಯಿತು. ಈ ಅವಧಿಯಲ್ಲಿ ಒಮ್ಮೆ ಸಹ ಅವನು ನಿರಾಶನಾಗಲಿಲ್ಲ. ಅವನ ಧೀರ್ಘಪ್ರಯತ್ನದಿಂದಲೇ ಏಳನೇಸಾರೆ

ಅವನಿಗೆ ಉತ್ತರಧ್ರುವದ ಶೋಧವಾಯಿತು. ಜೇಡಹುಳವು ಮನೆಕಟ್ಟು ವಾಗ ತಂತುಗಳು ಮೇಲಿಂದ ಮೇಲೆ ಹರಿಯುತ್ತಿದ್ದರೂ ಬೇಸರಪಡದೆ ದೃಢನಿಶ್ಚಯದಿಂದ ತಂತುಗಳನ್ನು ಹೆಣೆದು ಮನೆಕಟ್ಟುವದು. ಕ್ಷಣ ಶಃ ಪ್ರಗತಿಹೊಂದುತ್ತಲಿದ್ದ ಈ ಸೃಷ್ಟಿಯಲ್ಲಿ ನಾವು ನಮ್ಮ ಪ್ರಗ ತಿಯನ್ನು ಮಾಡಿಕೊಳ್ಳುವದು ಕರ್ತವ್ಯವಾಗಿದೆ. ಹೀಗೆ ಮಾಡದೆ ಪ್ರಗತಿಹೀನರಾಗುತ್ತ ಹೋಗಿ, ಸೃಷ್ಟಿಯ ರಚನೆಗೆ ಬಾಧೆತರುವದು ಯೋಗ್ಯವಾದೀತೆ?

---

## ೧೧ ನೆಯ ಖಂಡ—ಆಸ್ಥೆ-ಕಾಳಜಿ

“ಹೆಚ್ಚು ಕೆಲಸಮಾಡುವವನಿಗಿಂತ ಕಾಳಜಿಪೂರ್ವಕ ಕೆಲಸ ಮಾಡುವವನು ನನಗೆ ಅತ್ಯಂತ ಪ್ರಿಯನಾಗುವನು” ಎಂದು ಓರ್ವ ಬ್ರಿಟಿಶ ಮಂತ್ರಿವರನು ಅಂದಿದ್ದಾನೆ. ಆಚಾರ್ಯರು ಕುದುರೆಯ ಹಿಂದೆಬಿದ್ದದ್ದನ್ನೆಲ್ಲ ತಕ್ಕೊಂಡುಬಾ ಎಂದು ಹೇಳಿದ ಮಾತ್ರದಿಂದ ಬುದ್ಧಿಗೇಡಿ ಭಗವಂತನು ಕುದುರೆಯ ಲದ್ದಿಯನ್ನು ಕೂಡ ಹಸಿಬೆ ಯಲ್ಲಿ ತುಂಬಿತಂದಂತೆ, ಕಾರ್ಯಗಳ ಮಹತ್ವವನ್ನು ತಿಳಿಯದೆ ಕೆಲ ಸಮಾಡುವವರು ಬಹಳ. ಕಾರ್ಯದ ಮಹತ್ವ ತಿಳಿಯುವದಕ್ಕೆ ಮನ ಸ್ಸಿನಲ್ಲಿ ಆಸ್ಥೆ-ಕಾಳಜಿ ವಹಿಸಬೇಕಾಗುವದು, ಆಸ್ಥೆಯು ಬೆಳೆ ಬೆಳೆ ದಂತೆ ಪ್ರಯತ್ನಗಳು ಎಂದೂ ನಿರರ್ಥಕವಾಗುವದಿಲ್ಲ.

ಹಿಂದಕ್ಕೆ ಆಗಿ ಹೋದ ಮಂತ್ರಿವರ್ಯ ಯೋಗಂಧರಾಯಣ, ಅಮಾತ್ಯರಾಕ್ಷಸ ಮೊದಲಾದವರು ಅತ್ಯಂತ ಆಸ್ಥೆಯಿಂದ ಕೆಲಸಮಾಡು ತ್ತಿದ್ದದರಿಂದಲೇ ಅವರು ಸುಪ್ರಸಿದ್ಧ ಪ್ರಧಾನರಾಗಿದ್ದರು. ಮೈಸೂರ ಮಾಜಿ ದಿವಾಣರಾದ ಸರಶೇಷಾದ್ರಿ ಅಯ್ಯನವರು ಒಳ್ಳೇ ಆಸ್ಥೆಯಿಂದ ಕಾರ್ಯಭಾರವನ್ನು ಸಾಗಿಸಿದ್ದರಿಂದಲೇ ಅಂಧಕರಣಿ ಪ್ರಸಂಗದಲ್ಲಿ ಕೂಡಾ ಮೈಸೂರ ರಾಜ್ಯವು ಪ್ರಗತಿಯನ್ನು ಹೊಂದಿತು. ನಮ್ಮ ವಿಷ ಯಕ್ಕೇ ನಮ್ಮಲ್ಲಿ ಆಸ್ಥೆಯಿಲ್ಲದಿರಲು ಮಂದಿಯ ಬಗ್ಗೆ ನಾವು ಆಸ್ಥೆಪ ಡುವ ಬಗೆಯಾದರೂ ಹೇಗೆ?

“ತನ್ನಂತೆ ಪರರಬಗೆದೊಡೆ ಕೈಲಾಸಬಿನ್ನಣವಕ್ಕು” ಎಂಬ ಸರ್ವಜ್ಞಕವಿಯ ಉಕ್ತಿಯು ಮನನೀಯವಾಗಿದೆ. ಖರೇ ಆಸ್ಥೆಯಿಂದಾಗಲಿ, ತೋರಿಕೆಯ ಡಂಭಾಚಾರದ ಆಸ್ಥೆಯಿಂದಾಗಲಿ ನಾವು ನಮ್ಮ ಕೆಲಸಗಳನ್ನು ಹೇಗಾದರೂ ಸಾಗಿಸಿಕೊಳ್ಳುತ್ತಿರುವೆವು. ಆದರ ಪರರ ಕೆಲಸದಲ್ಲಿ ನಮ್ಮ ಆ ಡಂಭಾಚಾರದ ಆಸ್ಥೆಯನ್ನು ಕೂಡ ಉಪಯೋಗಿಸ ಹೋಗದೆ, “ಹತ್ತಿದಲ್ಲಿ ಹತ್ತಿತು ಹಾರಿದಲ್ಲಿ ಹಾರಿತು” ಎನ್ನುವಂತೆ ದುರ್ಲಕ್ಷ್ಯಮಾಡುವೆವು. ಇದರಿಂದ ಕಾರ್ಯಕೆಟ್ಟು ಹಾನಿಯೊಗುವ ಮಾನಕ್ಕಿಂತ, ನಮ್ಮ ವೃತ್ತಿಯು ಕೆಟ್ಟು ಪ್ರಗತಿಹೀನ ವಾಗುವವಮಾನವು ಹೆಚ್ಚಾಗುವದು. ಆದ್ದರಿಂದ ಪ್ರಗತಿಪರನು ಪ್ರಗತಿಹೊಂದುವದಕ್ಕಾಗಿ ಮಾಡಬೇಕಾದ ಕೆಲಸವನ್ನು ಒಳ್ಳೇ ಆಸ್ಥೆಯಿಂದಮಾಡಿ ಪ್ರಗತಿಹೊಂದಬೇಕು.

---

## ೧೨ ನೆಯ ಖಂಡ—ದೇಶಪರ್ಯಟನ.

ಯೋನಸಂಚರತೀ ದೇಶಾನ್ ಯೋನಸೇವೇತ್ ಪಂಡಿತಾನ್ ।
ತಸ್ಯ ಸಂಕುಚಿತಾಬುದ್ಧಿರ್ಘೃತಬಿಂದುರಿವಾಂಭಸಿ ॥ ಸುಭಾಷಿತ ॥

ಎಷ್ಟೋಜನರು ಪ್ರವಾಸದಲ್ಲಿ ಕಳೆಯುವ ವೇಳೆಯು ನಿರರ್ಥಕವಾಗಿ ವ್ಯಯವಾಗುವದೆಂದು ಭಾವಿಸುವರು. ಆದರೆ ಹಾಗೆ ತಿಳಿಯುವದು ದಡ್ಡತನವು. ಪ್ರವಾಸಮಾಡುವದರಿಂದ ವಿಶಿಷ್ಟಪ್ರಕಾರದ ಜ್ಞಾನಸಂಚಯವಾಗುವದು, ದೇಹಕ್ಕೆ ಆರಾಮವೆನಿಸುವದು. ಪ್ರಸಿದ್ಧ ಜನರ ಗುರುತುಪರಿಚಯವಾಗುವದು. “ಕೇಲ್ಯಾನೆದೇಶಾಟನಾ ಪಂಡಿತಮೈತ್ರೀಸಭೇತಸಂಚಾರ” ಎಂಬಂತೆ ಪ್ರವಾಸದಿಂದ ಉಪಲಬ್ಧವಾಗದ ಹಲವು ಸಂಗತಿಗಳ ಜ್ಞಾನವು ಉಪಲಬ್ಧವಾಗುತ್ತದೆ.

ಪ್ರವಾಸಮಾಡುವದರಿಂದ ಮಹಾ ಮಹಾ ರೋಗಿಗಳು ಗುಣಹೊಂದಿರುವದನ್ನು ನೋಡಿದರೆಮನುಷ್ಯನಿಗೆ ಅದರಲ್ಲಿಯೂ ಪಟ್ಟಣವಾಸಿ ಮನುಷ್ಯನಿಗೆ ಪ್ರವಾಸವು ಅತ್ಯಂತ ಅವಶ್ಯವಾದದ್ದು. ಯಾಕಂದರೆ ಮುಂಬಯಿಯಂಥ ಅತ್ಯಂತ ದಟ್ಟವಾದ ವಸತಿಯುಳ್ಳ ಪಟ್ಟಣಗಳಲ್ಲಿಯ ಸಾಧಾರಣಪ್ರತಿಯ ಜನರು ಹಗಲು-ರಾತ್ರಿ ಶ್ರಮಬಟ್ಟು

ಕೆಲಸ ಮಾಡಬೇಕಾಗುವದು. ಅಲ್ಲಿ ಹಗಲುರಾತ್ರಿ ಒಂದೇಸವನೆ ನಡೆಯುವ ಗಿರಣಿ, ಉಗೆಬಂಡಿ, ಉಗೆಹಡಗ, ಮೋಟಾರಗಳಿಗಾಗಿ ಕಲ್ಲಿದ್ದಲಿಯನ್ನು ಉಪಯೋಗಿಸುವರು. ಆ ಹೊಗೆಯು ಪಟ್ಟಣ ತುಂಬತುಂಬಿ ಹವೆಯೊಳಗೆ ಮಿಶ್ರವಾಗುವದು. ಈ ಹವೆಯನ್ನೇ ಎಲ್ಲರೂ ಉಸಿರಾಡಿಸುವದರಿಂದ ಪ್ರಕೃತಿಯು ಕೆಟ್ಟುಹೋಗುವದು. ಮನಸ್ಸಿಗೆ ಸ್ವಸ್ಥತೆಯುಂಟಾಗದು. ಅದರಿಂದ ಆ ಜನರು ವರ್ಷದೊಳಗಿನ ಕೆಲವು ದಿವಸಗಳನ್ನಾದರೂ ಶುದ್ಧ ಹವೆಯಿದ್ದಕಡೆಗೂ, ತರತರದ ವನಶೋಭೆಯಿರುವಕಡೆಗೂ ಹೋಗಿ ಪ್ರವಾಸಮಾಡಿಬರಬೇಕು. ಈ ಪ್ರವಾಸಕಾರ್ಯದಿಂದ ಅವರ ಶರೀರ-ಮನಸ್ಸು ಇವುಗಳ ಜಾಡ್ಯವು ಹೋಗುವದು. ಕೆಲಸಮಾಡಲಿಕ್ಕೆ ಹೊಸ ಹುರುಪು ಬರುವದು.

ಸುವ್ಯವಸ್ಥಿತವಾದ ಜೀವನೋಪಾಯಕ್ಕೂ, ನಿಜವಾದ ಪ್ರಗತಿಗೂ ಪ್ರವಾಸವು ಬೇಕೇಬೇಕು. ಪ್ರವಾಸದಲ್ಲಿ ವಿಶ್ರಾಂತಿಯೂ ಸಿಗುವದು. ಖುಷಿಮೋಜೂ ಆಗುವದು. ವರ್ಷಾನುಗಟ್ಟಲೆ ಕೊರಗುತ್ತ ಕೆಲಸಮಾಡುವದಕ್ಕಿಂತ ನಡುವೆ ಕೆಲವು ದಿವಸ ಪ್ರವಾಸಮಾಡಿ ಹುರುಪುಗೊಂಡು ತೀವ್ರ ಕೆಲಸಮಾಡುವದು ಯೋಗ್ಯವಲ್ಲೆಂದು ಯಾರು ಹೇಳುವರು? ಕೆಲಸಮಾಡುವಾಗ ಒದಗುವ ಚಿಂತೆಯಿಂದ ಒಂದುಪ್ರಕಾರದ ಬುದ್ಧಿಮಾಂದ್ಯವು ಉಂಟಾಗುತ್ತದೆ. ನಡುವೆ ಪ್ರವಾಸದಲ್ಲಿ ವಿಶ್ರಾಂತಿಪಡೆಯುವದರಿಂದ ಮನಸ್ಸು ಶ್ರಾಂತಗೊಂಡು ವಿಕಸಿತವಾಗುವದು:

ಪ್ರವಾಸವು ಪಟ್ಟಣಿಗರಿಗೆ ಸುಖಕರವಾಗುವಂತೆ ಹಳ್ಳಿಯವರಿಗೂ ಆಗುವದು. ಸದಾ ಹಳ್ಳಿಯಲ್ಲಿ ವಾಸಮಾಡುವ ಮನುಷ್ಯನು ಕೂಪಮಂಡೂಕದಂತೆ ದೇಶಾಂತರಗಳ ಜ್ಞಾನವಿಲ್ಲದವನಾಗುವನು. ಹಳ್ಳಿಯವರು ವರ್ಷಕ್ಕೊಮ್ಮೆಯಾದರೂ ಪ್ರಸಿದ್ಧಸ್ಥಳಗಳಿಗೆ ಹೋಗಿ ಅಲ್ಲಿ ಒಂದೆರಡುವಾರಗಳನ್ನು ಕಳೆದು ಬರಬೇಕು. ಅಂದರೆ ಅವರು ವಿವಿಧ ಸಂಗತಿಗಳನ್ನು ಬಲ್ಲವರಾಗುವರು. ಅದರಿಂದ ಅವರ ವಿವೇ

ಚಕಶಕ್ತಿಗೆ ಬಹಳ ಸಹಾಯವಾಗುವದು.

ಪೌರ್ವಾತ್ಯರಲ್ಲಿ ಪ್ರತಿವರ್ಷ ಕೆಲವು ದಿವಸಗಳನ್ನು ಪ್ರವಾಸದಲ್ಲಿ ಕಳೆಯುವ ರೂಢಿಬಿದ್ದದೆ. ಅನುಕರಣೀಯವಾದ ಆ ರೂಢಿಯು ವೃಕ್ಷ ಮೊದಲಾದವುಗಳಿಗೆ ಮಳೆ-ಚಳಿ-ಬಿಸಿಲು-ನೆರಳು ಇವುಗಳಿಂದ ಹೊಸ ಜೀವನವು ಪ್ರಾಪ್ತವಾಗುವಂತೆ, ಮನುಷ್ಯನಿಗೆ ಅತ್ಯಂತ ಉತ್ಸಾಹಪೂರ್ಣವಾದ ಹೊಸ ಚೈತನ್ಯವನ್ನು ಕೊಡುವದು.

ಪ್ರವಾಸಮಾಡುವಾಗ ನಾವು ಚಿಂತೆಯನ್ನು ಸಂಗಡ ಕಟ್ಟಿಕೊಂಡು ಹೋಗಬಾರದು, "ಯಾಕೆ ಯಾತ್ರೆಯ ಮಾಡುತಿರ್ಪರಲ್ಲೇನಿಹುದು" ಎಂಬಂತೆ ಪ್ರವಾಸಿಕನು ದ್ವೇಷ, ಅಸೂಯಾ, ನಿಂದಾ, ಮೋಹ ಇತ್ಯಾದಿ ಗುಣಗಳುಳ್ಳವನಾಗಿ ಪ್ರವಾಸಮಾಡಿದರೆ, ಪ್ರವಾಸದ ಮಹತ್ವವು ಅವನಿಗೇನೂ ತಿಳಿದುಬರುವದಿಲ್ಲ. ಯಾಕಂದರೆ ಅವನ ಮನಸ್ಸು!ಪ್ರವಾಸದ ಸುಖವನ್ನು ಅನುಭವಿಸಲು ಅವನ ಸಂಗಡ ಬಂದಿರುವದಿಲ್ಲ. ಅದು ಮನೆಗೆಲಸ, ಹೆಂಡತಿ, ಮಕ್ಕಳು, ತರುವದು, ಬರುವದು, ಖಟ್ಲೆ-ಖೋಖಿಲೆ ಇವುಗಳಲ್ಲಿ ಪೇಚಾಡುತ್ತ ಮನೆಯಲ್ಲಿಯೇ ಇರುತ್ತದೆ.

ಆರೋಗ್ಯವು ಎಲ್ಲಕ್ಕೂ ಮಹತ್ವವಾದ ವಿಷಯವಾಗಿರುತ್ತದೆ. "ಆಪಭಲಾ ತೋ ಜಗಭಲಾ" ಎಂಬ ನಾಣ್ಣುಡಿಯ ಅರ್ಥವನ್ನು ಆರೋಗ್ಯದೃಷ್ಟಿಯಿಂದ ಮಾಡಿದರೆ ಮನುಷ್ಯನು ಗಟ್ಟಿಮುಟ್ಟಿಯಾಗಿದ್ದರೆ ಏನನ್ನಾದರೂ ಮಾಡಿ ಪ್ರಗತಿಹೊಂದುವನು, ಎಂದಾಗುವದು; ರೋಗಿಷ್ಟನಾದ ಮನುಷ್ಯನು ಯಾವ ಕಾರ್ಯವನ್ನೂ ಸಾಧಿಸಲರ್ಹನಲ್ಲ. ಆರೋಗ್ಯದ ಬಲದಿಂದಲೇ ನಮಗೆ ಎಲ್ಲ ಸುಖಗಳ ಅನುಭವಆಗುವದು. ಆದ್ದರಿಂದ ಕೃಪಣತನಮಾಡುವದಿದ್ದರೆ ಬೇರೆ ಬೇಕಾದ ವಿಷಯಗಳಲ್ಲಿ ಮಾಡಬಹುದು. ಪ್ರವಾಸಕಾರ್ಯದ ವಿಷಯಕ್ಕೆ ದುಡ್ಡಿನ ಹಾಗು ವೇಳೆಯ ಕೃಪಣತನಮಾಡಿ ಆರೋಗ್ಯಮಂದಿರದ ನೆಲಗಟ್ಟನ್ನು ಸಡಲಿಸಲಿಕ್ಕೆ ಯತ್ನಿಸಲಾಗದು.

## ೧೩ ನೆಯ ಖಂಡ—ಪ್ರಸನ್ನತೆ.

ಆನಂದಕಾರಕಸಾಧನಗಳಲ್ಲಿ ಪ್ರಸನ್ನತೆ ಎಂಬದೊಂದು ಬಹು ದೊಡ್ಡ ಸಾಧನವಾಗಿದೆ. ಪ್ರಸನ್ನತೆಯಿಂದ ಶಿಕ್ಷಕನು ಲೋಕಪ್ರಿಯನಾಗುವನು. ಅಂಗಡಿಕಾರನು ಹೆಚ್ಚಾಗಿ ಗಿರಾಕಿಗಳನ್ನು ದೊರಕಿಸುವನು; ನೌಕರನು ಹೆಚ್ಚು ಸಂಬಳವನ್ನು ದೊರಕಿಸುವನು; ರಾಜನು ಪ್ರಜಾನುರಾಗಿಯಾಗುವನು; ನಾನಾಪ್ರಕಾರದ ಮಹತ್ಕಾರ್ಯಗಳು ಪ್ರಸನ್ನತೆಯನ್ನು ಕಾಯ್ದುಕೊಳ್ಳುವದರಿಂದ ಸಹಜವಾಗಿ ಕೊನೆಗಾಣುವವು. ಖಿನ್ನತೆಯು ಪ್ರಗತಿಯನ್ನು ನಾಶಮಾಡುವ ಶಸ್ತ್ರವಾಗಿದೆ. ಪ್ರಸನ್ನತೆಯು ಶಕ್ತಿಯ ಉತ್ಪಾದಕವೂ, ಖಿನ್ನತೆಯು ಶಕ್ತಿಯ ನಾಶಕಾರಕವೂ ಆಗಿರುತ್ತದೆ.

ಪ್ರಸನ್ನತೆಯಲ್ಲಿ ಮನೋಹರತ್ವವೂ ಇರುವದು. ಆದರಿಂದ ಅದು ಪ್ರಗತಿಪರನಿಗೆ ಕಾರ್ಯಸಾಧಕವಾಗಿರುವದು; ಪ್ರಸನ್ನತೆಯಿಂದ ಸ್ನೇಹವು ಬೆಳೆಯುವದು. ಪ್ರಸನ್ನಮುಖಿಯು ದುಷ್ಟ ಹಾಗು ವಿರೋಧಿ ಮನುಷ್ಯನಿಂದ ಕೂಡ ಪ್ರಸಂಗದಲ್ಲಿ ಸಹಜವಾಗಿ ಸಹಾಯಹೊಂದುವನು. ಮನೆಯಲ್ಲಾಗಲಿ, ಕಾರಖಾನೆಗಳಲ್ಲಾಗಲಿ, ರಾಷ್ಟ್ರದಲ್ಲಾಗಲಿ, ಲೋಕಪ್ರಿಯನಾದವನು ಪ್ರಸನ್ನಮುಖಿಯೇ ಆಗಿರುತ್ತಾನೆಂಬದು ಕಂಡುಬರುತ್ತದ. ಖಿನ್ನ ಹಾಗು ಉಗ್ರಮುದ್ರೆಯ ಮನುಷ್ಯನು ಲೋಕಪ್ರಿಯನಾಗುವದು ದುಸ್ತರವು. ಖಿನ್ನವದನನು ಬೇಗ ಸಾಯುವನೆಂದೂ, ಪ್ರಸನ್ನಮುಖಿಯು ದೀರ್ಘಕಾಲಬಾಳುವನೆಂದೂ ತಜ್ಞರು ಹೇಳುತ್ತಾರ. ಆದ್ದರಿಂದ ಪ್ರಗತಿಯನ್ನು ಬಯಸುವವನು ಸದಾ ಪ್ರಸನ್ನಚಿತ್ತವಿರುವಂತೆ ಯತ್ನಿಸಬೇಕು.

ಅಭ್ಯಾಸದಿಂದ ಬೇಕಾದದ್ದನ್ನು ಕೈವಶಮಾಡಿಕೊಳ್ಳಬಹುದು. ದುರ್ಮುಖಿಯು ಕೂಡ ಅಭ್ಯಾಸದಿಂದ ಪ್ರಸನ್ನತೆಯನ್ನು ಪಡೆಯಬಹುದು. ಪ್ರಸನ್ನಚಿತ್ತದವನಿಗೆ ದುಃಖ-ಶೋಕಗಳು ಹೆಚ್ಚಾಗಿ ಬಾಧಿಸಲಾರವು. ಪ್ರಸನ್ನತೆಯನ್ನು ಸಂಪೂರ್ಣವಾಗಿ ಪಡೆಯಲಿಚ್ಛಿಸುವವನು ಮೊದಲು ಸ್ಮಿತವದನನಾಗಿರಲು ಪ್ರಯತ್ನಮಾ

ಡಬೇಕು. ಮುಗುಳುನಗೆಯೆಂದರೆ, ಜಾರಿಣಿಯು ಜಾರನನ್ನು ವಶ ಮಾಡಿಕೊಳ್ಳುವಾಗ ತೋರಿಸುವ ವಿಕಟಹಾಸ್ಯವಲ್ಲ. ಬಾಲ ಬಡಿಯುವ ಸ್ವಭಾವದವರು ಅಧಿಕಾರಿಗಳ ಇಲ್ಲವೆ ಶ್ರೀಮಂತರ ಬಳಿಯಲ್ಲಿ ಕಾರ್ಯ ಸಾಧನಕ್ಕಾಗಿಯೂ, ಜನಪ್ರತಿಷ್ಠೆಯನ್ನು ಹೊಂದುವದಕ್ಕಾಗಿಯೂ ನಗುವ ದೇಶಾವರಿ ನಗೆಯಲ್ಲ; ತಾಯಿಯು ಪ್ರೀತಿಯಿಂದ ಮಗನನ್ನು ಮುದ್ದಾಡುವಾಗ ನಗುವನಗೆಯು; ಸ್ಮಿತವದನದಿಂದ ಕಡುವೈರಿಯು ಕೂಡಶಾಂತನಾಗುವನು. ಸ್ಮಿತವದನನಾಗುವದು ಸಾಧಿಸಿದ ಬಳಿಕ ಅಂತಃಕರಣವನ್ನು ಪ್ರಸನ್ನವಾಗಿಟ್ಟುಕೊಳ್ಳಲಿಕ್ಕೆ ಪ್ರಯತ್ನಿಸಬೇಕು. ಸತ್ಯ ಹಾಗು ಸುಲಲಿತ ಭಾಷಣಮಾಡುವದರಿಂದ ಪ್ರಸನ್ನತೆಯು ಅಂತಃಕರಣದಲ್ಲಿ ನೆಲೆಗೊಳ್ಳಹತ್ತುವದು. ಪ್ರಸನ್ನಾಂತಃಕರಣವು ತ್ರಾಸ, ನಿರಾಶೆ, ದುಃಖ, ಕಷ್ಟ ಇವುಗಳ ಮೇಲೆ ಅಧಿಕಾರತೋರಿಸಿ ಅವನ್ನು ಓಡಿಸುವದು. ಪ್ರಸನ್ನಚಿತ್ತನು ಎಂಥ ಪ್ರತಿಕೂಲಪ್ರಸಂಗ ಗಳಲ್ಲಿಯೂ ಅನುಕೂಲತೆಯನ್ನು ದೊರಕಿಸಿಕೊಂಡು ಪ್ರಗತಿ ಪರನಾಗುವನು.

ನಿಜವಾದ ಸಭ್ಯ ಸ್ತ್ರೀಪುರುಷರು ದುಃಖ, ಶೋಕ, ದಾರಿದ್ರ್ಯ ಇವುಗಳನ್ನು ಸಹಜವಾಗಿ ಸಹಿಸುವರು. ಪ್ರಸನ್ನತೆಯಿಂದಲೇ ಸಭ್ಯ ಗುಣವು ಅವರಲ್ಲಿ ಒಡಮೂಡಿರುತ್ತದೆ. ದೈನ್ಯವನ್ನು ಮಂದಿಯ ಮುಂದೆ ಹೇಳಿಕೊಳ್ಳುವದು ಸಭ್ಯ ಜನರಿಗೆ ಮರಣಪ್ರಾಯವಾಗು ವದು. ಇದರಿಂದಲೇ ಅವರು ಉಜ್ವಲಚರಿತ್ರರಾಗಿ, ಲೋಕವಂದ್ಯ ರಾಗುವರು. ದುಃಖ, ಶೋಕ, ಶ್ರಮಗಳನ್ನು ನುಂಗಲು ಪ್ರಯತ್ನ ಮಾಡುವದರಿಂದ ಮನೋದಾರ್ಢ್ಯವು ಹೆಚ್ಚುವದು. ದೃಢಮನ ಸ್ಸಿನವನು ಪ್ರಸನ್ನತೆಯನ್ನು ಪಡದಿರಬೇಕಾಗುವದು. ಇಲ್ಲದಿದ್ದರೆ ಅವನ ನಿಶ್ಚಯವು ಸಹಜವಾಗಿ ಸಡಿಲಾಗಬಹುದು.

ಕಪಟದ, ಮಾತ್ಸರ್ಯದ, ಭಿನ್ನತೆಯ ಮುದ್ರೆಗಳುಳ್ಳ ಮನು ಷ್ಯನು ಯಾವ ಪ್ರಕಾರದ ಪ್ರಗತಿಯನ್ನೂ ಪಡೆಯಲಾರನು. ನಗೆ ಮೊಗದ ಮಗುವನ್ನು ಯಾರು ಮುದ್ದಿಡಲಿಕ್ಕಿಲ್ಲ? ನಗೆಮೊಗದ

ಮನುಷ್ಯನನ್ನು ಯಾರು ಮುಂದೆ ಕರೆಯಲಿಕ್ಕಿಲ್ಲ? ನಗೆಮೊಗದ ಹೆಂಡತಿಯನ್ನು ಯಾವ ಗಂಡನು ಪ್ರೀತಿಸಲಿಕ್ಕಿಲ್ಲ? ಇದು ಯಾತರ ಪರಿಣಾಮವು? ಅವರ ಪ್ರಸನ್ನಮಯಿಯಾದ ಮುದ್ರೆಯಿಂದಲ್ಲವೇ?

ಸರಳವಾದ ನಡಾವಳಿಯುವರಾಗುವದೂ, ಮಿತ್ರರ ಆದರಕ್ಕೆ ಪಾತ್ರರಾಗುವದೂ, ಸಮಾಜದ ಪ್ರೇಮಕ್ಕೆ ಪಾತ್ರರಾಗುವದೂ ಪ್ರಸನ್ನಚಿತ್ತದಿಂದಲೇ. ಪ್ರಸನ್ನತೆಯನ್ನೊಂದು ಕಳಕೊಳ್ಳುವದರಿಂದ ಮನೆಯವರ, ಮಿತ್ರರ, ಸಮಾಜದ, ರಾಷ್ಟ್ರದ ಕ್ಷೋಭಕ್ಕೆ ಪಾತ್ರರಾಗಬೇಕಾಗುತ್ತದೆ. ಎಷ್ಟೋ ಜನರು ಸಾಧಾರಣವಾದ ವ್ಯವಹಾರಗಳಲ್ಲಿ ಕೂಡ ಸಭ್ಯತೆಯನ್ನು ಕಾಯ್ದುಕೊಳ್ಳುವದಿಲ್ಲ. ಈ ದಾರಿಯು ಯಾವ ಊರಿಗೆ ಹೋಗುವದೆಂದು ಪ್ರವಾಸಿಕನು ಕೇಳಲು, ದಾರೀ ತೋರಿಸಲಿಕ್ಕೆ ನನ್ನನ್ನು ಆಳಾಗಿ ನಿಯಮಿಸಿರುವೆಯೋನು? ಎಂದು ಕೇಳುವ ನಿರ್ದಯರು ನಮ್ಮಲ್ಲಿ ಬಹುಜನರಿರುವರು. ಇಂಥ ದುರಭಿಮಾನಿಗಳಿಂದ ಸ್ವಹಿತದ ಕಾರ್ಯವಾಗಲಿ, ದೇಶಹಿತದ ಕಾರ್ಯವಾಗಲಿ ಆಗುವ ಸಂಭವವಿಲ್ಲ. ಇವರ ಈ ದುಶ್ಚಿತ್ತತನದಿಂದ ಅವರ ಪ್ರಗತಿಯ ಘಾತಮಾತ್ರ ತಪ್ಪದೆ ಆಗುವದು:

ಶ್ರೀ ಶೇಷಾಚಲ ಸದ್ಗುರುಗಳು ಎಲ್ಲರನ್ನೂ ಸ್ಮಿತವದನ ಪೂರ್ವಕವಾಗಿ ನಮಿಸುತ್ತ ಅವರನ್ನು ಕುರಿತು—ಮಹಾರಾಜಾ, ಎಂಬ ಉಪಪದದೊಡನೆ ಸಂಬೋಧಿಸುತ್ತ ಬೋಧಮಾಡುತ್ತಿದ್ದದರಿಂದಲೇ ಅವರ ಬೋಧವು ಸುಪರಿಣಾಮಕಾರಿಯಾಗಿ, ಅವರು ಲೋಕವಂದ್ಯರೂ, ಭಕ್ತಾನುರಾಗಿಗಳೂ ಆದರು. ಶ್ರೀ ಟೇಂಬೇ ಮಹಾರಾಜರು ಸದ್ಗುಣಿಗಳನ್ನು ಮನ್ನಿಸುತ್ತಲೂ, ದುರ್ಗುಣಿಗಳನ್ನು ದಂಡಿಸುತ್ತಲೂ ಲೋಕಹಿತದಕ್ಷರಾದರು. ಆದರೆ ಆಗಡಿಯ ಸಾಧುಗಳು ದುಷ್ಟರ ಹಾಗು ಶಿಷ್ಟರ ದೃಷ್ಟಿಯಿಂದ ಸರಿಯಾಗಿಯೇ ವಂದ್ಯರಾದಂತೆ ಟೇಂಬೇಮಹಾರಾಜರು ಆಗಲಿಲ್ಲ. ಇದರಲ್ಲಿ ಶ್ರೀ ಟೇಂಬೇಮಹಾರಾಜರನ್ನು ನಿಂದಿಸಬೇಕೆಂದು ಲೇಖಕನ ಉದ್ದೇಶವಿಲ್ಲ. ಶ್ರೀಗುರುಗಳಂತೆ ಅವರೂ ಲೇಖಕನಿಗೆ ಅತ್ಯಂತ ಪೂಜ್ಯರಾಗಿರುವರು. ಆದರೆ

ಪ್ರಸ್ತುತ ವಿಷಯವಾದ ಪ್ರಸನ್ನತೆಯ ವಿವೇಚನವನ್ನು ಮಾಡುವಾಗ, ಸಾಮಾನ್ಯರಿಗೆ ತೋರಬಹುದಾದ ಭೇದವನ್ನು ಇಲ್ಲಿ ವಿವರಿಸಿರುವೆವು.

ನಾವು ಪ್ರಯತ್ನದಿಂದ ಎಂಥ ಶ್ರೀಮಂತರೇ ಆಗಲಿ, ಎಷ್ಟು ಕೀರ್ತಿಯನ್ನೇ ಹೊಂದಲಿ ಆದರೆ ಯಾವನಿಗೆ ಪ್ರಸನ್ನತೆಯ ಮಧುರ ರಸವು ಸೇವಿಸಲಿಕ್ಕೆ ದೊರೆಯಲಿಲ್ಲವೋ ಅವನ ಬಾಳು ವ್ಯರ್ಥವೆನ್ನಬಹುದು. ಅಂಗೀಕೃತಕಾರ್ಯದಲ್ಲಿ ಯಶವು ದೊರೆಯಲಿ-ದೊರೆಯದಿರಲಿ, ದುಡ್ಡು ಸಿಗಲಿ-ಸಿಗದಿರಲಿ, ಏನೇ ಆಗಲಿ, ಪ್ರಸನ್ನತೆಯನ್ನು ಮಾತ್ರ ಕಳಕೊಳ್ಳಬಾರದು. ನಮಗೆ ದುಡ್ಡು ಸಿಕ್ಕರೂ ಅಷ್ಟೇ-ಸಿಗದಿದ್ದರೂ ಅಷ್ಟೇ, ಯಶೋಭಾಗಿಗಳಾದರೂ ಅಷ್ಟೇ-ಯಶೋವಿಹೀನರಾದರೂ ಅಷ್ಟೇ, ಈ ಸಂಗತಿಗಳೆಲ್ಲ ಕೇವಲ ನಮ್ಮ ಸ್ವವಿಷಯಗಳಾಗಿರುವವು. ಜನರಿಗೆ ಇವುಗಳ ಪರಿವೆಯಿರುವದಿಲ್ಲ. ನಾವು ಪ್ರಸನ್ನಚಿತ್ತರಿರುವೆವೋ ಇಲ್ಲವೋ ಎಂಬದೊಂದು ವಿಷಯವನ್ನು ಮಾತ್ರ ಜನರು ಪರೀಕ್ಷಿಸುವರು.

ಕೈ. ನಾಮದಾರ ಗೋಪಾಳ ಕೃಷ್ಣ ಗೋಖಲೆಯವರ ಪ್ರಗತಿಯ ರಹಸ್ಯವು ಅವರು ಸದಾ ಧರಿಸುತ್ತಿದ್ದ ಪ್ರಸನ್ನಮುದ್ರೆಯದಾಗಿರುವದೆಂದು ಅವರ ಸಹಪಾಠಿಗಳು ಹೇಳುತ್ತಾರೆ. ಇತಿಹಾಸಪ್ರಸಿದ್ಧರಾದ ಎಷ್ಟೋ ಜನರು ದೊಡ್ಡವರೆನಿಸಿಕೊಳ್ಳಲಿಕ್ಕೆ ಅವರ ಪ್ರಸನ್ನಚಿತ್ತವೇ ಕಾರಣವೆಂದು ಗೊತ್ತಾಗುವದು. ಶ್ರೀ ಶಿವಾಜಿ ಮಹಾರಾಜರು ದುರ್ಮುಖಿಗಳಾದದ್ದನ್ನು ಯಾರೂ ನೋಡಿದ್ದಿಲ್ಲ. ಸಂತಶ್ರೇಷ್ಠ ತುಕಾರಾಮ ಮಹಾರಾಜರು ಎಂದೂ ದೀನರಾಗಿದ್ದಿಲ್ಲ.

ಜಗತ್ತು ಕನ್ನಡಿಯಂತಿರುವದು. ಅದರಲ್ಲಿ ಯಾವ ಪ್ರಕಾರದ ಬಿಂಬವನ್ನು ಕೆಡವುವೆವೋ ಅದರ ಪ್ರತಿಬಿಂಬವೇ ಕಾಣುವದು. ಯಾವ ಪ್ರಕಾರವಾಗಿ ಕೂಗುವೆವೋ ಅದೇ ಪ್ರಕಾರದ ಪ್ರತಿಧ್ವನಿಯುಂಟಾಗುವದು. ಎಷ್ಟು ಖರ್ಚು ಮಾಡುವೆವೋ ಅಷ್ಟು ಹೊಂದುವೆವು. "ಖರ್ಚುಗಾರರ ಮನೆಯು ಮೊಟ್ಟೆಗಾರ" ಎಂದು ದೊಡ್ಡವರು ಹೇಳಿರುವ ರಹಸ್ಯವಾದರೂ ಇದೇ.

## ೧೪ನೆಯ ಖಂಡ—ದೈವೀಭಾವನೆ.

"ಸತ್ಯಂವದ, ಧರ್ಮಂಚರ; ಆಚಾರ್ಯದೇವೋಭವ, ಮಾತೃದೇವೋಭವ, ಪಿತೃದೇವೋಭವ" ಮೊದಲಾದ ಉಪನಿಷದ್ವಾಕ್ಯಗಳು ಪ್ರಗತಿಪರನಿಗೆ ಕೇವಲ ಮಾರ್ಗದರ್ಶಕಗಳಾಗಿವೆ. ಪ್ರತಿಯೊಬ್ಬ ಮನುಷ್ಯನು ಪ್ರಗತಿಯನ್ನು ಹೊಂದುವಾಗ ದೈವೀಭಾವನೆಯುಳ್ಳವನಾಗಿರಬೇಕು. ದೈವೀಭಾವವಿಲ್ಲದೆ ಪ್ರಗತಿಹೊಂದುವದೆಂದರೆ, ನಾಯಿಯ ಬಾಲವನ್ನು ಕೊಳವೆಯಲ್ಲಿ ಹಾಕಿ ಸರಿಮಾಡಹೋದಂತೆಯೇ ಸರಿ. ಗುರುವು ಗುರುತ್ವವನ್ನು ಕಾಯ್ದುಕೊಳ್ಳಲಿಕ್ಕೂ, ಶಿಷ್ಯನು ಶಿಷ್ಯತ್ವವನ್ನು ಕಾಯ್ದುಕೊಳ್ಳಲಿಕ್ಕೂ, ತಾಯಿಯು ಮಾತೃತ್ವವನ್ನು ರಕ್ಷಿಸಲಿಕ್ಕೂ, ತಂದೆಯು ಪಿತೃಭಾವದವನಾಗಿರಲಿಕ್ಕೂ, ರಾಜನು ರಾಜನೆನಿಸಲಿಕ್ಕೂ, ಪ್ರಜೆಗಳು ಪ್ರಜೆಗಳೆನಿಸಲಿಕ್ಕೂ, ಕ್ಷತ್ರಿಯನು ಕ್ಷಾತ್ರಧರ್ಮಿಯಾಗಲಿಕ್ಕೂ, ಬ್ರಾಹ್ಮಣನು ಬ್ರಹ್ಮಜ್ಞಾನಿಯಾಗಲಿಕ್ಕೂ, ವೈಶ್ಯನು ವ್ಯವಹಾರದಕ್ಷನಾಗಲಿಕ್ಕೂ, ಶೂದ್ರನು ಬೇಸಾಯ ಸಾಗಿಸಲಿಕ್ಕೂ ಅರ್ಹರಾಗಿ, ಪ್ರಗತಿಪರರಾಗಬೇಕಾದರೆ ದೈವೀಭಾವನೆಯು ಅವರಲ್ಲಿ ಅತ್ಯವಶ್ಯವಾಗಿ ನೆಲೆಗೊಂಡಿರಬೇಕು.

ದೈವೀಭಾವನೆಯೆಂದರೆ ದೇವರಲ್ಲಿ ಇಡುವ ನಿಷ್ಠೆಯು, ಅಥವಾ ಪೂಜ್ಯರಲ್ಲಿ ಇದ್ದ ಭಕ್ತಿಯು. ಭಕ್ತನು ದೇವರಲ್ಲಿ ವಹಿಸುವ ಭಾವನೆಯೂ, ಪತ್ನಿಯು ಪತಿಯಲ್ಲಿ ವಹಿಸುವ ಭಾವನೆಯೂ, ಮಗನು ತಂದೆಯಲ್ಲಿ ವಹಿಸುವ ಭಾವನೆಯೂ, ಪ್ರಜೆಗಳು ರಾಜನಲ್ಲಿ ವಹಿಸುವ ಭಾವನೆಯೂ ದೈವೀಭಾವನೆಯ ದ್ಯೋತಕಗಳಾಗಿರುವವು. ದೈವೀಭಾವನೆಯಿಲ್ಲದ ಭಕ್ತನು ಭಕ್ತನಲ್ಲ; ಪತ್ನಿಯು ಪತ್ನಿಯಲ್ಲ; ಮಗನು ಮಗನಲ್ಲ; ಪ್ರಜೆಗಳು ಪ್ರಜೆಗಳಲ್ಲ. ಹೀಗೆಯೇ ಪ್ರಗತಿಪರಮನುಷ್ಯನು ಸಮಾಜದಲ್ಲಿ ಅವಶ್ಯವಾಗಿ ವಹಿಸಬೇಕಾದ ದೈವೀಭಾವನೆಯುಳ್ಳವನಾಗಿರಬೇಕಲ್ಲದೆ, ಸ್ವೀಕೃತಕಾರ್ಯದಲ್ಲಿಯೂ, ಕಾರ್ಯಸಾಧನಗಳಲ್ಲಿಯೂ, ಕಾರ್ಯಸಾಧಕನಾದ ತನ್ನಲ್ಲಿಯೂ ದೈವೀಭಾವನೆಯುಳ್ಳವನಾಗಿರಬೇಕು. ಕಾರ್ಯ, ಸಾಧನ, ಸಾಧ್ಯ ಈ ತ್ರಯಿ

ಗಳಲ್ಲಿಯೂ ದೈವೀಭಾವನೆಯು ಸರಿಯಾದ ಪ್ರಮಾಣದಲ್ಲಿದ್ದಹೊರತು ಸಾಧಕನ ಪ್ರಗತಿಯು ಆಗುವದಿಲ್ಲ.

ಬ್ರಹ್ಮಭಾವನೆಯುತನಾಗಬೇಕಾದರೆ "ಅಹಂಬ್ರಹ್ಮಾಸ್ಮಿ" ಎಂದು ಸಾಧಕನು ತಿಳಿದಿರಬೇಕಾಗುವದು. ಗುರುಸಾಕ್ಷಾತ್ಕಾರ ಮೊದಲಾದ ವುಗಳಿಗಿಂತ ಆತ್ಮಸಾಕ್ಷಾತ್ಕಾರವೇ ಪ್ರಗತಿಪರನಿಗೆ ಪ್ರಾಮುಖ್ಯವಾದ ಸಾಧನವೆಂದು ವೇದಾದಿಗಳಲ್ಲಿ ಹೇಳಿದೆ ಆತ್ಮಸಾಕ್ಷಾತ್ಕಾರದಿಂದ ಬ್ರಹ್ಮತ್ವವನ್ನು ವಹಿಸುವವನು, ತಾನೊಬ್ಬ ಕೈಲಾಗದ ಅಶಾವಾದಿಯೆಂದು ಭಾವಿಸಿ ನಡೆದರೆ, ಬ್ರಹ್ಮತ್ವವನ್ನು ಎಂದೂ ಹೊಂದಲಾರನು. ಆದ್ದರಿಂದ ಪ್ರಗತಿಪರನು ಸುಗುಣಯುತನಾಗಿ ಸ್ವಂತದ ವಿಷಯದಲ್ಲಿ ದೈವೀಬಾವನೆಯುಳ್ಳವನಾಗಿರಬೇಕು. ಆದರೆ ನಾನೇ ದೇವರು; ನಾನೇ ಕುಲಗುರುವು; ನಾನೇ ಕುಲಪತಿಯು ಎಂದು ಬಹಿರಂಗದಲ್ಲಿ ಹೇಳುತ್ತಹೋಗುವದು ದೈವೀಭಾವನೆಯ ಲಕ್ಷಣವಲ್ಲ. ಭಾವನೆಯು ಬರೇ ಭಾವಿಸತಕ್ಕ ವಿಷಯವೇ ಹೊರತು ಒಡನುಡಿಯುವ ವಿಷಯವಲ್ಲ.

ಪ್ರಗತಿಪರನು ತಾನೆಷ್ಟು ಪೂಜ್ಯನೂ, ಸನ್ಮಾರ್ಗಿಯೂ, ಕರ್ತೃಮಾಕರ್ತೃಮಶಕ್ತಿಯುಳ್ಳವನೂ ಆಗಿದ್ದರೂ, ತನ್ನ ದೊಡ್ಡಿಸ್ತಿಕೆಯನ್ನು ಹೇಳಿಕೊಳ್ಳಬಾರದು. ಹೀಗೆ ಹೇಳುವದರಿಂದ ತನ್ನ ಬಗ್ಗೆ ಜನರಲ್ಲಿ ಆದರವು ಕಡಿಮೆಯಾಗಿ, ದ್ವೇಷಕ್ಕೆ ಗುರಿಯಾಗಿ ಸನ್ಮಾರ್ಗದಿಂದ ಚ್ಯುತಿಹೊಂದಲಿಕ್ಕೆ ಕಾರಣವಾಗುವದು. ಆದ್ದರಿಂದಲೇ ಅವತಾರಿಕರು ಕೂಡ ತಾವು ಕಿಂಕರರೆಂದು ಹೇಳಿಕೊಳ್ಳುವರು. "ಮಹಾರಾಜಾ, ಈ ದೇಹಕ್ಕೆ ಎದೆ ಸೀಳಿದರೆ ಮೂರುಅಕ್ಷರವಿಲ್ಲ ಮಹಾರಾಜಾ! ಆದರೆ ಮಹಾರಾಜಾ, ಮಹಾಸ್ವಾಮಿಯು ಈ ಘಟದ ನಾಲಿಗೆಯಮೇಲೆ ಕುಳಿತುಕೊಂಡು, ಮೃದಂಗಬಾರಿಸುವವನು ಛಾಪಹಾಕಿ ಮೃದಂಗವನ್ನು ನುಡಿಸುವಂತೆ, ನುಡಿಸುತ್ತಿರುವನು, ಮಹಾರಾಜಾ" ಎಂದು ನುಡಿದು ದೇವರಲ್ಲಿ ತಾನು ಎಷ್ಟು ದೈವೀಭಾವನೆಯುಳ್ಳವನಾಗಿದ್ದೇನೆಂಬದನ್ನು ವ್ಯಕ್ತಗೊಳಿಸುತ್ತಿದ್ದ ಶ್ರೀ ಶೇಷಾಚಲ

ಗುರುವರನನ್ನು ನೋಡಿದವರಿಗೆ ನಿಜವಾದ ದೈವೀಭಾವನೆಯು ಕಲ್ಪನೆಯು ಆಗದಿರದು.

ಪ್ರಗತಿಪರನು ಎಂಥ ನೀಚನನ್ನೂ ನಿಂದಿಸಬಾರದು. ವಿರಾಟ್ ಸ್ವರೂಪವಾದ ಜಗತ್ತೆಲ್ಲ ಈಶ್ವರನ ಸ್ವರೂಪವೇ ಆಗಿರುವದರಿಂದ ಪ್ರತಿಯೊಂದನ್ನು ಈಶ್ವರೀಅಂಶವೆಂದು ತಿಳಿದು ನಡೆಯುವಲ್ಲಿ ಯಾವ ತರದ ದೋಷವೂ ತಟ್ಟುವ ಸಂಭವವಿಲ್ಲ. "ಶುನಿಚೈವ ಶ್ವಪಾಕೇಚ ಪಂಡಿತಃ ಸಮದರ್ಶಿನಃ" ಎಂಬಂತೆ ವಿವೇಕಿಯಾದ ಪ್ರಗತಿಪರಪಂಡಿತನು ಜಗತ್ತಿಗೇ ಕಿಂಕರಭಾವವುಳ್ಳವನಾಗಿ ನಡೆಯುವದು ಅತ್ಯವಶ್ಯವು. "ಕಿಂಕರನಾದಹೊರತು ಶಂಕರನಾಗಲಾರನೆ"ಂಬ ದೊಡ್ಡವರ ವಚನದ ಮರ್ಮವೂ ಇದೇ ಆಗಿದೆ.

ಆದರೆ ದೈವೀಭಾವನೆಯು, ವಿವೇಕಿಗಳು ಸಂಪಾದಿಸತಕ್ಕ ಗುಣವಾಗಿದೆಯೇಹೊರತು, ಅವಿವೇಕಿಗಳಿಗೆ ಸಾಧ್ಯವಲ್ಲ. ಅವಿವೇಕಿಗಳಿಂದ ದೈವೀಭಾವನೆ ಧರಿಸಲ್ಪಡಬೇಕಾದರೆ ಅನರ್ಥಕಾರಕಗಳಾದ ತಪ್ಪುಗಳಾಗುವ ಅಂಜಿಕೆ ಬಹಳ ಉಂಟು. "ಮಾಘವನ್ನೋದಿ ಮಗಕೆಟ್ಟನು, ಕುಮಾರವನ್ನೋದಿ ಅಳಿಯಕೆಟ್ಟನು"ಎಂಬಂತೆ ಅವಿವೇಕಿಗಳಿಗೆ ದೈವೀಭಾವನೆಯು ನಿಜಸ್ವರೂಪವು ಗೊತ್ತಾಗದಿದ್ದರೆ ಅವರು ಅಡ್ಡಮಾರ್ಗವನ್ನು ಹಿಡಿಯಹತ್ತುವರು. ಹೆಂಡತಿಯಲ್ಲಿ ದೈವೀಭಾವನೆಯಿಡುವವನು ಆಕೆಯನ್ನು "ಭೋಜ್ಯೇಷು ಮಾತಾ ಶಯನೇಷು ರಂಭಾ ಕಾರ್ಯೇಷು ಮಂತ್ರಿ..." ಹೀಗೆ ತಿಳಿಯಬೇಕು.

---

## ೧೫ ನೆಯ ಖಂಡ—ದಾಸ್ಯವಿಮೋಚನ.

"ಹಂಗಿನರಮನೆಗಿಂತ ಇಂಗಡದ ಗುಡಿಲೇಸು, ಭಂಗಬಟ್ಟುಂಬ ಬಿಸಿಯನ್ನಕ್ಕಿಂತ ತಂಗುಳವೇ ಲೇಸು" ಎಂಬ ಸಮಾನಅರ್ಥಗಳುಳ್ಳ ಈ ನಾಣ್ಣುಡಿಗಳು ದಾಸ್ಯವೃತ್ತಿಯನ್ನು ಹೇಯವೃತ್ತಿಯೆಂದು ಬೋಧಿಸುತ್ತಿರುವವು: ದಾಸ್ಯವೃತ್ತಿಯಿಂದ ಪ್ರಗತಿಗೆ ಪೋಷಕಗ

ಳಾದ ಗುಣಗಳನ್ನು ಪಡೆಯುವ ಮಾರ್ಗವ್ರು ಕಟ್ಟಾಗುತ್ತದೆ. ಕೇವಲ ಯಜಮಾನನ ಅನುವರ್ತಿಯಾಗುವದರಿಂದ ಸೇವಕನ ಆತ್ಮವಿಶ್ವಾಸವು ಲೋಪವಾಗುತ್ತದೆ, ಕಾರ್ಯಾಸಕ್ತಿಯು ಕಡಿಮೆಯಾಗುತ್ತದೆ, ದುರಾಶೆಯು ಉತ್ಪನ್ನವಾಗುತ್ತದೆ, ಆಲಸ್ಯವು ಬೆಳೆಯುತ್ತದೆ, ಸದಭಿಮಾನವೂ, ದೈವೀಭಾವನೆಗಳೂ ರೂಪಾಂತರಿಸುತ್ತವೆ. ಹೀಗೆ ದಾಸ್ಯವೃತ್ತಿಯು ಒಂದಲ್ಲ, ಎರಡಲ್ಲ ಅನಂತದುರ್ಗುಣಗಳು ಸೇವಕನಲ್ಲಿ ಅಂಕುರಿಸಲು ಕಾಣೀಭೂತವಾಗುತ್ತದೆ.

ನಾವು ಇಲ್ಲಿಯವರೆಗೆ ವಿವೇಚಿಸುತ್ತ ಬಂದ ವಿವರಣೆಗಳಮೇಲಿಂದ ವಾಚಕರು ಗೊಂದಲದಲ್ಲಿ ಬಿದ್ದು 'ಒಬ್ಬರ ಆಳಾದಹೊರ್ತು ನಮ್ಮ ಹೊಟ್ಟೆತುಂಬುವ ಹಾಗಿಲ್ಲದ್ದರಿಂದ ನಾವು ಮುಂದೇನುಮಾಡಬೇಕು' ಎಂಬ ಕಲ್ಪನೆಯನ್ನು ಮಾಡಬಹುದು; ಆದರೆ ಅವರಿಗೆ ನಮ್ಮ ಉತ್ತರವಿಷ್ಟೇ; ಒಬ್ಬರ ಅಧೀನನಾಗಿದ್ದ ಮನುಷ್ಯನು ತಾನು ಎಷ್ಟರಮಟ್ಟಿಗೆ ಒಬ್ಬರನ್ನು ಆಶ್ರಯಿಸಿರುವೆನು, ತನ್ನಲ್ಲಿ ಪೌರುಷಪ್ರಿಯತೆಯೂ, ಸ್ವಾತಂತ್ರ್ಯಪ್ರಿಯತೆಯೂ ಎಷ್ಟರಮಟ್ಟಿಗಿರುವವು, ಎಂಬದನ್ನು ತೂಗಿ ನೋಡಿಕೊಳ್ಳಬೇಕು. ಮತ್ತು ತನ್ನ ವಿಚಾರಸ್ವಾತಂತ್ರ್ಯವನ್ನಾದರೂ ಕಾಯ್ದುಕೊಳ್ಳಲಿಕ್ಕೆ ಅರ್ಹನಾಗಬೇಕು. ಮನಸ್ಸಿನಿಂದ ಸ್ವಾತಂತ್ರ್ಯಸುಖವನ್ನು ಅನುಭವಿಸುತ್ತ ರಟ್ಟೆಯನ್ನು ಮುರಿದು ( ದುಡಿದು ) ಹೊಟ್ಟೆತುಂಬಿಕೊಳ್ಳುವದು ದಾಸ್ಯವಲ್ಲ.

ಒಬ್ಬನು ಮತ್ತೊಬ್ಬನನ್ನು ಆಶ್ರಯಿಸುವದರಲ್ಲಿ ಎರಡು ಪ್ರಕಾರಗಳುಂಟು. ಕೇವಲ ವ್ಯವಹಾರದ ಅಥವಾ ಗರಜಿನ, ಅಥವಾ ಕಾರ್ಯನಿಮಿತ್ಯದ ಮಟ್ಟಿಗೆ ಒಬ್ಬನು ಮತ್ತೊಬ್ಬನನ್ನು ಆಶ್ರಯಿಸಿ, ಉಳಿದ ಬಾಬುಗಳಲ್ಲಿ ಸ್ವತಂತ್ರನಾಗಿ ಇರತಕ್ಕವನು ಒಂದನೆಯ ವರ್ಗದವನು. ಕೇವಲ ಯಜಮಾನನ ಕೈಯೊಳಗಿನ ಕಲ್ಲಿನಂತೆ ಇದ್ದು, ತನ್ನ ನೈಸರ್ಗಿಕಪುರುಷ ಸ್ವಾತಂತ್ರ್ಯವನ್ನು ಅವನಿಗೊಪ್ಪಿಸಿ ತನ್ನ ಅತ್ಯಂತ ಶ್ರೇಷ್ಠವಾದ ಆಯುಷ್ಯವನ್ನು ಅವನ (ಅಂದರೆ ಯಜಮಾನನ) ಸೇವೆಯಲ್ಲಿ ಕಾಲಕಳೆಯುವವನು ೨ನೇ ವರ್ಗದವನು.

ಈ ಎರಡನೇ ವರ್ಗದವನೇ ನಿಜವಾದ ದಾಸ್ಯವೃತ್ತಿಯುವನು: ಇವನಲ್ಲಿ ಪೌರುಷವಿರುವದಿಲ್ಲ. ಕೇವಲ ಲಾಂಗೂಲಚಾಲನೆಯೇ ಇವನ ಉಚ್ಚತಮ ಧ್ಯೇಯವಾಗಿರುವದು.

ಈ ಎರಡನೇ ವರ್ಗದ ದಾಸ್ಯವನ್ನು ಮಹಾತ್ಮರಲ್ಲಿ ಇಲ್ಲವೆ ದೇವರಲ್ಲಿ ವಹಿಸಬೇಕಲ್ಲದೆ, ಮನುಷ್ಯರಲ್ಲಿ ವಹಿಸಲಾಗದು. ದೇವರಲ್ಲಿಯೂ, ಮಹಾತ್ಮರಲ್ಲಿಯೂ ವಹಿಸಿದ ದಾಸ್ಯವು ದಾಸನಿಗೆ ಉಚ್ಚಸ್ಥಿತಿಯ ಪ್ರಾಪ್ತಿಯನ್ನು ಮಾಡಿಕೊಡುತ್ತದೆ. ಮನುಷ್ಯರ ದಾಸ್ಯತ್ವವು ಅಧೋಗತಿಯನ್ನು ದೊರಕಿಸಿಕೊಡುತ್ತದೆ:

ಸ್ತ್ರೀಯರು ಜನ್ಮತಃ ಪರಾಧೀನರಾದ್ದರಿಂದ ಅವರು ಪುರುಷನಲ್ಲಿ ಅಂದರೆ ಗಂಡನಲ್ಲಿ ದೈವೀಭಾವನೆಯಿಂದ ನಡೆದು ಪುರುಷನ ಆಶ್ರಯದಿಂದ ಪುರುಷಾರ್ಥಗಳನ್ನು ಸಂಪಾದಿಸಿಕೊಳ್ಳಬೇಕಾಗುತ್ತದೆ. "ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ" (ಮನುಸ್ಮೃತಿ)

ಮುಖ್ಯವಾಗಿ ಈಗಿನ ದಾಸ್ಯವರ್ಗದ ಕೆಲವರಲ್ಲಿರುವ ದೊಡ್ಡ ದೋಷವೆಂದರೆ ಯಜಮಾನನ ಪ್ರಸನ್ನತೆಯನ್ನು ಪಡಕೊಳ್ಳುವದಕ್ಕಾಗಿ ಎಂಥ ನೀಚಕೆಲಸವನ್ನಾದರೂ ಮಾಡುವದು. ನೀಚಕೆಲಸವೆಂದರೆ (ಶಗಣೀಬಳಿಯುವ ಕೆಲಸವಲ್ಲ.) ಕೇಳಲಿಕ್ಕೆ ಹೇಳಲಿಕ್ಕೆ ಅಸಹ್ಯವಾದವುಗಳು. ಎಷ್ಟೋಜನ ನರಾಧಮರು ತಮ್ಮ ವರಿಷ್ಠರ ತೃಪ್ತಿಗಾಗಿ ತಮ್ಮ ಸಹಧರ್ಮಿಣಿಯಾದ ಹೆಂಡತಿಯನ್ನು ಸಹ ಅರ್ಪಿಸುವರಂತೆ! ಹಾಯ್! ಹಾಯ್! ಇದಕ್ಕೂ ಹೆಚ್ಚಿನ ನೀಚತನವನ್ನು ದಾಸ್ಯವರ್ಗದವರು ಇನ್ನೇನು ಮಾಡಬೇಕು?

ಒಟ್ಟಿನಮೇಲೆ ಕಾಯಾವಾಚಾಮನಸ್ಸಿನಿಂದ ಬಬ್ಬರ ಆಳು ಆಗುವದು ಅತಿ ನಿಂದ್ಯವಿರುವದರಿಂದ ತೇಜಸ್ವೀಪುರುಷನು ತನ್ನ ಕುಟುಂಬಪೋಷಣೆಗಾಗಿ ಮಂದಿಯ ಮೋರೆಯನ್ನು ನೋಡುತ್ತ ಕುಳಿತುಕೊಳ್ಳಬಾರದು. ಸದಾ ಉದ್ಯೋಗಿಯಾಗಿ ಅರ್ಥಾತ್ ಪ್ರಗತಿಪರನಾಗಿ ದೈನ್ಯವಿಲ್ಲದೆ ಖಂಬೀರತನದಿಂದ ಕಾಲಕ್ಷೇಪಮಾಡುವಷ್ಟು ಸಮರ್ಥನಾಗಬೇಕು. "ಅನಾಯಾಸೇನಮರಣಂ ವಿನಾದೈನ್ಯೇನ ಜೀವನಂ" ಎಂಬಿವು ತೇಜಸ್ವಿಗೆ ಲಭಿಸತಕ್ಕವಾಗಿವೆ.

ದಾಸ್ಯವಿಮೋಚನವು ವ್ಯಕ್ತಿಗೂ, ಸಮಾಜಕ್ಕೂ, ರಾಷ್ಟ್ರಕ್ಕೂ ಅತ್ಯವಶ್ಯವು. ಆದರೆ ಅದನ್ನು ಹ್ಯಾಗೆ ಮಾಡಿಕೊಳ್ಳಬೇಕೆಂಬದನ್ನು ಮಾತ್ರ ಬಹು ಸ್ವಲ್ಪ ಜನರಹೊರತು ಉಳಿದವರಾರಿಗೂ ಗೊತ್ತಿಲ್ಲ. ಪ್ರಗತಿಹೊಂದುವವನು, ಅಂದರೆ ದಾಸ್ಯವಿಮೋಚನಮಾಡಿಕೊಳ್ಳುವವನು ಮೇಲೆ ಹೇಳಿದ ಎಲ್ಲ ಗುಣಗಳನ್ನು ತನ್ನಲ್ಲಿ ಹೆಚ್ಚುಹೆಚ್ಚಾಗಿ ಸಂಗ್ರಹಿಸಬೇಕು. ಆ ಗುಣಗಳು ಪರಿಪೂರ್ಣವಾದವಾದಂತೆ, ಪ್ರಗತಿಯು ಆಗಿ, ದಾಸ್ಯವಿಮೋಚನೆಯಾಗುವದು; ಸಂಶಯವಿಲ್ಲ.

## ಉಪಸಂಹಾರ.

ಪೂರ್ವಸಂಚಯದ ಪ್ರಗತಿಪ್ರವರ್ತಕನಿಗೆ ಪ್ರಗತಿಮಾರ್ಗಗಳನ್ನು ಬೇರೆಯವರು ತೋರಿಸುವ ಕಾರಣವಿಲ್ಲ; ಆದರೆ ಆ ಸಂಚಯವು ಸರ್ವರಿಗೂ ಇರುತ್ತದೆಯೆಂದು ಭಾವಿಸಿನಡೆಯುವದು ಮಾತ್ರ ಯೋಗ್ಯವಲ್ಲದ್ದರಿಂದ, ಪ್ರಗತಿಮಾರ್ಗಗಳನ್ನು ಕಂಡುಕೊಳ್ಳಿರೆಂದು ಸಾಮಾನ್ಯವಾಗಿ ಹೇಳುವದು ತಪ್ಪಾಗಲಾರದು.

ಪ್ರಗತಿಮಾರ್ಗಗಳು ಮೇಲೆ ಬರೆದವವಿಷ್ಟೇ ಇವೆಯೆಂದು ನಿಷ್ಕರ್ಷವಾಗಿ ಹೇಳಲಾಗುವದಿಲ್ಲ. ಇವುಗಳಲ್ಲದೆ ಇನ್ನೂ ಅನೇಕ ಮಾರ್ಗಗಳಿಂದ ಪ್ರಗತಿಹೊಂದಬಹುದಾಗಿದೆ. ಆದರೆ ಆವೆಲ್ಲ ಮಾರ್ಗಗಳು ಈಗ ವಿವರಿಸಿರುವ ಸ್ವಾತಂತ್ರ್ಯಪ್ರೀತಿ, ದೃಢನಿಶ್ಚಯ, ರೂಢಿವಿನಾಶಕ, ಸಾಧನಾಭಾವ, ಪ್ರತಿಕೂಲತೆ, ಸಮಯಸಾಫಲ್ಯ, ಆಶ್ರಯಚ್ಛೇದನ, ಸಂಕಲ್ಪಶಕ್ತಿ, ಸಾಮರ್ಥ್ಯಸಂಚಯ, ಉಪಹಾಸೋತ್ತೇಜನ, ಆಸ್ಥೆ-ಕಾಳಜಿ, ಪ್ರವಾಸ, ಪ್ರಸನ್ನತೆ, ದೈವೀಭಾವನೆ, ದಾಸ್ಯವಿಮೋಚನೆ ಮುಂತಾದ ಪ್ರಗತಿಪಥಗಳಲ್ಲಿಯೇ ಹೆಚ್ಚುಕಡಿಮೆ ಮಾನದಿಂದ ಅಡಕವಾಗಿರುತ್ತವೆ. ಹ್ಯಾಗೇಆಗಲಿ, ಯಾವದೇ ಮಾರ್ಗವನ್ನು ಹಿಡಿದೇಆಗಲಿ, ಮನುಷ್ಯನು ಪ್ರಗತಿಹೊಂದಲ್ಕ್ಕ [illegible]ಕ್ಕದ್ದು. ಇಲ್ಲಿ ಮಾರ್ಗಗಳ ಭೇದಗಳಿಗೆ ಮಹತ್ವವಿರದೆ, ಪ್ರಗತಿಗೆ ಮಹತ್ವವಿರುತ್ತದೆ.

ಸಂಪೂರ್ಣ.